
# ಅಖಿಲ ಭಾರತ ಪತ್ರಿಕೆ

ಫೆಬ್ರವರಿ 2023



## ಆಧ್ಯಾತ್ಮಿಕ ಸಾಧನಾ ಪಥದ ಮಾರ್ಗದರ್ಶಿ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

ಅವಳ ಪದನ್ಯಾಸ ವ್ಯಾಪ್ತಗೊಳಿಸುತಿದೆ ಯುಗ–ಯುಗದ ಸರಣಿ–ಸರಣಿ
ಅವಳ ಚಿಂತನಕೆ ಆಕಾರವಿತ್ತ ಕಾಲಗಳ ಲೀಲೆ– ಏಣಿ
ಈ ಸರ್ವಸೃಷ್ಟಿ ಈ ಸರ್ವವೃಷ್ಟಿ ಈ ಸರ್ವದೃಷ್ಟಿಯೆಲ್ಲ
ಅವಳ ವಾತ್ಸಲ್ಯ ಸ್ಪಂದದಲಿ ತುಂಬಿ ಸಾವಿರದ ವಿಧಿಗಳೆಲ್ಲ.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 14 ಪುಟ 295)**

# ಅಖಿಲ ಭಾರತ ಪತ್ರಿಕೆ

**ಫೆಬ್ರವರಿ 2023**

ಸಂಪುಟ: 33 ಸಂಚಿಕೆ: 02



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com



**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


## ಪರಿವಿಡಿ

# ಆಧ್ಯಾತ್ಮಿಕ ಸಾಧನಾ ಪಥದ ಮಾರ್ಗದರ್ಶಿ

*ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು*


**ಪ್ರಸ್ತಾವನೆ**

**ಅಸ್ತಿತ್ವಕ್ಕೆ ಏಕೈಕ ಕಾರಣ** 3
ಅನು: ಶ್ರೀ ಪುಟ್ಟು ಕುಲಕರ್ಣಿ

**ಭಾಗ 1**

**ಆಧ್ಯಾತ್ಮಿಕತೆ ಎಂದರೇನು?** 7
ಅನು: ಶ್ರೀ ಪುಟ್ಟು ಕುಲಕರ್ಣಿ

**ಭಾಗ 2**

**ಆಧ್ಯಾತ್ಮಿಕ ಸಾಧನಾ ಪಥದ ಮಾರ್ಗದರ್ಶಿ** 9
ಅನು: ನಾಗಜ್ಯೋತಿ ಮಾನವಿ

**ಭಾಗ 3**

**ದೈನಂದಿನ ಜೀವನದಲ್ಲಿ ಆಧ್ಯಾತ್ಮಿಕತೆ** 17
ಅನು: ಕಿಶೋರ

**ಪರಿಶಿಷ್ಟ**

**ದಿಲೀಪ ಕುಮಾರ ರಾಯ ಅವರ ಅಂತಿಮ ದಿನಗಳು** 21
ಅನು: ಡಾ॥ ಮಹಾದೇವ ಸಕ್ರಿ

**ಶ್ರೀ ಅರವಿಂದರ ‘ತಾಂತ್ರಿಕಸಿದ್ಧಿ ಪ್ರಕರಣಂ’** 30
ಅನು: ಪುಟ್ಟು ಕುಲಕರ್ಣಿ

**‘ಕುಲಾರ್ಣವ ತಂತ್ರ’ ಮತ್ತು ‘ಸಾವಿತ್ರಿ’** 35
ಅನು: ಶ್ರೀ ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ**
**‘ಸ್ವಪ್ನ ಪ್ರಪಂಚ ಮತ್ತು ಜಾಗ್ರತ ಪ್ರಪಂಚ’** 44
ಅನು: ಶ್ರೀ ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ ‘ಸಾವಿತ್ರಿ’** 52
ಅನು: ಶ್ರೀ ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 53

# ಸಂಪಾದಕರ ಟಿಪ್ಪಣಿ

'ಪ್ರಾರ್ಥನೆಗಳು ಮತ್ತು ಧ್ಯಾನಗಳು' ಎನ್ನುವ ಗ್ರಂಥವು ಮುದ್ರಣಗೊಳ್ಳುತ್ತಿರುವ ಹಂತದಲ್ಲಿ, ಶ್ರೀಮಾತೆಯವರು ಈ ಕೆಳಕಂಡ ಟಿಪ್ಪಣಿಗಳನ್ನು ಅಡಕಗೊಳಿಸಿದರು; "ಯೋಗದ ನಿಯಮಾನುಸಾರವಾಗಿಯೇ ನಿಷ್ಠೆಯಿಂದ ಅನ್ವಯಗೊಳಿಸಿಕೊಳ್ಳುತ್ತ ಇರುವಾಗ ಆಗ ಬರೆಯಾಗಿರುವ ದಿನಚರಿಯ ಭಾಗಗಳ ತಾತ್ಪರ್ಯವನ್ನು ಹೊಂದಿದೆ. ಇದು ಆಧ್ಯಾತ್ಮ ಸಾಧಕರಿಗೆ ಅತ್ಯಂತ ಪ್ರಮುಖವಾಗಿರುವ ಮೂರು ವಿಭಾಗಗಳನ್ನು ನಿರ್ದೇಶಿಸುತ್ತಿದೆ; ಯಾರು ಸ್ವಯಂಸಾಧನೆಯಲ್ಲಿ ತೊಡಗಿ–ಕೊಂಡಿದ್ದಾರೆಯೋ, ಮತ್ತೆ ದಿವ್ಯತ್ವವು ನಿರ್ದೇಶಿದ ಕಡೆಗೆ ಸಾಗಲು ಇಚ್ಛಿಸುವವರಿಗೆ ಮತ್ತು ಈ ದಿವ್ಯತ್ವದೆಡೆಗೆ ಸಾಗುವ ಪಥವನ್ನು ಕಂಡುಕೊಳ್ಳುವವರಿಗೆ, ಯಾರು ಸಂಪೂರ್ಣವಾಗಿ ತಮ್ಮನ್ನು ತಾವೇ ಆ "ದಿವ್ಯತ್ವದ ಕಾರ್ಯಕ್ಕಾಗಿ ಅಭೀಪ್ಸೆಯನ್ನು ಹೊಂದಿರುತ್ತಾರೆಯೋ ಅವರಿಗಾಗಿ ರೂಪಿಸಲ್ಪಟ್ಟಿದೆ."

ಇಲ್ಲಿ, ಭಾಗ 2 ರಲ್ಲಿ ಕೆಲವು ಸಂಗತಿಗಳನ್ನು ಈ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

## ಪ್ರಸ್ತಾವನೆ

# ಅಸ್ತಿತ್ವಕ್ಕೆ ಏಕೈಕ ಕಾರಣ

**– ಅನುವಾದ: ಪುಟ್ಟು ಕುಲಕರ್ಣಿ**

ಇಲ್ಲಿ ಪರಿಗಣಿಸಲೇಬೇಕಾಗಿರುವ ಏಕಮೇವ ಸಂಗತಿ ಎಂದರೆ 'ಇದು ದಿವ್ಯತ್ವ'ವಾಗಿದೆ; ಅವನದೇ ಇಚ್ಛೆಯಾಗಿದೆ; ಅವನ ಅವತರಣವಾಗಿದೆ, ಅವನದೇ ಅಭಿವ್ಯಕ್ತಿಯಾಗಿದೆ. ಇದೆಲ್ಲವೂ ಒಂದೇ ಆಗಿ, ಇಲ್ಲಿರುವದು ಏಕೆಂದರೆ ಇದನ್ನು ಬಿಟ್ಟು ಬೇರೆ ಏನೂ ಇಲ್ಲವೇ ಇಲ್ಲ. ಎಲ್ಲಿಯವರೆಗೂ 'ಸ್ವ'–ಭಾವ, ಅಹಂಕಾರ, ವ್ಯಕ್ತಿತ್ವದ ಪ್ರಾಮುಖ್ಯತೆ ಇವೆಲ್ಲವೂ ಪ್ರವೇಶ ಪಡೆದುಕೊಂಡವೆಂದರೆ, ಅದು ನೇರವಾಗಿ ತೋರಿಸುತ್ತಿರುವದೇನೆಂದರೆ, ಯಾವುದು ಘಟಿಸಬೇಕಾಗಿತ್ತೋ ಅದಿನ್ನೂ ಘಟಿಸಿಯೇ ಇಲ್ಲ ಎನ್ನುವದನ್ನು ಮಾತ್ರ. ಆದರೆ ಈ ರೀತಿಯ ಗುರಿಯನ್ನು ಸಾಧಿಸಬೇಕೆಂದು ಯಾರ ಉದ್ದೇಶವೂ ಇರುವದಿಲ್ಲ; ಇರಬಾರದು. ಹಾಗೆಂದು ಕ್ಷಣಾರ್ಧದಲ್ಲಿಯೇ ನಿಗದಿತ ಗುರಿಯು ಲಭ್ಯವಾಗುತ್ತದೆ ಎಂದೂ ನಾನು ಹೇಳುತ್ತಿಲ್ಲ. ಆದರೂ ಈ ಸಂಗತಿ ಮಾತ್ರ ನಿರೀಕ್ಷಿತವಿರುವ ಆ ಸತ್ಯವೇ ಆಗಿದೆ.

ಸರ್ವೇಸಾಮಾನ್ಯ ಸಂಗತಿಯ ಹಾಗೆ ಇರುವ ವಿಷಯವೆಂದರೆ, ಈ ಸಂದರ್ಭಗಳಲ್ಲಿ – ಅದರಲ್ಲೂ ಆಧ್ಯಾತ್ಮಿಕತೆಯ ವಲಯಗಳಲ್ಲಿ ತೊಡಗಿಸಿ–ಕೊಂಡಿರುವ ಸಾವಿರಾರು ಜನರು ಇದ್ದಾರೆ (ಇವರಲ್ಲಿ ಆಧ್ಯಾತ್ಮಿಕ ಜೀವ ಶೈಲಿ ಮತ್ತು ಯೋಗಗಳಲ್ಲಿ ತೊಡಗಿಸಿಕೊಂಡವರಿದ್ದಾರೆ). ಆದರೆ ಬಹುತೇಕವಾಗಿ ಇವರೆಲ್ಲ ತಮ್ಮ ತಮ್ಮ ವೈಯಕ್ತಿಕ ಕಾರಣಗಳಿಂದಾಗಿ, ಅದೂ ತೀರ ತೀರ ವೈಯಕ್ತಿಕ ಕಾರಣದಿಂದಾಗಿ, ಬಹುತೇಕವಾಗಿ ಸಾಂಸಾರಿಕ ಜೀವನದಲ್ಲಿ ಬೇಸತ್ತು, ಈ ರೀತಿಯ ಜೀವನ ವ್ಯವಸ್ಥೆಗೆ ಬಂದಿರುತ್ತಾರೆ. ಮತ್ತೆ ಕೆಲವರು ಮತ್ತೂ ಹೆಚ್ಚಿನ ಜ್ಞಾನವನ್ನು ಪಡೆದುಕೊಳ್ಳುವ ಇಚ್ಛೆಯಿಂದ ಬಂದಿರುತ್ತಾರೆ. ಮತ್ತೆ ಕೆಲವರು ಆಧ್ಯಾತ್ಮಿಕವಾಗಿ ಶ್ರೇಷ್ಠರು ಎನಿಸಿಕೊಳ್ಳುವ ಸಲುವಾಗಿ ಬಂದಿರುತ್ತಾರೆ. ಮತ್ತೆ ಕೆಲವರು ಇಂತಹ ವಿಷಯಗಳನ್ನು ಮತ್ತೆ ಇತರರಿಗೂ ತಿಳಿಸಿಕೊಡಬೇಕೆಂಬ–ಉಪದೇಶಿಬೇಕೆಂಬ ಇಚ್ಛೆಯಿಂದ ಬಂದವರಾಗಿರುತ್ತಾರೆ. ಹೀಗಾಗಿ ಈ ಯೋಗದ ಕಡೆಗೆ ಬರಲು ಸಾವಿರಾರು ಸಾವಿರಾರು ಕಾರಣಗಳಿವೆ. ಆದರೆ ಅತ್ಯಂತ

ಗಮನಾರ್ಹ ಸಂಗತಿ ಎಂದರೆ, ಸ್ವತ್ವವನ್ನು ಅಂದರೆ 'ಸ್ವ'ಭಾವವನ್ನು ದಿವ್ಯತ್ವಗೊಳಿಸುವದು ಮುಖ್ಯ ಸಂಗತಿಯಾಗಬೇಕು. ಒಮ್ಮೆ ಆ ದಿವ್ಯತ್ವಕ್ಕೆ ಸಮರ್ಪಿಸಿಕೊಂಡಲ್ಲಿ ಅದು ತನ್ನ ಇಚ್ಛೆಯಂತೆಯೇ ನಿಮ್ಮನ್ನು ಪರಿವರ್ತನಗೊಳಿಸುತ್ತದೆ. ಇದು ಪರಮ ಶುದ್ಧವೂ ಮತ್ತು ನಿರಂತರತೆಯನ್ನು, ಸ್ಥಿರತೆಯನ್ನು ತರುತ್ತದೆ. ಇಷ್ಟೆಲ್ಲಾ ಇದ್ದಾಗ, ಬಹುತೇಕವಾಗಿ ಈ ಉದ್ದೇಶದಿಂದ ಈ ಮಾರ್ಗದಲ್ಲಿ ತಮ್ಮನ್ನು ರೂಪುಗೊಳಿಸಿಕೊಳ್ಳುತ್ತಿಲ್ಲ ಎನ್ನುವದು ಮಾತ್ರ ಸತ್ಯ ಸಂಗತಿಯಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/189–90 – ಶ್ರೀಮಾತೆ**

ನಮ್ಮ ಬರೀ ಮೇಲ್ತೋರಿಕೆಯ, ಅತ್ಯಂತ ಕ್ಷೀಣ ಮತ್ತು ಛಿದ್ರಛಿದ್ರ ಸ್ವರೂಪದಲ್ಲಿಯೇ ಇರುವ ಮಾನವನ ಚಿಂತನಾ ವಿಧಾನವನ್ನು, ದೃಷ್ಟಿಕೋನವನ್ನು, ಸಂವೇದನೆಗಳನ್ನು ಜೊತೆಗೆ ಅತ್ಯಂತ ಅನುಭವದಾಳದಿಂದ ಮತ್ತು ಆಧ್ಯಾತ್ಮಿಕ ಚೇತನದ ಅಂತರಾಳದಲ್ಲಿಯೇ ಅಸ್ತಿತ್ವ ಹೊಂದಿ, ಜೊತೆಗೆ ಸಮಗ್ರತೆಯಲ್ಲಿಯೇ ಆಂತರ್ಯವೂ ಆಗಿದ್ದುಕೊಂಡು, ಬಾಹ್ಯದ ಕರಣಗಳಲ್ಲಿ ಅಸ್ತಿತ್ವ ಹೊಂದಿರುವ ಬದುಕು ಸಹಿತ ದಿವ್ಯತ್ವದ ಪಥದಲ್ಲಿಯೇ ಸಾಗುವದು ಜೀವನದ ಪರಮ ಧ್ಯೇಯವಾಗಿರಬೇಕು. ಈ ಪರಮೋಚ್ಚವಾಗಿರುವ ಗಮ್ಯದೆಡೆಗೆ ಇರುವ ಯಾನವು, ನಾವು ನಮ್ಮನ್ನು ಎಷ್ಟೊಂದು ನಿಸರ್ಗ ಸಹಜವಾಗಿಯೇ ನಮ್ಮನ್ನು ಸಮರ್ಪಣೆ–ಗೊಳಿಸುತ್ತೇವೆ ಎನ್ನುವದನ್ನು ಆಧರಿಸಿದೆ. ನಮ್ಮೊಳಗೆ ಇರುವದೆಲ್ಲವನ್ನೂ ಆ ದಿವ್ಯತ್ವಕ್ಕೆ ಅರ್ಪಣೆ ಮಾಡಬೇಕಿದೆ. ಏಕೆಂದರೆ ಆ ದಿವ್ಯವು ನಮ್ಮಂತರಂಗದಲ್ಲಿಯೇ ಇದೆ. ಇದು ವಿಶ್ವಾತ್ಮವಾಗಿ ಮತ್ತು ಆ ತುರೀಯಾತೀತ ಪರಮೋಚ್ಚವಾಗಿಯೂ ಇದೆ. ತಾದಾತ್ಮ್ಯತೆಯ ತುರೀಯಾಸ್ಥೆಯಲ್ಲಿನ ನಮ್ಮ ಇಚ್ಛೆ, ನಮ್ಮ ಹೃದಯ ಮತ್ತು ನಮ್ಮ ಚಿಂತನಗಳು ಎಲ್ಲವೂ ಆ ಏಕ ಮತ್ತು ವೈವಿಧ್ಯತೆಯ ಸ್ವರೂಪದ ದಿವ್ಯತ್ವದಲ್ಲಿ, ನಮ್ಮ ಸಂಪೂರ್ಣ ಅಸ್ತಿತ್ವವು ಸಹಿತ ಏಕಾಗ್ರತೆಯ ಪರಮದಲ್ಲಿ ಇರುವಾಗ, ಇದು ಒಮ್ಮೊಮ್ಮೆ ಪಥವಿಚಲನೆಯ ಸಂಚಲನವಾಗಿ ಬಿಡಬಹುದು. ಹೀಗಾಗಿ, ನಮ್ಮ 'ಅಹಂ'ನ್ನು, ನಾವು ಪರಿಭಾವಿಸಿರುವದಕ್ಕಿಂತಲೂ ಎಷ್ಟೋ ಪ್ರಮಾಣದಲ್ಲಿ ಅಧಿಕವಾಗಿಯೇ

ಇರುವದರಿಂದ, ಇದನ್ನು ಸಂಪೂರ್ಣವಾಗಿ ತ್ಯಜಿಸಿದಲ್ಲಿ ಮಾತ್ರ ನಾವು ಸಮರ್ಪಣೆ ಸಾಧ್ಯವಾಗುತ್ತದೆ.


**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/89**

ಒಂದು ವೇಳೆ ಈ ಶಾಶ್ವತದ ಮತ್ತು ಅನಂತಾನಂತದ ಆಧ್ಯಾತ್ಮಿಕ ಸತ್ಯದ ಎಡೆಗೆ ನಾವು ಉದ್ದೇಶಪೂರ್ವಕವಾಗಿಯೇ ಪ್ರವೇಶಿಸಲು ಸಾಧ್ಯವಾಗದಿದ್ದಲ್ಲಿ, ಮತ್ತೆ ಆ ನಿಯಾಮ ಭಗವಂತನ ಕರಗಳ ಕುರಿತು ನಾವು ವಿಶ್ವಾಸಪೂರಕವಾದ ಧೈರ್ಯವನ್ನು ಹೊಂದದೇ ಇದ್ದಲ್ಲಿ, ಸರ್ವ ಜೀವಿಗಳಿಗೂ ಮಿತ್ರನಾಗಿರುವವನಲ್ಲಿ ನಮ್ಮ ಸರ್ವ ಬೌದ್ಧಿಕ ಮಿತಿಗಳನ್ನು ಮತ್ತು ಮಾನಕಗಳನ್ನು ಬಿಡಲೇಬೇಕಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/208 – ಶ್ರೀ ಅರವಿಂದರು**

ನಾವು ಅಪೇಕ್ಷಿಸುತ್ತಿರುವ ಆ ದಿವ್ಯತ್ವವೇನೂ ನಮಗೆ ಸಿಗದ ಹಾಗೇ ಗೂಢವಾಗಿಲ್ಲ ಜೊತೆಗೆ ಲಭ್ಯವಾಗದಂತೇನೂ ಇರುವದಿಲ್ಲ. ಅವನು ಇದನ್ನೆಲ್ಲವನ್ನೂ ಸೃಷ್ಟಿಸಿರುವ ಉದ್ದೇಶವೆಂದರೆ ನಾವು ಅದನ್ನು, ಅವನನ್ನು ಶೋಧಗೊಳಿಸಿಕೊಳ್ಳಬೇಕು ಎನ್ನುವ ಉದ್ದೇಶದಿಂದಲೇ ಎನ್ನುವದು ಮುಖ್ಯ ಸಂಗತಿ. ನಮ್ಮ ವೈಯಕ್ತಿಕ ಅಥವಾ ನಮ್ಮ 'ಸ್ವ'ಭಾವದ ರೂಪಾಂತರಣದ ಮೂಲಕ 'ಅವನನ್ನು' ಅರಿತುಕೊಳ್ಳುವ, ಅವನೊಡನೆ ಸ್ಪಂದಗೊಳ್ಳುವ, ಅಂತಿಮದಲ್ಲಿ ಅವನ್ನು ಪ್ರಜ್ಞಾಪೂರ್ವಕವಾಗಿಯೇ ಅವತರಣ–ಗೊಳಿಸಿಕೊಳ್ಳಬೇಕಾಗಿದೆ. ನಾವು ನಮ್ಮೊಳಗೇ ಮನನ ಮಾಡಿಕೊಳ್ಳಬೇಕಾಗಿರುವ ಸಂಗತಿ ಇದಾಗಿದೆ. ಇದೇ ನಮ್ಮ ಅಸ್ತಿತ್ವದ ನೈಜ ಉದ್ದೇಶವೂ ಅಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/347 – ಶ್ರೀಮಾತೆ**



**ಅಜ್ಞಾನಘನವು ಕ್ರಿಯೆಗಿಳಿಯುತಿರಲು ಅದಕಿಲ್ಲಿ ಇವನು ಸ್ಥಿತನು**
**ಮರಣವನು ಮರೆತ ಈ ಜಗವು ಈಗ ಅದಕಿವನು ನಿತ್ಯ ಸ್ಥಿತನು**

**– ಸಾವಿತ್ರಿ ಪುಟ 681**

## ಭಾಗ 1

# ಆಧ್ಯಾತ್ಮಿಕತೆ ಎಂದರೇನು?

**– ಅನುವಾದ: ಪುಟ್ಟು ಕುಲಕರ್ಣಿ**

**ಆಧ್ಯಾತ್ಮಿಕತೆ ಎಂದರೆ...**

ನಮ್ಮ ಮನಸ್ಸು ಮತ್ತು ನಮ್ಮ ಜೀವನಕ್ಕಿಂತ ಮಹತ್ತರವಾಗಿರುವದನ್ನು ಗುರುತಿಸುವಿಕೆಯಾಗಿದೆ, ಪರಮ ಪಾವಿತ್ರ್ಯ ಪ್ರಜ್ಞೆಯನ್ನು ಪದೆಡುಕೊಳ್ಳುವದಾಗಿದೆ, ಮಹತ್ತರಗೊಳ್ಳುವದಾಗಿದೆ, ನಮ್ಮ ಮಾನವ ಸಹಜ ಬೌದ್ಧಿಕ ಮಾನಸಿಕ ಮತ್ತು ಪ್ರಾಣಿಕದ ಕ್ಷೀಣ ಭಾವದ ಆಚೆ ಮತ್ತು ಈ ಭವಬಂಧನದದಿಂದ ಆಚೆ ಆಚೆ ಇರುವ ದಿವ್ಯತ್ವವನ್ನು, ಅದೂ ಸಹಿತ ಅವನಂತರಂಗದಲ್ಲಿಯೇ ರಹಸ್ಯ–ವಾಗಿರುದರಿಂದ, ಅದನ್ನು ಪಡೆಯುವ ಅಭೀಪ್ಸೆಯಾಗಿದೆ, ಮಾನವನ ಕ್ಷೀಣತೆಯ ವಲಯದಿಂದ ಪುಟಿದೆದ್ದು, ಆರೋಹಗೊಳ್ಳುವ ಆ ಆತ್ಮದ ಅಭೀಪ್ಸೆಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/121**

ಆಧ್ಯಾತ್ಮಿಕತೆಯ ಅರ್ಥವೆಂದರೆ – ಇದು ನಮ್ಮ ಮಾನವ ಬದುಕಿನಲ್ಲಿಯೇ ಇರುವ ಮಹತ್ತರವಾದ ಮತ್ತು ನಿತ್ಯ ನೂತನವಾಗಿಯೇ ಸಂಸ್ಥಾಪನೆಗೊಂಡಿರುವ ಅವನದೇ ನೈಜತ್ವವಾಗಿದೆ, ಅವನ ಅಂತರಂಗದ ಅಂತರಾಳವಾಗಿದೆ, ಔನ್ನತ್ಯಪೂರ್ಣವಾಗಿದೆ ಮತ್ತು ಸುವಿಶಾಲವಾದ 'ಸ್ವ'ತ್ವವನ್ನೂ ಮತ್ತು ಚೈತನ್ಯವಾಗಿದೆ. ಈ ಮೂಲಕವಾಗಿಯೇ ನಾವು ಅಸಿತ್ವದ ಸರ್ವಸ್ವವನ್ನೂ ಪರಿಗ್ರಹಿಸುತ್ತೇವೆ. ಇದು ಪ್ರಗತಿಗೊಳ್ಳುವ ಮೂಲಕವೇ ರೂಪಾಂತರಣಗಳ ಮೂಲವಾಗಿರುವ ಈ ವಿಶ್ವದ ಆ ಸ್ವಂತಿಕೆಯಾಗಿದೆ. ಅದೂ ಅಲ್ಲದೇ ಇದು ಅವನದೇ ಆದ ಕ್ಷೇತ್ರವೂ ಆಗಿದ್ದು, ಇಲ್ಲಿಯೇ ಆ ದಿವ್ಯತ್ವದ ಸಂವೇದನೆಯೂ, ಅನುಭವವೂ ಲಭ್ಯಗೊಳ್ಳುತ್ತದೆ. ಇಲ್ಲಿ ಸಾಮರ್ಥ್ಯಗಳೂ ಸಹಿತ ಔನ್ನತ್ಯದಲ್ಲಿಯೇ ವಿಕಾಸಗೊಂಡಿವೆ. ಈಗ ಇರುವ ಅಪರಿಪೂರ್ಣವಾದ ರೂಪಗಳಿಗಿಂತ ಒಂದು ಪರಿಪೂರ್ಣ ದಿವ್ಯತ್ವದ ಮೂರ್ತಿಯಾಗಿ ಪರಿವರ್ತನೆ–ಗೊಳ್ಳುವದಾಗಿದೆ. ಕೇವಲ ನೋಟಕ್ಕೆ ಮಾತ್ರ ಲಭ್ಯವಾಗದೇ, ಅದನ್ನು ಜೀವಿಸಲೂ ಸಹಿತ ಸಾಧ್ಯವಾಗುತ್ತದೆ. ಅವನ ಜೀವನದಲ್ಲಿಯೇ ಅವನು ಮಹತ್ತರವಾದುದನ್ನು ಸಾಧಿಸಿಕೊಳ್ಳಲು ಸಾಧ್ಯವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 26/270**

ಈ ಪರಿಪೂರ್ಣ ದಿವ್ಯತ್ವವು ಸದಾ ನಮ್ಮ ಊರ್ಧ್ವದಲ್ಲಿ ಇದ್ದೇ ಇರುತ್ತದೆ; ಆದರೆ, ಮಾನವನಿಗೆ ದಿವ್ಯತ್ವದ ಪ್ರಜ್ಞೆಯನ್ನು ಹೊಂದಲು ಮತ್ತು ಅದೇ ಭಾವದೊಳಗೆ ಕ್ರಿಯೆಗಿಳಿಯಲು ಮತ್ತು ಆಂತರಂಗಿಕವಾಗಿ ಹಾಗು ಬಹಿರಂಗವಾಗಿ ದಿವ್ಯತ್ವದಲ್ಲಿಯೇ ವಾಸಿಸುವದನ್ನೇ ಆಧ್ಯಾತ್ಮಿಕತೆ ಎಂದರ್ಥ.

ಶಬ್ದಗಳಲ್ಲಿ ರೂಪಿಸಲ್ಪಟ್ಟಿರುವ ಬಹುತೇಕ ಅಲ್ಪಾರ್ಥಗಳು. ಇವು ಕೇವಲ ಅಸಮರ್ಪಕವಾಗಿ ರೂಪುಗೊಂಡಿರುವ ಅವಘಡಗಳೊ ಅಥವಾ ವಂಚನೆಗಳೊ ಆಗಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/262–63 – ಶ್ರೀ ಅರವಿಂದರು**

ಸರ್ವೇ ಸಾಮಾನ್ಯವಾದ ಜೀವನದಲ್ಲಿ, ಒಬ್ಬ ಸಾಮಾನ್ಯ ಮಾನವನ ಪ್ರಜ್ಞೆಯು, ತನ್ನದೇ ನೈಜ ಅಸ್ತಿತ್ವದಿಂದ ಮತ್ತು ದಿವ್ಯತ್ವದಿಂದ ವಿಘಟಿತಗೊಂಡು ಬೇರೆಯಾಗಿರುತ್ತದೆ. ಜೊತೆಗೆ ಇದು ಮಾನವನ ಮನೋಕೇಂದ್ರಿತ ಜೀವನ ಮತ್ತು ದೈಹಿಕ ಆಕಾಂಕ್ಷೆಗಳು ತಮದ ನಿಯಮಕ್ಕೇ ಸಿಲುಕೊಂಡೇ ಇರುವ ಸಾಮಾನ್ಯ ಹವ್ಯಾಸಗಳಿಂದ ನಿರ್ದೇಶಿಲ್ಪಡುತ್ತಿದೆ...

ಇದಕ್ಕೆ ಪ್ರತಿಯಾಗಿ, ಆ ಆಧ್ಯಾತ್ಮಿಕ ಜೀವನವು, ಪ್ರಜ್ಞೆಯ ಪರಿವರ್ತನದಿಂದಲೇ ನಿರ್ದೇಶಿಸಲ್ಪಟ್ಟು, ಇದು ಅಜ್ಞಾನದಲ್ಲಿ ಸಿಲುಕಿದ ಮತ್ತು ತನ್ನ 'ಸ್ವ'ತ್ವದಿಂದ ದೂರವಿದ್ದುಕೊಂಡ ಸಾಮಾನ್ಯ ಪ್ರಜ್ಞೆಯಿಂದ, ಪರಿವರ್ತನಗೊಂಡಿರುತ್ತದೆ. ಇಲ್ಲಿಯೇ ನಾವು ನೈಜ ಅಸ್ತಿತ್ವವನ್ನು ಕಾಣುತ್ತೇವೆ. ಇಲ್ಲಿಯೇ ನಾವು ನೇರವಾಗಿ ಆ ದಿವ್ಯತ್ವದೊಡನೆ ಸಂಪರ್ಕ ಹೊಂದಲು ಮತ್ತು ಅದರೊಡನೆ ಒಂದಾಗಲು (ಲೀನವಾಗಲು) ನಿರ್ದೇಶನ ಪಡೆದುಕೊಳ್ಳುತ್ತದೆ.

ಆಧ್ಯಾತ್ಮಿಕತೆಯನ್ನು ಅಪೇಕ್ಷಿಸುತ್ತಿರುವ ಸಾಧಕರಿಗೆ, ಈ ಅವನು ಅಪೇಕ್ಷಿಸುತ್ತಿರುವ ಏಕೈಕ ವಿಷಯವಾಗಿದ್ದು ಅದು 'ಪ್ರಜ್ಞೆಯ ಪರಿವರ್ತನೆ'ಯೇ ಆಗಿರುತ್ತದೆ ವಿನಾ ಅನ್ಯಥಾ ಅಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/419**

## ಭಾಗ 2

# ಆಧ್ಯಾತ್ಮಿಕ ಸಾಧನಾ ಪಥದ ಮಾರ್ಗದರ್ಶಿ

**ನವೆಂಬರ್ 28, 1912**

**– ಅನುವಾದ: ನಾಗಜ್ಯೋತಿ ಮಾನವಿ**

ನಮ್ಮ ಬಾಹ್ಯ ಜೀವನ, ಪ್ರತಿದಿನದ ಚಟುವಟಿಕೆಗಳು, ಪ್ರತೀ ಕ್ಷಣವೂ ಹಾಗೂ ನಾವು ಧ್ಯಾನ–ಮನಗಳಿಗೆ ನೀಡುವ ಸಮಯವು ಇವು ಒಂದಕ್ಕೊಂದು ಪೂರಕವಲ್ಲವೇ? ಸಾಧನ ಮತ್ತು ಸಾಕ್ಷಾತ್ಕಾರಗಳಿಗಿರುವ ಸಂಬಂಧದ ಹಾಗೆ ಈ ಬಾಹ್ಯ ಚಟುವಟಿಕೆಗಳು ಮತ್ತು ಧ್ಯಾನ–ಮನಗಳು ಸಾಂಕೇತಿಕವಾಗಿ ಒಂದೇ ಅಲ್ಲವೇ? ಧ್ಯಾನ–ಮನದ ಫಲವು ಐಕ್ಯತೆಯಾಗಿದೆ – ಒಂದು ಹಲವು ವಿಧದಲ್ಲಿ ಅರಳಿದ ಹಾಗೆ; ಪ್ರತೀ ದಿನದ ಚಟುವಟಿಕೆಗಳು ಅಡಿಗಲ್ಲಾಗಿದ್ದು, ಇದರ ಮೂಲಕ ಎಲ್ಲಾ ಅಂಶಗಳು ಹಾದು ಹೋಗಿ, ಅವೆಲ್ಲವುಗಳು ಪರಿಶುದ್ಧ, ಪರಿವರ್ತನೆಗೊಂಡು, ಸೌಮ್ಯವಾಗಿ ಮತ್ತು ಪ್ರಕಾಶವನ್ನು ಅರಿತುಕೊಳ್ಳಲು ಸಾಗಿ, ಮನನದಿಂದ ಯೋಗ್ಯಗೊಳ್ಳುತ್ತವೆ. ಈ ಎಲ್ಲಾ ಅಂಶಗಳು ಒಂದಾದ ನಂತರ ಒಂದರಂತೆ ಈ ಕುಲುಮೆಯ ಮೂಲಕವೇ ದಾಟಬೇಕು ಆಗ ಮಾತ್ರ ಬಹಿರಂಗದ ಚಟುವಟಿಕೆಗಳು ಸಮಗ್ರ ಬೆಳವಣಿಗೆಗೆ ಅನವಶ್ಯವಾಗುವುದು. ಆಗ ಮಾತ್ರ ಈ ಚಟುವಟಿಕೆಯ 'ನಿನ್ನನ್ನು', ಪ್ರಕಟಪಡಿಸುವ ಮಾಧ್ಯಮವಾಗಿ ಬೇರೆ ಪ್ರಜ್ಞೆಯ ಕೇಂದ್ರಗಳನ್ನು ಜಾಗೃತ ಮಾಡುವ ಎರಡೂ ಕೆಲಸಗಳನ್ನು ಮಾಡಬಹುದಾಗಿದೆ. ಹಾಗಾಗಿ ಗರ್ವ ಮತ್ತು ನಮ್ಮ ಬಗ್ಗೆ ನಾವು ತೃಪ್ತಿಪಟ್ಟುಕೊಳ್ಳುವುದು ಇವು ನಮ್ಮಲ್ಲಿರುವ ದೊಡ್ಡ ಅಡೆತಡೆಗಳಾಗಿವೆ. ಬಹಳ ವಿನಮ್ರತೆಯಿಂದ ನಮ್ಮಲ್ಲಿರುವ ಅಂಶಗಳನ್ನು ತಿದ್ದಿ ತಿದ್ದಲು ಸಣ್ಣ ಸಣ್ಣ ಅವಕಾಶಗಳನ್ನು ಉಪಯೋಗಿಸಿ–ಕೊಳ್ಳಬೇಕಾಗಿದೆ. ಅವುಗಳನ್ನು ನಮ್ಯಗೊಳಿಸಿ, ಅವುಗಳಲ್ಲಿ ನಿರ್ವ್ಯೈಯಕ್ತಿಕತೆಯನ್ನು ತಂದು ಅವುಗಳಲ್ಲಿ ನನ್ನತನವನ್ನು ಕಳೆದು ಭಕ್ತಿ, ಕರುಣೆ, ಸೌಮ್ಯತೆಯನ್ನು ತರಬೇಕಾಗಿದೆ; ಆಗ ನಮ್ಮ ಅಸ್ತಿತ್ವದ ಎಲ್ಲಾ ಅಂಶಗಳನ್ನು ರೂಢಿಗತವಾಗಿ ಇದಕ್ಕೆ ಹೊಂದಿಸಿದಾಗ ನಿಜವಾದ ಧ್ಯಾನದಲ್ಲಿ ಭಾಗವಹಿಸಲು ಯೋಗ್ಯರಾಗುತ್ತೇವೆ ಮತ್ತು ನಮ್ಮನ್ನು ನಾವು ನಿನ್ನ ಪರಮ ಏಕಾಗ್ರತೆಯಲ್ಲಿ ತಾದ್ಯಾತ್ಮಗೊಳಿಸಿ–ಕೊಳ್ಳಬಹುದು. ಆದ್ದರಿಂದ ಈ ಕೆಲಸವು ಅತ್ಯುತ್ತಮರಿಗೂ ಕೂಡ ಬಹಳ ನಿಧಾನ ಮತ್ತು ಬಹುಕಾಲ ತೆಗೆದುಕೊಳ್ಳುತ್ತದೆ. ಹಾಗಾಗಿ ದಿಢೀರ ಬದಲಾವಣೆಯು ನಮ್ಮ

ಅಸ್ತಿತ್ವದ ದಿಕ್ಕನ್ನು ಬದಲಿಸುತ್ತದೆ, ಅದು ನಿಜವಾಗಿಯೂ ನಮ್ಮನ್ನು ನೇರ ಮಾರ್ಗದಲ್ಲಿ ಕೊಂಡೊಯ್ಯುತ್ತದೆ; ಆದರೆ ನಿಜವಾದ ಗುರಿಯನ್ನು ಮುಟ್ಟಲು ಎಲ್ಲಾ ರೀತಿಯ ಮತ್ತು ಎಲ್ಲಾ ಕ್ಷಣದಲ್ಲಿ ಅನೇಕ ಅನುಭವಗಳ ಮೂಲಕ ಎಲ್ಲರೂ ಹಾದು ಹೋಗಬೇಕಾಗುವುದು ಅನಿವಾರ್ಯವಾಗಿದೆ.

ನನ್ನಲ್ಲಿಯೂ ಪ್ರತೀ ವಸ್ತುವಿನಲ್ಲಿಯೂ ಪ್ರಕಾಶಿಸುವ ಓ ಪರಮ ಪ್ರಭುವೇ, ನಿನ್ನ ಜ್ಯೋತಿಯು ಪ್ರಕಟವಾಗಲಿ ನಿನ್ನ ಶಾಂತಿಯ ಆಳ್ವಿಕೆ ಎಲ್ಲರಿಗಾಗಿ ಒದಗಿಬರಲಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/6–7**

**ಫೆಬ್ರವರಿ 21, 1914**

ಪ್ರತೀ ದಿನವು, ಪ್ರತಿ ಕ್ಷಣವೂ ಹೊಸ ಮತ್ತು ಪೂರ್ಣವಾದ ಅರ್ಪಣೆ ಒಂದು ಸುಸಂದರ್ಭವಾಗಬೇಕು, ಮತ್ತು ಅತ್ಯುತ್ಸಾಹಕ ಮತ್ತು ಗಲಿಬಿಲಿಗೊಂಡ ಅರ್ಪಣೆ ಇರಬಾರದು, ಅತೀವ–ಕ್ರಿಯಾಶೀಲತೆಯಾಗಲಿ. ಕೆಲಸದ ಬಗ್ಗೆ ಭ್ರಮೆಗಳನ್ನು ತುಂಬಿಕೊಂಡಿರಬಾರದು, ಆದರೆ ನಿಶ್ಚಲ, ನೀರವತೆಯಿಂದ ಕೂಡಿದ ಅರ್ಪಣೆಯು ಅವಶ್ಯವಾಗಿ ಕಾಣಲೇಬೇಕೆಂದೇನಿಲ್ಲ, ಆದರೆ ಅದು ನಮ್ಮೊಳಗೆ ಭೇದಿಸಿ ಪರಿವರ್ತಿಸುತ್ತದೆ. ನಮ್ಮ ಮನವು ಏಕಾಂಗಿಯಾಗಿ ಮತ್ತು ಶಾಂತಿಯುತವಾಗಿ, ಯಾವಾಗಲೂ ನಿನ್ನಲ್ಲಿ ಅವಲಂಬನೆ ಪಡೆಯಬೇಕು ಮತ್ತು ಆ ಪರಿಶುದ್ಧ ಉತ್ತುಂಗದಿಂದ, ವಾಸ್ತವತೆಗಳೆಡೆಗೆ ಸರಿಯಾದ ದೃಷ್ಟಿಕೋನವನ್ನು ಪಡೆಯಬೇಕು, ಅದರಂತೆಯೇ ಅಸ್ಥಿರವಾದ ಮತ್ತು ಕ್ಷಣಿಕವಾಗಿ ಕಾಣುವವುಗಳ ಹಿಂದಿರುವ ಏಕೈಕ ಶಾಶ್ವತ 'ವಾಸ್ತವತೆ'ಯ ದೃಷ್ಟಿಕೋನವನ್ನೂ ಪಡೆಯಬೇಕು.

ಓ ಪ್ರಭುವೇ, ನನ್ನ ಹೃದಯವು ಎಲ್ಲಾ ಅಶಾಂತಿಯಿಂದ ಮತ್ತು ವೇದನೆಯಿಂದ ಮುಕ್ತವಾಗಿದೆ, ಅದು ದೃಢ ಮತ್ತು ಸ್ಥಿರವಾಗಿದ್ದು ಎಲ್ಲಾ ವಸ್ತುಗಳಲ್ಲಿ ನಿನ್ನನ್ನೇ ಕಾಣುತ್ತಿದೆ; ಮತ್ತು ನಮ್ಮ ಬಹಿರಂಗದ ಕ್ರಿಯೆಗಳು ಏನೇ ಆಗಿರಲಿ, ಭವಿಷ್ಯವು ನಮಗಾಗಿ ಏನೇ ಪರಿಸ್ಥಿತಿಗಳನ್ನು ಕಾಯ್ದಿರಿಸಿಕೊಂಡಿರಲಿ, ನೀನೊಬ್ಬನೇ ವಾಸಿಸುತ್ತಿರುವೆ. ನಿರ್ವಿಕಲ್ಪ ಶಾಶ್ವತೆಯಲ್ಲಿ ನೀನು ಮಾತ್ರ ಸತ್ಯ ಎಂಬುದು ನನಗೆ ತಿಳಿದಿದೆ ಮತ್ತು ನಿನ್ನಲ್ಲಿಯೇ ನಾವು ಜೀವಿಸುತ್ತಿದ್ದೇವೆ...

ಸಮಸ್ತ ಪೃಥ್ವಿಯಲ್ಲೆಲ್ಲಾ ಶಾಂತಿಯು ನೆಲೆಗೊಳ್ಳಲಿ.

*

**ಆಗಸ್ಟ್ 17, 1913**

ಓ ಪ್ರಭುವೇ, ನಮ್ಮ ಜೀವನದ ಒಡೆಯನೆ, ನಮ್ಮ ಭೌತಿಕ ಸಂರಕ್ಷಣೆಯ, ಎಲ್ಲಾ ಕಾಳಜಿಯನ್ನು ಮೀರಿ ಮೇಲಕ್ಕೆ ಏರುವಂತಾಗಲಿ. ದೇಹದ ಸಂರಕ್ಷಣೆಯ, ಈ ಆರೋಗ್ಯಕ್ಕೆ ಸಂಬಂಧಿಸಿದ ಮುಂದಾಲೋಚನೆಯ, ಜೀವನಾಧಾರಕ್ಕೆ ಸಂಬಂಧಿಸಿದ, ಜೀವನದ ಚೌಕಟ್ಟಿನ ಬಗೆಗಿನ ಸತತವಾದ ಯೋಚನೆಗಳಿಗಿಂತ ಅವಮಾನಕರವಾದುದು ಮತ್ತು ಹೀನಾಯವಾದುದು ಯಾವೂದೂ ಇಲ್ಲ. ಈ ಎಲ್ಲವೂ ಎಷ್ಟು ಮಹತ್ವವಲ್ಲದ ಅತ್ಯಲ್ಪವಾದುದಾಗಿದೆ. ನಿನ್ನೆಡೆಗೆ ತಿರುಗಿದ ಏಕಮೇವ ಯೋಚನೆಯಿಂದ ಒಂದು ಸಣ್ಣ ಹೊಗೆಯಂತೆ ಅಥವಾ ಮರೀಚೀಕೆಯಂತೆ ಈ ಎಲ್ಲವೂ ಕಣ್ಮರೆಯಾಗುವುದು.

ಓ ಪ್ರಭುವೇ, ಯಾರು ಬಂಧನದಲ್ಲಿ ಇರುವರೋ ಅವರನ್ನು, ಭಾವೋದ್ರೇಕದ ಗುಲಾಮರಾಗಿರುವವರನ್ನು ಮುಕ್ತಗೊಳಿಸು, ನಿನ್ನದೆಡಗೆ ಕರೆದೊಯ್ಯುವ ಮಾರ್ಗದಲ್ಲಿ ಬರುವ ವಿಘ್ನಗಳು ಒಮ್ಮೆ ಭಯಂಕರವು ಮತ್ತೊಮ್ಮೆ ನಿಷ್ಪರಿಣಾಮಕಾರಿಯೂ ಆಗಿವೆ – ಯಾರು ಈ ವಿಘ್ನಗಳಿಗೆ ಅಧೀನವಾಗಿರುವರೋ ಅವರಿಗೆ ಮಾತ್ರ ಭಯಂಕರವೂ, ಯಾರು ಅವುಗಳನ್ನು ಮೀರಿ ಹೋಗುತ್ತಾರೋ ಅವರಿಗೆ ನಿಷ್ಪರಿಣಾಮಕಾರಿಯಾಗಿರುತ್ತವೆ.

ನಮ್ಮ ಜೀವನ ಮತ್ತು ಆರೋಗ್ಯ ಈ ಎಲ್ಲಾ ನಮ್ಮಲ್ಲಿನ ಆತಂಕಗಳಿಂದ ಮುಕ್ತರಾದಾಗ ನಾವು ಅನಿರ್ವಚನೀಯವಾದ ಉತ್ಕಟ ಮುಕ್ತಭಾವದಿಂದ ಕೂಡಿದ ಹಗುರ ಭಾವದಿಂದ ತುಂಬಿರುತ್ತೇವೆ, ಅಲ್ಲವೇ?

ದಿವ್ಯ ಸ್ವಾಮಿಯೇ ಈ ವಿಶ್ರಾಂತಿಯನ್ನು, ಈ ಮುಕ್ತತೆಯನ್ನು ನೀನು ನನಗೆ ಕರುಣಿಸಿರುವೆ. ನನ್ನ ಪ್ರಾಣದ ಪ್ರಾಣವೇ ನನ್ನ 'ಜ್ಯೋತಿಯೇ', ಪ್ರೇಮವನ್ನು ನಿರಂತರವಾಗಿ ಕಲಿಸುತ್ತಿರುವ ಮತ್ತು ನನ್ನ ಅಸ್ತಿತ್ವದ ಉದ್ದೇಶವನ್ನು ನಾನು ತಿಳಿಯುವಂತೆ ಮಾಡಿರುವ ಸ್ವಾಮಿ ನೀನು.

ನನ್ನೊಳಗೆ ವಾಸವಾಗಿರುವನು ನೀನೇ. ನೀನೊಬ್ಬನೇ ಅಂದ ಮೇಲೆ ನನ್ನ ಸ್ವಂತದ ಬಗೆಗೆ ಮಾತ್ರ, ನನಗೆ ಮುಂದೇನಾದೀತು ಎಂಬುದರ ಬಗೆಗೆ ಮಾತ್ರ ಯಾವಾಗಲೂ ನಾನೇಕೆ ಯೋಚಿಸಬೇಕು? ನಿನ್ನನ್ನೇ ಪ್ರಕಟಪಡಿಸಲು ಪ್ರಯತ್ನಿಸುತ್ತಿರುವ ಧೂಳಿನಿಂದ ದೇಹವು ನೀನಿರದಿದ್ದರೆ ಇತರ ಕೇಂದ್ರಗಳೊಡನೆ

ನಮ್ಮ ಸಂಬಂಧವನ್ನು ಜೋಡಿಸುವ ಈ ಸಂವೇದನಾಶೀಲತೆಯು ವಿನಾಶವಾಗಿ ಕತ್ತಲೆಯ ಜಡವಾಗುತ್ತಿತ್ತು;

ನೀನಿಲ್ಲದಿದ್ದರೆ, ಇಡೀ ಸತ್ತೆಯನ್ನು ಜೀವಂತಗೊಳಿಸುವ ಮತ್ತು ಪ್ರಕಾಶಿಸುವ ಈ ವಿಚಾರವು ಅನಿಶ್ಚಿತ, ಬರಿದಾದ, ಸಾಕ್ಷಾತ್ಕಾರಗೊಳ್ಳದಂತಾಗುತ್ತಿತ್ತು; ನೀನಿಲ್ಲದೆ ಸರ್ವವನ್ನೂ ಸುಸಂಬದ್ಧಗೊಳಿಸುತ್ತ, ಸರ್ವವನ್ನು ಪ್ರಚೋದಿಸುತ್ತಾ ಸರ್ವದಲ್ಲಿಯೂ ಉತ್ಸಾಹವನ್ನು ತುಂಬುತ್ತಿರುವ ಈ ಮಹೋನ್ನತ ಪ್ರೇಮದ ಈ ಕ್ರಿಯೆಗಳೆಲ್ಲವೂ, ಜಾಗ್ರತವಾಗದೇನೇ ಸುಪ್ತಾವಸ್ಥೆಯಲ್ಲೇ ಉಳಿಯುತ್ತಿತ್ತು. ನೀನಿಲ್ಲದಿದ್ದರೆ ಎಲ್ಲವೂ ಜಡ, ಕ್ರೂರ ಅಥವಾ ಅಚೇತನವೇ ಆಗಿದೆ. ನಮ್ಮಲ್ಲಿ ಪ್ರಕಾಶವನ್ನು ಚೆಲ್ಲಿ, ನಮ್ಮನ್ನು ಆಕರ್ಷಿಸುತ್ತಿರುವುದೆಲ್ಲವೂ ನೀನೇ, ನಮ್ಮ ಅಸ್ತಿತ್ವಕ್ಕೆ ಏಕೈಕ ಕಾರಣನಾದವನೂ, ಮತ್ತು ನಮ್ಮ ಎಲ್ಲ ಗುರಿಯೂ ನೀನೇ. ನಮ್ಮ ಭೌತಿಕ ಜೀವನದ ಅವಶ್ಯಕತೆಗಳ ಬಗ್ಗೆ ಯೋಚಿಸದೆ, ನಮ್ಮ ರೆಕ್ಕೆಗಳನ್ನು ಹರಡಿ ಮೇಲೆ ಹಾರಿ ಎಲ್ಲಿ ವೈಯಕ್ತಿಕ ವಿಚಾರಗಳಿಂದ ಮುಕ್ತನಾಗಲು ಇದಿಷ್ಟು ಮಾತ್ರದಿಂದ ಸಾಧ್ಯವಿಲ್ಲವೇ? ಹಾಗಾಗಿ ನಾವು ನಿನ್ನ ದೈವೀ ವಾತಾವರಣದಲ್ಲಿ ಹಾರಿ ಮತ್ತು ಅಲ್ಲಿಂದ ನಿನ್ನ ಸಂದೇಶವಾಹಕನಾಗಿ ಪೃಥ್ವಿಗೆ ಬಂದು ನಿನ್ನ ವೈಭವಯುತ ಭವಿಷ್ಯದ ಆಗಮನವನ್ನು ಘೋಷಿಸಲು ಸಾಧ್ಯವಿಲ್ಲವೇ?

ಓ ದಿವ್ಯ ಪ್ರಭುವೇ, ಮಹೋನ್ನತ ಗೆಳೆಯನೇ, ಅದ್ಭುತವಾದ ಗುರುವೇ, ಫಲದಾಯಕ ನಿಶ್ಚಲ ನೀರವತೆಯಲ್ಲಿ ನಾನು ನಿನಗೆ ವಂದಿಸುವೆ.

**ನವೆಂಬರ್ 28, 1913**

ಶುಭೋಯದ ಮುಂಚಿನ ಈ ಶಾಂತ ಏಕಾಗ್ರತೆಯಲ್ಲಿ, ಬೇರೆಲ್ಲಾ ಸಮಯಕ್ಕಿಂತಲೂ ಹೆಚ್ಚಾಗಿ, ನನ್ನ ಯೋಚನೆಗಳು ನಿನ್ನೆಡೆಗೆ ಪ್ರಾರ್ಥನೆಯೊಂದಿಗೆ ಏರಿ ಬರುತ್ತಿವೆ. ಓ ನಮ್ಮ ಸತ್ತೆಯ ಒಡೆಯನೆ, ಇದೀಗ ಉದಯಿಸುತ್ತಿರುವ ಈ ದಿನವು ಪೃಥ್ವಿಗೂ ಮತ್ತು ಮಾನವರಿಗೂ ಅಧಿಕ ಪರಿಶುದ್ಧ ಬೆಳಕು ಮತ್ತು ನೈಜ ಶಾಂತಿಯನ್ನು ತರುವಂತೆ ಕರುಣಿಸು; ನಿನ್ನ ಪ್ರಕಟಣೆಯು ಹೆಚ್ಚು ಪರಿಪೂರ್ಣವಾಗಲಿ ಮತ್ತು ನಿನ್ನ ಮಧುರ ನಿಯಮವು ಹೆಚ್ಚು ವಿಶಾಲವಾಗಿ ಗುರುತಿಸಲ್ಪಡಲಿ; ಉನ್ನತವಾದ, ಶ್ರೇಷ್ಟವಾದ, ಹೆಚ್ಚು ನೈಜವಾದುದು ಮನುಕುಲಕ್ಕೆ ಕಳಿಸಲ್ಪಡಲಿ; ವಿಶಾಲವೂ ಮತ್ತು ಆಳವಾದ ಪ್ರೇಮವು ಎಲ್ಲೆಡೆ ಹರಡಲಿ ಆಗ

ಎಲ್ಲಾ ನೋವು ಮತ್ತು ಗಾಯಗಳು ಗುಣವಾಗಲ್ಪಡುವವು; ಮತ್ತು ಪೃಥ್ವಿಯ ಮೇಲೆ ಆಗಮಿಸುತ್ತಿರುವ ಈ ಮೊದಲ ರವಿತೇಜವು ಮತ್ತು ಸಾಮರಸ್ಯದ ರಾಯಭಾರಿಯಾಗಲಿ, ಜೀವನದ ಸಾರದಲ್ಲಿ ಹುದುಗಿರುವ ವೈಭವಯುಕ್ತ ದೀಪ್ತಿಯ ಪ್ರತೀಕವಾಗಲಿ.

ಓ ದಿವ್ಯ ಒಡೆಯನೆ, ಈ ದಿನ ನಿನ್ನ ಸಂಕಲ್ಪಕ್ಕೆ ಪೂರ್ಣವಾಗಿ ಅರ್ಪಿಸಿಕೊಳ್ಳುವಂತೆ ಕರುಣಿಸು, ನಿನ್ನ ಕಾರ್ಯಕ್ಕೆ ಹೆಚ್ಚು ಸಮಗ್ರವಾಗಿ ನಮ್ಮನ್ನು ನಾವು ಕೊಟ್ಟುಕೊಳ್ಳುವಂತಾಗಲಿ, ಹೆಚ್ಚು ಸಂಪೂರ್ಣವಾಗಿ ನಮ್ಮನ್ನು ಮರೆಯುವಂತಾಗಲಿ, ಉನ್ನತವಾದ ಪ್ರಕಾಶ, ಪರಿಶುದ್ಧವಾದ ಪ್ರೀತಿಯನ್ನು ತರಲಿ, ಎಂದಿಗೂ ಆಳವಾದ, ಹೆಚ್ಚು ಸ್ಥಿರವಾದ ಮತ್ತು ಸಂಪೂರ್ಣವಾದ ನಿನ್ನ ಜೊತೆಗಿನ ಅನುಸಂಧಾನವನ್ನು ಕರುಣಿಸು. ನಾವು ಯಾವಾಗಲೂ ಏಕೀಕೃತಗೊಂಡು ಹೆಚ್ಚು ಹೆಚ್ಚು ನಿನಗೆ ಹತ್ತಿರವಾಗಲಿ ಮತ್ತು ನಿನಗೆ ಯೋಗ್ಯವಾದ ಸೇವಕನಾಗಲಿ. ಎಲ್ಲಾ ರೀತಿಯ ಅಹಂಕಾರವನ್ನು ನಮ್ಮಿಂದ ತೊಲಗಿಸು, ಕ್ಷುಲ್ಲಕ ದುರಾಭಿಮಾನ, ಶೋಭೆ ಮತ್ತು ಅಸ್ಪಷ್ಟತೆಯನ್ನು ಬೇರುಸಹಿತ ಕಿತ್ತಸೆ. ನಿನ್ನ ದಿವ್ಯ ಪ್ರೇಮದಿಂದ ನಾವು ಪೂರ್ಣವಾಗಿ ಪ್ರಜ್ವಲಿಸುವಂತೆಯೂ, ಜಗತ್ತಿನಲ್ಲಿ ನಿನ್ನ ದೀವಟಿಗೆಗಳಾಗುವಂತೆಯೂ ವರ ನೀಡು.

ಪೂರ್ವ ದೇಶಗಳ ಸುಗಂಧ ದ್ರವ್ಯಗಳ ಶ್ವೇತ ಧೂಮದಂತೆ ಮೌನ ಸ್ತೋತ್ರವೊಂದು ನನ್ನ ಹೃದಯದಿಂದ ಹೊರಹೊಮ್ಮುತ್ತಿದೆ.

ಇಂದಿನ ಪ್ರಭಾತ ಸಮಯದ ಪ್ರಕಾಶದಲ್ಲಿ ಸಂಪೂರ್ಣ ಸಮರ್ಪಣೆಯ ಪ್ರಸನ್ನ ಭಾವದಿಂದ ನಾನು ನಿನಗೆ ಪ್ರಣಾಮ ಗೈಯುವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/80–37**

**ನವೆಂಬರ್ 29, 1913**

ಈ ಎಲ್ಲಾ ಗದ್ದಲ ಈ ಎಲ್ಲಾ ಆಂದೋಲನ, ಈ ವ್ಯರ್ಥ ಮತ್ತು ಕ್ಷುಲಕ ತಳಮಳ ಏಕೆ? ಬಿರುಗಾಳಿಯಲ್ಲಿ ಸಿಕ್ಕಿಬಿದ್ದ ನೊಣಗಳ ಹಿಂಡಿನಂತೆ ಮಾನವರನ್ನು ದೂರ ಕರೆದೊಯ್ಯೊವ ಈ ಸುಂಟರಗಾಳಿ ಏಕೆ? ಈ ಎಲ್ಲಾ ವ್ಯರ್ಥವಾದ ಶಕ್ತಿ ಮತ್ತು ಎಲ್ಲಾ ನಿಷ್ಪ್ರಯೋಜಕ ಪ್ರಯತ್ನಗಳನ್ನು ನೋಡಿದಾಗ ಎಷ್ಟು

ವಿಷಾದವೆನಿಸುತ್ತದೆ. ತೊಗಲು ಬೊಂಬೆಗಳಂತೆ ಕುಣಿಯುವುದನ್ನು, ಅವರು ಎಂದು ನಿಲ್ಲಿಸುವರೋ, ಆ ಸೂತ್ರವನ್ನು ಯಾರು ಹಿಡಿದಿರುವರೋ ಅಥವಾ ಯಾವುದು ಹಿಡಿದಿರುವುದೋ ಎಂಬುದನ್ನು ಕೂಡ ಅವರು ಅರಿಯರು? ನಿಶ್ಚಲವಾಗಿ ಕುಳಿತು ಮತ್ತು ಅಂತರಂಗಕ್ಕೆ ಪ್ರವೇಶಿಸಲು ಯಾವಾಗ ಅವರಿಗೆ ಸಮಯ ಸಿಗುತ್ತದೆ, ತಮ್ಮನ್ನು ಒಂದೆಡೆಗೆ ಸಂಗ್ರಹಿಸಿ ಮತ್ತು ಅಂತರಂಗದಲ್ಲಿ ಹುದುಗಿದ 'ನಿನ್ನ' ಬೆಲೆ ಕಟ್ಟಲಾಗದ ನಿಧಿಗೆ, ನಿನ್ನ ಅನಂತ ವರಗಳಿಗೆ ಎಂದು ತೆರೆದುಕೊಳ್ಳುವರೋ?..

ನಿನ್ನ ಘನತೇಜದ ಒಂದೇ ಒಂದು ಕಿಡಿಯೋ, ನಿನ್ನ ದೈವೀ ಪ್ರೇಮದ ಒಂದೇ ಒಂದು ಹನಿಯೋ, ಈ ದುಃಖವನ್ನೆಲ್ಲಾ ಹರ್ಷದ ಮಹಾಸಾಗರವನ್ನಾಗಿ ರೂಪಾಂತರಿಸಲು ಸಾಧ್ಯವಿರುವಾಗ, ನನಗೆ ಅವರ ಅಜ್ಞಾನದ ಮತ್ತು ಅಸ್ಪಷ್ಟವಾದ ಜೀವನ, ಅವರ ಹುಚ್ಚುತನದ ಹೋರಾಟ ಮತ್ತು ಅಸ್ಪಷ್ಟವಾದ ಜೀವನ, ಅವರ ಹುಚ್ಚುತನದ ಹೋರಾಟ ಮತ್ತು ವ್ಯರ್ಥ ವಿಷಯಾಸಕ್ತಿಯು ಎಷ್ಟೊಂದು ದುಃಖಮಯ ಮತ್ತು ಶೋಚನೀಯವಾಗಿ ಕಾಣುತ್ತಿದೆ.

ಓ ಪ್ರಭುವೇ ನನ್ನ ಪ್ರಾರ್ಥನೆಯು ನಿನ್ನಡೆಗೆ ಏರಿ ಬರುತ್ತಿದೆ; ಅವರೆಲ್ಲರಿಗೂ ಆ ಅಚಲ ಪ್ರಸನ್ನತೆಯಿಂದ ಬರುವ ಆ ಪ್ರತಿರೋಧಕ ಶಕ್ತಿ ಮತ್ತು ನಿನ್ನ ಶಾಂತಿಯ ಅರಿವಾಗಲಿ ಇದನ್ನು ಅರಿಯುವ ಯೋಗ್ಯತೆಯನ್ನು ಯಾರು ತಮ್ಮ ಕಣ್ಣುಗಳಲ್ಲಿ ನಿನ್ನನ್ನು ಧ್ಯಾನಿಸುತ್ತಾರೋ ಅವರಿಗೆ ಸಾಧ್ಯವಾಗುತ್ತದೆ. ಆದರೆ ನಿನ್ನ ಪ್ರಕಟಣೆಯ ಸಮಯ ಬಂದಿದೆ. ಮತ್ತು ಶ್ರೀಘವಾಗಿಯೇ ಆನಂದದ ಸ್ತೋತ್ರಗಳು ಎಲ್ಲಾ ಕಡೆಗೂ ಮೊಳಗುತ್ತವೆ.

ಮೌನದ ಶಾಂತಿಯ ಈ ಘಳಿಗೆಯ ಮುಂದೆ ಭಕ್ತಿಯಿಂದ ಪ್ರಣಾಮ ಗೈಯ್ಯುತ್ತಿದ್ದೇನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/38**

**ಮಾರ್ಚ್ 17, 1912**

ದೈಹಿಕ ಪರಿಸ್ಥಿತಿಯು ಸ್ವಲ್ಪ ಕಷ್ಟಕರವಾದಾಗ, ಮತ್ತು ಕೆಲವು ಅಸ್ವಸ್ಥತೆ ಉಂಟಾದಾಗ, ಜೀವನ–ಸಾವು, ಆರೋಗ್ಯ ಅಥವಾ ಅನಾರೋಗ್ಯ ಎಂಬುದನ್ನು

ಗಮನಿಸದೇ ನಿನ್ನ ಸಂಕಲ್ಪದ ಮುಂದೆ ಹೇಗೆ ಸಮರ್ಪಿಸಿಕೊಳ್ಳಬೇಕೆಂಬುದು ತಿಳಿದಿದ್ದರೆ, ತಕ್ಷಣವೇ ಸಮಗ್ರ ಸತ್ತೆಯು ನಿನ್ನ ಪ್ರೇಮ ಮತ್ತು ಪ್ರಾಣದ ನಿಯಮದ ಸಾಮರಸ್ಯದೊಡನೆ ಪ್ರವೇಶಿಸುತ್ತದೆ ಮತ್ತು ಎಲ್ಲಾ ದೈಹಿಕ ಅನಾರೋಗ್ಯವು ನಿಂತು ಹೋಗಿ ಶಾಂತ, ಸೌಖ್ಯ, ಆಳವಾದ ಶಾಂತತೆಗೆ ಸ್ಥಳಾವಕಾಶ ಮಾಡಿಕೊಡುತ್ತದೆ.

ನಾನು ಗಮನಿಸಿದ್ದೇನೆಂದರೆ, ನಾವು ಹೆಚ್ಚು ಶಾರೀರಕ ಸಹನೆ ಅವಶ್ಯವುಳ್ಳ ಚಟುವಟಿಕೆಯಲ್ಲಿ ಭಾಗಿಯಾದಾಗ, ಮುಂದೆ ಬರಬಹುದಾದ ಕಷ್ಟಗಳನ್ನು ಮುಂಚಿತವಾಗಿಯೇ ನಿರೀಕ್ಷಿಸುವುದು ನಮ್ಮನ್ನು ಹೆಚ್ಚು ದಣಿಯುವಂತೆ ಮಾಡುತ್ತಿದೆ. ಪ್ರಸ್ತುತ್ತ ಕ್ಷಣದಲ್ಲಿರುವ ಕಷ್ಟವನ್ನು ಮಾತ್ರ ಪರಿಗಣಿಸುವುದು ಬಹಳಷ್ಟು ಜಾಣತನದ ವಿಷಯವಾಗಿದೆ; ನಮ್ಮ ಪ್ರತಿರೋಧಕವು ಹಾಗೂ ಅದನ್ನೆದುರಿಸುವ ನಮಗೆ ಬೇಕಾದ ಶಕ್ತಿಯು ಸಮಾನುಪಾತದಲ್ಲಿರುತ್ತದೆ ಎಂದು ಯಾವಾಗ ತಿಳಿಯುತ್ತದೆಯೋ ಆಗ ನಮ್ಮ ಪ್ರಯತ್ನವು ಸುಲಭವಾಗುತ್ತದೆ. ದೇಹವು ಒಂದು ಅದ್ಭುತವಾದ ಉಪಕರಣವಾಗಿದೆ. ಅದನ್ನು ಹೇಗೆ ಉಪಯೋಗಿಸಿ–ಕೊಳ್ಳಬೇಕೆಂಬುದು ಮನಕ್ಕೆ ಗೊತ್ತಿಲ್ಲ ಮತ್ತು ದೇಹದ ನಮ್ಯತೆಯನ್ನು, ಕೋಮಲತೆಯನ್ನು ಪ್ರೋತ್ಸಾಹಿಸುವ ಬದಲಾಗಿ, ಮನವು ಒಂದು ರೀತಿಯ ನಿರ್ದಿಷ್ಟತೆಯನ್ನು ದೇಹದಲ್ಲಿ ತರುತ್ತದೆ. ಈ ನಿರ್ದಿಷ್ಟತೆಯು ಮನದ ಪೂರ್ವ ಗ್ರಹಪೀಡಿತ ವಿಚಾರಗಳು ಮತ್ತು ಅಹಿತಕಾರಿ ಸಲಹೆಗಳಾಗಿ ಬಂದಿರುತ್ತದೆ.

ಆದರೆ ಓ ಪ್ರಭುವೇ, ಪರಮ ವಿಜ್ಞಾನವೆಂಬುದು, ನಿನ್ನ ಜೊತೆಗೆ ಒಂದಾಗುವುದೇ ಆಗಿದೆ, ನಿನ್ನಲ್ಲಿ ನಂಬಿಕೆಯಿಡುವುದು, ನಿನ್ನಲ್ಲಿ ಜೀವಿಸುವುದು ನೀನೇ ನಾನಾಗುವುದು ಆಗಿದೆ. ಮತ್ತು ಆಗ ಮಾನವನು ಯಾರು 'ನಿನ್ನ' ಅವಶ್ಯಕತೆಯನ್ನು ಪ್ರಕಟಪಡಿಸುತ್ತಾರೋ ಅವರಿಗೆ ಯಾವುದೂ ಅಸಾಧ್ಯವಾಗಲಾರದು.

ಪ್ರಭುವೇ ನನ್ನ ಅಭೀಪ್ಸೆಯು ನಿಶ್ಚಲ ನೀರವತೆಯ ಸ್ತೋತ್ರದಂತೆ, ಮೂಕ ಆರಾಧನೆಯಂತೆ ನಿನ್ನೆಡೆಗೆ ಏರಿಬರುತ್ತಿದೆ, ಮತ್ತು ನಿನ್ನ ದೈವೀ ಪ್ರೇಮವು ನನ್ನ ಹೃದಯವನ್ನು ಬೆಳಗಿಸುತ್ತದೆ.

ಓ ದಿವ್ಯ ಒಡೆಯನೆ, ನಿನಗೆ ನನ್ನ ಅನಂತ ಪ್ರಣಾಮಗಳು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/101**

**ಜನವರಿ 4, 1914**

ನಮ್ಮೊಳಗೆ ಸಣ್ಣ ನ್ಯೂನತೆ ಕಾಣಿಸಿಕೊಂಡಿತೇ ಎಂದು ಭೌತಿಕ ವಿಚಾರಗಳು ಅಲೆಗಳು ಯಾವಾಗಲೂ ಕಾಯುತ್ತಿರುತ್ತವೆ. ಮತ್ತು ನಾವು ನಮ್ಮ ಜಾಗೃತತೆಯಿಂದ ಒಂದು ಕ್ಷಣವಾದರೂ ವಿಶ್ರಾಂತಿ ತೆಗೆದುಕೊಂಡರೆ, ಆ ಅಲೆಗಳು ಮುನ್ನುಗ್ಗಿ ಬರುತ್ತ ಸುತ್ತ ಕಡೆಯಿಂದ ನಮ್ಮನ್ನು ಆವರಿಸುತ್ತವೆ, ಇದರಿಂದಾಗಿ ಅಸಂಖ್ಯಾತ ಪ್ರಯತ್ನಗಳು ವಿಫಲವಾಗಿ ಅದರ ಮಹಾಪ್ರವಾಹದಲ್ಲಿ ಮುಳುಗಿಸುತ್ತದೆ. ಆಗ ನಮ್ಮ ಸತ್ತೆಯು ಒಂದು ರೀತಿಯ ಮನದ ಸ್ಥಿತಿಯನ್ನು ಪ್ರವೇಶಿಸಿ; ಅದರ ದೈಹಿಕ ಅವಶ್ಯಕತೆಗಳಾದ ಆಹಾರ ಮತ್ತು ನಿದ್ರೆ ಹೆಚ್ಚುತ್ತವೆ, ಅದರ ಬುದ್ಧಿಶಕ್ತಿಯು ಮೋಡಗಳಿಂದ ಮರೆಮಾಚಿದಂತಾಗುವುದು, ಅದರ ಆಂತರಿಕ ದರ್ಶನಕ್ಕೆ ಮುಸುಕು ಆವರಿಸುವುದು, ಈ ಮೇಲ್ನೋಟದ ಚಟುವಟಿಕೆಗಳಲ್ಲಿ ಸ್ವಲ್ಪವೂ ಆಸಕ್ತಿ ಇಲ್ಲದಿದ್ದರೂ ಅವು ನಮ್ಮ ಸತ್ತೆಯನ್ನು ವಿಶೇಷವಾಗಿ ಎಲ್ಲವನ್ನೂ ಆವರಿಸುತ್ತವೆ. ಈ ಸ್ಥಿತಿಯು ಅತಿರೇಕವಾಗಿ ನೋವುಂಟು ಮಾಡುವ ಮತ್ತು ಆಯಾಸಗೊಳಿಸುವುದಾಗಿದೆ, ಭೌತಿಕ ವಿಚಾರಗಳಿಗಿಂತ ದಣಿವುಂಟು ಮಾಡುವುದು ಬೇರಾವುದೂ ಇಲ್ಲ, ಮತ್ತು ಕತ್ತಲೆಯಾದ ಮನವು ಸ್ವಚ್ಛಂದವಾಗಿ ಹಾರಬೇಕೆಂದು ಬಯಸಿದರೂ ಪಂಜರದಲ್ಲಿ ಸಿಲುಕಿದ ಪಕ್ಷಿ ತನ್ನ ಗರಿ ಬಿಚ್ಚಲಾರದೇ ಬಳಲುತ್ತಿರುವಂತಾಗುತ್ತದೆ.

ಆದರೆ ಬಹುಶಃ ಇಂತಹ ಸ್ಥಿತಿಯು ತನ್ನದೇ ಆದ ಉಪಯೋಗವನ್ನು ಹೊಂದಿರಬಹುದು, ಆದರೆ ಅದಾವುದೆಂದು ನಾನು ಕಾಣೆ. ಯಾವುದೇ ಪರಿಸ್ಥಿತಿಯಲ್ಲಿಯೂ, ನಾನು ಸಂಘರ್ಷಕ್ಕೊಳಗಾಗುವುದಿಲ್ಲ; ಮತ್ತು ತಾಯಿಯ ತೋಳನಲ್ಲಿರುವ ಮಗುವಿನಂತೆ, ತನ್ನ ಶ್ರೀ ಗುರುವಿನ ಚರಣ ಸನ್ನಿಧಿಯಲ್ಲಿರುವ ಧರ್ಮನಿಷ್ಠ ಶಿಷ್ಯನಂತೆ, ನಾನು 'ನಿನ್ನನ್ನು' ನಂಬಿದ್ದೇನೆ ಮತ್ತು 'ನಿನ್ನ' ಮಾರ್ಗದರ್ಶನಕ್ಕೆ ಸಮರ್ಪಿಸಿಕೊಂಡಿದ್ದೇನೆ, 'ನಿನ್ನ' ವಿಜಯದಲ್ಲಿ ನನಗೆ ಖಚಿತತೆಯಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/46**

**ಫೆಬ್ರವರಿ 13, 1914**

ನಿಶ್ಚಲ ನೀರವತೆಯ ಉತ್ಕಟ ಏಕಾಗ್ರತೆಯಲ್ಲಿ ನನ್ನ ಪ್ರಜ್ಞೆಯನ್ನು ಕೇವಲ ನಿನ್ನ ಪ್ರಜ್ಞೆಯಲ್ಲಿ ಐಕ್ಯಗೊಳಿಸಲಿಚ್ಛಿಸುವೆ, ನನ್ನ ಸತ್ತೆಯ ಓ ಸಾರ್ವಭೌಮ ಪ್ರಭುವೇ, ಪ್ರೇಮದ ದೈವೀ ಒಡೆಯನೆ, ನಾನು ನಿನ್ನೊಂದಿಗೆ ತಾದಾತ್ಮ್ಯ ಹೊಂದಬಯಸುವೆ.

ಅದರಿಂದ ನಿನ್ನ ನಿಯಮವು ನಮಗೆ ಸ್ಪಷ್ಟವಾಗಿ ತಿಳಿದೀತು ಮತ್ತು ಆ ಮೂಲಕ ನಾವು ಇದರ ನೆರವಿನಿಂದಲೇ ಇದಕ್ಕಾಗಿಯೇ ಜೀವಿಸಲು ಸಾಧ್ಯವಾದೀತು.

ನನ್ನ ವಿಚಾರವು ನಿನ್ನಡೆಗೆ ಧಾವಿಸಿ ನಿನ್ನೊಡನೆ ಒಂದಾದ ಘಳಿಗೆಯಲ್ಲಿ ಎಲ್ಲವೂ ಎಷ್ಟೊಂದು ಸುಂದರ, ವೈಭವ, ಸರಳವಾಗುತ್ತದೆ; ಯಾವ ದಿನದಿಂದ ಈ ಪರಮ ಸ್ಪಷ್ಟ–ದೃಷ್ಟಿಕೋನದಿಂದ ಸತತವಾಗಿ ಬದುಕಲು ಸಾಧ್ಯವಾಗುತ್ತದೆಯೋ ಎಲ್ಲಾ ಅಡೆತಡೆಗಳನ್ನು ಮೀರಿ, ಯಾವುದೇ ಹಿಂಜರಿಕೆ ಇಲ್ಲದೇ, ಗಾಳಿಯಲ್ಲಿ ತೇಲಿದ ಹಾಗೆ ಮತ್ತು ದೃಢ ಹೆಜ್ಜೆಗಳನ್ನಿಡುತ್ತಾ ಜೀವನದಲ್ಲಿ ಸಾಗಲು ಸಾಧ್ಯವಾಗುತ್ತಿದೆ. ಏಕೆಂದರೆ – ಇದು ನನ್ನ ಸ್ವಂತ ಅನುಭವ – ನಿನ್ನ ನಿಯಮದ ಅರಿವಿನ ಕ್ಷಣದಿಂದ ಎಲ್ಲಾ ಅನುಮಾನಗಳು ಮತ್ತು ಹಿಂಜರಿಕೆಗಳಿಂದ ಮುಕ್ತವಾಗುತ್ತೇವೆ; ಯಾವಾಗ ನಮಗೆ ಎಲ್ಲಾ ಮಾನವ ಕ್ರಿಯೆಯ ಅತೀವ ಸಾಪೇಕ್ಷತೆಯ ಅರಿವು ಬರುತ್ತದೆಯೋ, ಆಗ ಸ್ಪಷ್ಟತೆ ಹಾಗೂ ಖಚಿತತೆಯಿಂದ ಏಕಕಾಲದಲ್ಲಿ ಈ ಎರಡೂ ವಿಷಯಗಳು ನಮಗೆ ತಿಳಿಯುತ್ತವೆ, ಯಾವ ಚಟುವಟಿಕೆಗಳು ನಮ್ಮ ದೇಹಕ್ಕೆ ನಾವು ನಡೆದುಕೊಳ್ಳುವ ರೀತಿಗೆ ಎಷ್ಟು ಕನಿಷ್ಠ ಸಾಪೇಕ್ಷವಾಗಿವೆ ಎಂಬುದರ ಅರಿವು ಬರುತ್ತದೆ. ಮತ್ತು ಎಲ್ಲಾ ಅಡೆತಡೆಗಳು 'ನಿಜವಾಗಿಯೂ' ಚಮತ್ಕಾರಿಯಾಗಿ ಮಾಯವಾಗುತ್ತವೆ. ಓ ಪ್ರಭುವೇ, ಆಗಿನಿಂದ ನಮ್ಮ ಎಲ್ಲಾ ಪ್ರಯತ್ನಗಳು ಈ ಅದ್ಭುತ ಸ್ಥಿತಿಯನ್ನು ಮುಟ್ಟುವ ಸಾಕ್ಷಾತ್ಕಾರದ ಕಡೆಗೆ ಹೊರಡುತ್ತೇವೆ.

ನಿನ್ನ ಖಚಿತತೆಯ ಶಾಂತಿಯು ಪ್ರತಿಯೊಂದು ಹೃದಯದಲ್ಲಿ ಜಾಗೃತವಾಗಲಿ.

## ಭಾಗ 3

## ದೈನಂದಿನ ಜೀವನದಲ್ಲಿ ಆಧ್ಯಾತ್ಮಿಕತೆ

**– ಅನುವಾದ: ಕಿಶೋರ**

### ನಿಮ್ಮ ಆಧ್ಯಾತ್ಮದ ವಾತಾವರಣವನ್ನು ಸ್ವಯಂ ನೀವೇ ಸೃಷ್ಟಿಸಿಕೊಳ್ಳಿ

ನಿಮ್ಮ ವಿಚಾರಗಳನ್ನು ಮತ್ತು ಚಿಂತನಗಳನ್ನು, ನಿಮ್ಮದೇ ಆಂತರಿಕ ನಿಯಮಾನುಸಾರ ಅಥವಾ ಅನುಶಾಸನದ ಪ್ರಕಾರ ನಿಯಂತ್ರಣಗೊಳಿಸುತ್ತಲೇ ರೂಪುಗೊಳಿಸಿಕೊಳ್ಳಬೇಕು. ಆ ಮೂಲಕ ಸಾಧನೆಯ ಪಥದಲ್ಲಿ ಸಾಗುತ್ತ, ಬಹಿರಂಗದ ಆಶೆ ಆಕಾಂಕ್ಷೆಗಳನ್ನು ದೂರ ಮಾಡಿಕೊಳ್ಳುವ ಮೂಲಕ ಪ್ರಶಾಂತವಾಗಿರುವ ವಾತಾವರಣವನ್ನು ನಿರ್ಮಿಸಿಕೊಳ್ಳಬೇಕು. ದೈನಂದಿನ ಅತಿ

ಸಾಮಾನ್ಯ ಘಟನಾವಳಿಗಳನ್ನು ಮೀರಿ, ಅತಿ ಗಹನವಾಗಿರುವ ಈ ಆಂತರಿಕ ಪರಿವರ್ತನೆಯ ಕಡೆಗೆ ಸಾಗುವ ವಾತಾವರಣವನ್ನು ಸೃಷ್ಟಿಸಿಕೊಳ್ಳಬಹುದಾಗಿದೆ.

ಉದಾಹರಣೆಗೆ, ಯಾವುದೇ ಸಂಬಂಧವಿರದ ವಿಷಯವನ್ನು ಓದುವದಾಗಲೀ, ಅದರ ಕುರಿತು ಹರಟೆ ಹೊಡೆಯುದಾಗಲೀ ಅಥವಾ ಅಂತಹ ಇನ್ನಿತರ ಕ್ರಿಯೆಗಳಲ್ಲಿ ಭಾಗಿಯಾಗದೇ, ಯಾವುದು ನಿಮಗೆ ಉಪಯುಕ್ತವಿದೆಯೋ ಅದನ್ನು ಮಾತ್ರ ಓದುವದು ಖಂಡಿತ ನಿಮಗೆ ಸಹಾಯಕಾರಿಯಾಗಿರುತ್ತದೆ. ದೈವೀ ಸಾಕ್ಷಾತ್ಕಾರದ ಸಲುವಾಗಿ ಯಾವುದು ನಿಮಗೆ ಸೂಕ್ತ ಮಾರ್ಗದರ್ಶಿಯಾಗಿ–ಮುಂದಾಳುವಾಗಿ ಇರುತ್ತದೆಯೇ ಅದರ ಪ್ರಕಾರವೇ ನೀವೂ ಕಾರ್ಯಪ್ರವೃತ್ತರಾದಲ್ಲಿ, ಜೊತೆಗೆ ನಿಮ್ಮ ವ್ಯಕ್ತಿಗತವಾಗಿರುವ ಬಯಕೆ, ಬಾಹ್ಯದ ಆಕರ್ಷಣೆಯತ್ತ ಸೆಳೆಯುವ ನಿಮ್ಮ ಮನಸ್ಸು ಇವುಗಳನ್ನು ನಿಯಂತ್ರಿಸಿಕೊಂಡು, ನಿಮ್ಮ ಮನಸ್ಸನ್ನು ಶಾಂತಗೊಳಿಸಲು ಸಾಧ್ಯವಾದಲ್ಲಿ, ಅದು ನಿಮ್ಮ ಪ್ರಾಣಿಕ ಅಸ್ತಿತ್ವವನ್ನು ಮತ್ತೂ ಸಕ್ಷಮಗೊಳಿಸುತ್ತದೆ. ಬಾಹ್ಯದ ಆಕರ್ಷಣೆಗಳಿಗೆ, ಕರೆಗಳಿಗೆ ನೀವು ಸಿಲುಕದಿದ್ದಲ್ಲಿ, ನಿಮ್ಮ ಸುತ್ತಲೂ ಇರುವ ಇತರರ ಕ್ರಿಯೆಗಳಿಂದ ಪ್ರಭಾವಿತರಾಗದಿದ್ದಲ್ಲಿ, ಆಗ ಸೃಷ್ಟಿಗೊಳ್ಳುವ ನಿಮ್ಮದೇ ಸೃಷ್ಟಿಯಾಗಿರುವ ಆಧ್ಯಾತ್ಮಿಕ ವಾತಾವರಣವನ್ನು ಯಾರೂ ಭೇದಿಸಲು ಸಾಧ್ಯವಿಲ್ಲ. ಇಲ್ಲಿ ನೀವು ಬೇರೆ ಯಾರನ್ನೂ ಅವಲಂಬಿಸಬೇಕು ಅಂತಿಲ್ಲ. ಏಕೆಂದರೆ ಇದು ನಿಮ್ಮದೇ ಸ್ವಯಂ ಆಗಿರುವ ಆಧ್ಯಾತ್ಮಿಕ ವಾತಾವರಣವಾಗಿರುತ್ತದೆ. ಇದರೊಡನೆ ಯಾವಾಗಲೂ ಸ್ಪಂದನಗೊಳ್ಳುತ್ತಿರಬೇಕು ಮತ್ತು ಅದನ್ನು ಹೊಂದಬೇಕು ಎಂದೇ ಸೃಷ್ಟಿಗೊಂಡಿರುತ್ತದೆ. ಇದು ವ್ಯಕ್ತಿಯೋರ್ವನ ಲಕ್ಷ್ಯವನ್ನು ಸಂಪೂರ್ಣವಾಗಿ ಆಧ್ಯಾತ್ಮಿಕ ಜೀವನದತ್ತಲೇ ಸಾಗುವಂತೆ ರೂಪಿತಗೊಂಡಿರುತ್ತದೆ. ಹೀಗಾಗಿ ಆಂತರಂಗಿಕವಾಗಿ ಆಧ್ಯಾತ್ಮ ಜೀವನವನ್ನು ರೂಪಿಸಿಕೊಳ್ಳುವ ಮೂಲಕ, ಆಧ್ಯಾತ್ಮಿಕ ಜೀವನ ವಿಧಾನದಲ್ಲಿಯೇ ಬದುಕುವದರ ಮೂಲಕ, ನಾವು ಪ್ರಗತಿ ಸಾಧಿಸಲು ಸಹಕಾರಿಯಾಗುತ್ತದೆ. ಅದಕ್ಕಾಗಿಯೇ ನೀವು ನಿಮ್ಮದೇ ಆದ ಆಧ್ಯಾತ್ಮಿಕ ವಾತಾವರಣವನ್ನು ನಿರ್ಮಿಸಿಕೊಳ್ಳಿ. ಆದರೆ ಸಹಜವಾಗಿ ಇಂತಹ ಸಂದರ್ಭದಲ್ಲಿ, ಅಂದರೆ ನಿಮ್ಮನ್ನು ನೀವು ಈ ರೀತಿಯಲ್ಲಿ ಮುಕ್ತಗೊಳಿಸಿಕೊಂಡಲ್ಲಿ, ಆಗ ನಿಮ್ಮನ್ನು ಕುರಿತು ಜನ ಸಮುದಾಯ ಯಾವ ರೀತಿಯಲ್ಲಿ ಕಾಣುತ್ತಾರೆ, ಏನು ಹೇಳುತ್ತಾರೆ ಎನ್ನುವದನ್ನು ಗಮನಿಸಿ. ಅಲ್ಲಿ ಇರಬಹುದಾದ, ನಿಮಗೆ ಸ್ಫೂರ್ತಿದಾಯಕವಾಗಿರುವ ಸಂಗತಿಗಳನ್ನು ಸಲಹೆಯನ್ನು ಸ್ವೀಕರಿಸುತ್ತಾ ಹೋದಲ್ಲಿ. ಆಗ ಬಾಹ್ಯ ಜಗತ್ತು

ಬಯಕೆಗಳಿಂದ ತುಂಬಿರುವದರಿಂದಾಗಿ, ಆಗ ನೀವು ಈ "ಆಧ್ಯಾತ್ಮಿಕ ವಾತಾವರಣವನ್ನು" ಸೃಷ್ಟಿಸಿಕೊಳ್ಳಲು ವಿಫಲರಾಗುತ್ತೀರಿ, ಜೊತೆಗೆ ಜನ ಸಾಮಾನ್ಯರೆಲ್ಲರೂ ಹೊಂದಿರುವ 'ವಾತಾವರಣದಲ್ಲೇ' ಸಿಲುಕಿಕೊಂಡಿರುತ್ತೀರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/356–57**

**ಅವಕಾಶವಿರುವ ಸಮಯದ ಉಪಯುಕ್ತತೆ**

ನಿಮ್ಮ ದಿನನಿತ್ಯದ ಜೀವನದಲ್ಲಿ, ನಿಮಗೆ ಯಾವಾಗಲಾದರೂ ನಿಮ್ಮ ಜೀವನವೇ ಖಾಲಿಖಾಲಿ(ರಿಕ್ತ) ಎಂದೆನಿಸಿದಲ್ಲಿ, ಇಲ್ಲವೇ ಯಾವುದೇ ಘಳಿಗೆಯಲ್ಲಿ, ಅಥವಾ ಅದಕ್ಕಿಂತ ಹೆಚ್ಚಿನ ಸಮಯದಲ್ಲಿ ಈ ರೀತಿಯ ಅನುಭವಗಳು ಇದ್ದರೂ ಸಹಿತ, ಅಥವಾ ಹೆಚ್ಚಿನ ಪ್ರಮಾಣದಲ್ಲಿ ಇದ್ದರೂ, ಆಗ ನೀವು ನಿಮ್ಮತನ್ನವನ್ನೇ ಕಳೆದುಕೊಳ್ಳಲು ಯತ್ನಿಸುತ್ತೀರಿ. ನಿಮ್ಮನ್ನೇ ಘಾಸಿಕೊಳಸಿಕೊಳ್ಳುವಿರಿ. ಇಲ್ಲವೇ ಮೂರ್ಖತನದ ಸಂಗತಿಗಳಲ್ಲಿ ಕೇವಲ ಸಮಯವನ್ನು ಕಳೆಯಲು ಯತ್ನಿಸುತ್ತೀರಿ. ಇದೊಂದು ಸಾಮಾನ್ಯವಾದ ಘಟನೆಯೇ ಆಗಿದೆ. ಇಲ್ಲಿ ತರುಣ, ವೃದ್ಧ ಎಂದೆನ್ನುವ ವ್ಯತ್ಯಾಸವಿಲ್ಲ. ಎಲ್ಲರೂ ಇದೇ ರೀತಿಯಲ್ಲಿ ಕಾಲ ಕಳೆಯುತ್ತಾರೆ. ಬೇಜಾರುಗೊಳ್ಳಬಾರದು ಎಂದುಕೊಳ್ಳುತ್ತಲೇ ಈ ರೀತಿಯ ಬೇಜಾರು ಬರಿಸುವ ಘಟನೆಗಳಲ್ಲಿ ತೊಡಗುತ್ತಾರೆ. ಬೇಜಾರು ಕಳೆದುಕೊಳ್ಳುವಲ್ಲಿ ಬೇಜಾರು ಬರಿಸುವ ಕಾರ್ಯಗಳಲ್ಲಿ ತೊಡಗಿಕೊಳ್ಳುವದೇ ಒಂದು ಮೂರ್ಖತನವಾಗಿದೆ.

ಇದರಿಂದ ಹೊರಬರುವ ಹಾಗೂ ಸ್ಮರಣೆಯಲ್ಲಿ ಇಟ್ಟುಕೊಳ್ಳಬಹುದಾದ ಸೂಕ್ತವಾದ ಮಾರ್ಗವೆಂದು ಇಲ್ಲಿದೆ.

ಯಾವಾಗ ಯಾವಾಗ ನಿಮಗೆ ಸಮಯ ಮಿಗಿತಾಯವಾಗುತ್ತದೆಯೋ (ಉಳಿಯುತ್ತದೆಯೋ), ಅದು ಕೆಲ ನಿಮಿಷಗಳೂ ಇರಬಹುದು ಅಥವಾ ತಾಸುಗಟ್ಟಳೇ ಇರಬಹುದು, ಆಗ ನಿಮಗೇ ನೀವೇ ಮನದಟ್ಟು ಮಾಡಿಕೊಳ್ಳಲು ಇರುವ ಮಾತೆಂದರೆ, "ಓ, ಕೊನೆಗೂ ನನಗೆ ಈ ರೀತಿಯಲ್ಲಿ ಸಮಯ ದೊರೆಯುತ್ತಿದೆ, ನನ್ನ ಜೀವನದ ಉದ್ದೇಶವೇನು ಎಂದು ತಿಳಿದುಕೊಳ್ಳಲು ಇದನ್ನು ಉಪಯೋಗಿಸಿಕೊಳ್ಳಬೇಕಾಗಿದೆ, ಈ ಮೂಲಕ 'ಆ ಸತ್ಯವನ್ನು' ಮತ್ತು 'ಆ ಶಾಶ್ವತ'ವನ್ನು ಅರಿತುಕೊಳ್ಳಬೇಕಿದೆ." ಎಂದು ಹೇಳಿಕೊಳ್ಳಬೇಕಾಗಿದೆ. ಈ ರೀತಿಯಲ್ಲಿ ನೀವು ನಿಮ್ಮನ್ನು ತೊಡಗಿಸಿಕೊಂಡಲ್ಲಿ, ಆಗ ನಿಮ್ಮ ಸುತ್ತಲೂ

ಬಾಹ್ಯದಲ್ಲಿ ಇರುವ ಯಾವುದೇ ವಾತಾವರಣವೂ ನಿಮ್ಮನ್ನು ಏನೂ ಮಾಡಲಾರದು. ಈ ಮೂಲಕ ಅತಿ ಶೀಘ್ರವಾಗಿ ನೀವು ಪ್ರಗತಿ ಸಾಧಿಸಿಕೊಳ್ಳುತ್ತಿದ್ದೀರಿ ಎನ್ನುವದೂ ನಿಮಗೆ ಅರಿವಾಗುತ್ತದೆ. ಕೇವಲ ಭವಕ್ಕೆ ಸಂಬಂಧಿಸಿದ ವಸ್ತುಗಳ ಬಗೆಗೆ, ವಿಷಯಗಳ ಬಗೆಗೆ ಅಥವಾ ಅನುಪಯುಕ್ತವಾಗಿರುವ ವಿಷಯಗಳ ಬಗೆಗೆ ಹರಟೆಯಲ್ಲಿ ತೊಡಗಿಕೊಳ್ಳುವದರ ಬದಲು, ಉತ್ತಮವಾಗಿರುವ ವಿಷಯಗಳ ಕುರಿತು ಯೋಚಿಸಿ, ಇಲ್ಲಿ ನಾನು ಇತರೇ ಹುಚ್ಚುತನದ ವಿಷಯದ ಕುರಿತು ಏನನ್ನೂ ಹೇಳುವದಿಲ್ಲ. ಏಕೆಂದರೆ ಅವು ತೀವ್ರಾತಿತೀವ್ರವಾದ ಉಗ್ರತೆಯಿಂದ ಕೂಡಿವೆ. ಇಂತಹ ವಿಷಯಗಳಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳುವ ಮೂಲಕ ನಿಮಗೆ ನೀವೇ ಜಿಗುಪ್ಸೆಗೊಳ್ಳುವಂತೆ ಆಗದೇ, ನಿಮಗೆ ಲಭ್ಯವಾಗಿರುವ ಈ ಸಮಯವನ್ನು ಅದು ಎಷ್ಟೇ ಸಣ್ಣ ಅವಧಿಯಾದರೂ, ಸದುಪಯೋಗಪಡಿಸಿ–ಕೊಂಡಲ್ಲಿ, ನೀವು ನಿಮ್ಮ ಇಂತಹ ಅವಕಾಶವನ್ನು ಗುರುತಿಸಿಕೊಳ್ಳದೇ ನಿಮ್ಮ ಮುಕ್ಕಾಲು–ಪಾಲು ಅವಕಾಶವನ್ನು ಕಳೆದುಕೊಂಡಿದ್ದೀರಿ. ಹಾಗಾಗುತ್ತಲೇ ಹೋದಲ್ಲಿ ನಿಮಗೆ ನಿಮ್ಮ ಉದ್ದೇಶವನ್ನು ಸಾಧಿಸಿಕೊಳ್ಳಲು ಮತ್ತೂ ಹೆಚ್ಚಿನ ಅವಧಿ ಬೇಕಾಗುತ್ತದೆ. ಈ ರೀತಿಯ ಕಾರ್ಯ ಒಳ್ಳೆಯದಲ್ಲ. ನೀವು ಸಕ್ಷಮರಾಗಿರಲು, ನಿತ್ಯನೂತನವಾಗಿರಲು, ಪ್ರಶಾಂತವಾಗಿರಲು ಮತ್ತು ಚಿತ್ತದ ಸಮತೋಲವನ್ನು ಸಾಧಿಸಿಕೊಳ್ಳಲು ಇದೊಂದು ಸುಸಂದರ್ಭವಾಗಿದೆ. ಇಲ್ಲಿ ಲಭ್ಯವಿರುವ ಕೆಲವೇ ಕ್ಷಣಗಳಲ್ಲಿ, ನಿಮ್ಮ ಜೀವನದ ನೈಜ ಉದ್ದೇಶವನ್ನು ಅರಿತುಕೊಳ್ಳಲು ಸದುಪಯೋಗ ಮಾಡಿಕೊಳ್ಳಿ. ಏಕೆಂದರೆ ಇಂತಹ 'ಕ್ಷಣವು' ನಿಮ್ಮ ಎದುರಿಗೆ ಇದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/250–51**

## ವಿಭಿನ್ನ ನೆಲೆಯ ದಿನಮಾನಗಳಲ್ಲಿಯೇ ಸಾಗುವದು ಅನಿವಾರ್ಯವಾಗಿದೆ

ನಾವು ಅಧ್ಯಯನ ಮಾಡುತ್ತೇವೆ, ಅರಿತುಕೊಳ್ಳಲು ಯತ್ನಿಸುತ್ತೇವೆ, ತಿಳಿಸಿಕೊಡಲೂ ಯತ್ನ ನಡೆಸಲಾಗುತ್ತದೆ, ಇದೆಲ್ಲವನ್ನೂ ಮನನ ಮಾಡಿಕೊಳ್ಳಲೂ ಪ್ರಯತ್ನಿಸುತ್ತಲೇ ಇರುತ್ತೇವೆ. ಆದರೆ ಲಕ್ಷಾಂತರ ಲಕ್ಷಾಂತರ ಶಬ್ದಗಳಲ್ಲಿ, ನೂರಾರು ಸ್ಪಷ್ಟೀಕರಣಗಳಲ್ಲಿ ಹೇಳಲಾಗದುದನ್ನು, ಕೇವಲ ಒಂದೇ ಒಂದು ನಿಮಿಷದ ಅನುಭವ ನಮಗೆ ಸರ್ವಸ್ವವನ್ನೂ ಮನದಟ್ಟು ಮಾಡಿಕೊಡುತ್ತದೆ.

ಹಾಗಾದರೆ ಅನುಭವವನ್ನು ಹೇಗೆ ಪ್ರಾಪ್ತಿ ಮಾಡಿಕೊಳ್ಳುವದು ಎನ್ನುವ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ.

ಇದಕ್ಕೆ ಉತ್ತರವೆಂದರೆ, ನಮ್ಮಲ್ಲಿಯೇ ನಾವು ನಮ್ಮನ್ನು ಕಂಡುಕೊಳ್ಳಲು ನಮ್ಮಂತರಂಗದಲ್ಲಿ ಪ್ರವೇಶಿಸುವದಾಗಿದೆ. ಇದೇ ಇಲ್ಲಿರುವ ಪಥದಲ್ಲಿ ಪ್ರಪ್ರಥಮ ಹೆಜ್ಜೆಯಾಗಿದೆ. ಯಾವಾಗ ಈ ರೀತಿಯ ಅಂತರಂಗದಲ್ಲಿ ಗಾಢವಾಗಿ ಪ್ರವೇಶಿಸಲು ಸಾಧ್ಯವಾಗುತ್ತದೆಯೋ, ಈ ಮೂಲಕ ವಾಸ್ತವದಲ್ಲಿಯ ಸ್ಥಿತಿಯಲ್ಲಿಯೇ ವಿಸ್ತಾರವನ್ನು ವ್ಯಾಪ್ತತ್ವವನ್ನು ಕಾಣಲು ಸಾಧ್ಯವಾಗುತ್ತದೆಯೋ, ಅಂದರೆ ಬ್ರಹ್ಮಾಂಡದಷ್ಟು ಸುವ್ಯಾಪ್ತಗೊಳ್ಳುವ ಸ್ಥಿತಿಯನ್ನು ತಲುಪಲು ಸಾಧ್ಯವಾಗುತ್ತದೆಯೋ, ಆಗ ಈ ನಿಸ್ಸೀಮದ ಅನುಭವವು ಬೋಧವಾಗುತ್ತದೆ. ಇದು ಎರಡನೆಯ ಹೆಜ್ಜೆಯಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/19–20**

## ಪರಿಶಿಷ್ಟ

## ದಿಲೀಪ ಕುಮಾರ ರಾಯ ಅವರ ಅಂತಿಮ ದಿನಗಳು

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಆರೋಗ್ಯದ ಕಾರಣಗಳಿಂದ 1979ರ ಸೆಪ್ಟೆಂಬರ್ ತಿಂಗಳ ಕೊನೆಯಲ್ಲಿ ಪುಣೆಯನ್ನು ಬಿಡಬೇಕೆಂದು ವೈದ್ಯರು ಸಲಹೆ ನೀಡಿದರು. ದಾದಾಜಿ (ದಿಲೀಪ ಕುಮಾರ್ ರಾಯ್ ಅವರನ್ನು ಅವರ ಮಕ್ಕಳು/ಅನುಯಾಯಿಗಳು ಅಕ್ಕರೆಯಿಂದ ದಾದಾಜಿ ಎಂದು ಕರೆಯುತ್ತಿದ್ದರು) ಅವರ ಪುತ್ರರಲ್ಲಿ ಓರ್ವರಿಗೆ ಈ ಸ್ಥಳ ಬದಲಾವಣೆಯು ಅವಶ್ಯಕವಾಗಿತ್ತು.

ಒಂದು ಪ್ರಬಲವಾದ ಹಿಂಜರಿಕೆ ಮತ್ತು ಒಂದು ಪ್ರಬಲವಾದ ಭಯವು ದಾದಾಜಿಯವರ ಪುತ್ರರೊಬ್ಬರ ಹೃದಯವನ್ನು ಬಿಗಿಯಾಗಿ ಹಿಡಿದುಕೊಂಡಿದ್ದವು. ಈ ಸಲ ನಾವು ಮುಂಬೈಗೆ ಹೋಗುವುದು ಬೇಡ ದಾದಾ, ಭೀಕರವಾದ ಏನೋ ಒಂದು ಘಟನೆ ಅಲ್ಲಿ ಘಟಿಸಲಿದೆ ಎನ್ನುವುದು ದಾದಾಜಿ ಅವರ ಪುತ್ರಿಯ ವಾದವಾಗಿತ್ತು. ಆದರೆ ದಾದಾಜಿಯವರು ಈ ವಿಷಯದಲ್ಲಿ ನಿಷ್ಠುರವಾಗಿದ್ದರು. ಅವರ ಉತ್ತರ ಹೀಗಿತ್ತು: "ನಾವು ಅಲ್ಲಿಗೆ ಹೋಗಲೇಬೇಕು, ಅಲ್ಲಿ ನನ್ನ ಆರೋಗ್ಯ ಸುಧಾರಿಸುವುದು." ಮೂವತ್ತು ವರ್ಷಗಳಲ್ಲಿ ಮೊದಲ ಬಾರಿಗೆ ದಾದಾಜಿಯವರು ತಮ್ಮ ಪುತ್ರಿಯ ಮಾತುಗಳಿಗೆ ಕಿವಿಗೊಡಲಿಲ್ಲ. ಸೆಪ್ಟೆಂಬರ್ 30ರಂದು, ದಾದಾಜಿಯವರು ತಮ್ಮ ಸಂಗಡಿಗರೊಂದಿಗೆ ಮುಂಬೈಗೆ ಪ್ರಯಾಣ ಬೆಳೆಸಿದರು.

ಮಾರನೆ ದಿನ ದಾದಾಜಿಯವರು ಬೆಳಗಿನ ಜಾವ ಎದ್ದು "ಅದ್ಭುತ! ಅದ್ಭುತ!" ಎಂದು ಉದ್ಗರಿಸಿದರು. ನನ್ನ ಕನಸಿನಲ್ಲಿ ರಾಧಾರಾಣಿಯವರು ನನ್ನನ್ನು ಆಶೀರ್ವದಿಸಿದರು. ಅವಳು ನನ್ನೆದುರಿಗೆ ನಿಂತಿದ್ದನ್ನು ನಾನು ಕಂಡೆ. ಅವಳ ಸೌಂದರ್ಯವನ್ನು ವರ್ಣಿಸುವುದು ಕಷ್ಟದ ಕೆಲಸ. ನಾನು ಭಾವಪರವಶನಾಗಿದ್ದೆ, ನನ್ನ ತಂದೆಯವರು ರಾಧಾರಾಣಿಯ ಮೇಲೆ ಸಂಯೋಜಿಸಿದ್ದ ಗೀತೆಯನ್ನು ಹಾಡಲು ಪ್ರಾರಂಭಿಸಿದೆ. ಆ ಹಾಡು ಹೀಗಿದೆ: "ಕೀ ದಿಯೆ ಶಾಜಬೊ ಮಧುರ ಮೂರೊತಿ." ಆ ಹಾಡನ್ನು ಹಾಡಿದಾದ ಮೇಲೆ ನಾನು ಅವಳ ಪಾದಗಳ ಮೇಲೆ ಬಿದ್ದುಬಿಟ್ಟೆ. ಆಗ ರಾಧಾರಾಣಿಯು ತನ್ನ ಮನಮೋಹಕ ನಗೆಯೊಂದಿಗೆ ನನ್ನೆಡೆ ನೋಡಿ ಹೀಗೆಂದರು: "ಇನ್ನೊಮ್ಮೆ ಹಾಡು, ಅದು ಅತ್ಯಂತ ಸುಂದರವಾಗಿದೆ." ನಾನು ಆನಂದದಲ್ಲಿ ಅದನ್ನು ಮತ್ತೊಮ್ಮೆ ಹಾಡಿದೆ. ಓಹ್, ಎಂತಹ ಸೌಂದರ್ಯ! ಎಂತಹ ದಯೆ! ರಾಧಾರಾಣಿಯು ನನ್ನನ್ನು ನನ್ನ ಕನಸಿನಲ್ಲಿ ಹರಸಿದರು!"

ದಾದಾಜಿ, ಈ ಅದ್ಭುತ ದರ್ಶನವನ್ನು ಪಡೆದುಕೊಂಡ ನೀವೇ ಧನ್ಯರು, ಈ ಕನಸಿನ ಬಗ್ಗೆ ಇನ್ನೊಂಚೂರು ಹೇಳಿ ಎಂದು ಒಬ್ಬ ಭಕ್ತನು ವಿನಂತಿಸಿಕೊಂಡ. "ಹೌದು! ಅದೊಂದು ಮಹಾನ್ ಆಶೀರ್ವಾದ, ಅದನ್ನು ಒಂದು ಕವನದ ರೂಪದಲ್ಲಿ ವರ್ಣಿಸಬಲ್ಲೆ" ಎಂದು ದಾದಾಜಿಯವರು ಬಂಗಾಳಿಯಲ್ಲಿ ಒಂದು ಸುಂದರವಾದ ಕವನವನ್ನು ಬರೆದರು ಮತ್ತು ಅದನ್ನು ಅಲ್ಲಿಯೇ ಬಂಗಾಳಿ ಅಲ್ಲದ ಸ್ನೇಹಿತರಿಗಾಗಿ ಆಂಗ್ಲ ಭಾಷೆಗೆ ಅನುವಾದ ಮಾಡಿದರು.

ದಾದಾಜಿಯವರ ಅರೋಗ್ಯ ಚೆನ್ನಾಗಿತ್ತು. ಅವರು ದಿನಾಲೂ ಎಂಟರಿಂದ ಒಂಬತ್ತು ಗಂಟೆಗಳ ಕಾಲ ಗೀತೆಯನ್ನು (ಭಗವದ್ಗೀತೆ) ಬೆಂಗಾಲಿ ಭಾಷೆಗೆ ಸರಳ ವಚನಗಳನ್ನಾಗಿ ಅನುವಾದಿಸುತ್ತಿದ್ದರು, ಅನುವಾದಿಸಿದ್ದನ್ನು ಓದುತ್ತಿದ್ದರು, ಪಠಣ ಮಾಡುತ್ತಿದ್ದರು, ವಾಚನ ಮಾಡುತ್ತಿದ್ದರು, ತಮ್ಮದೇ ಆದ ಅನುಪಮ ರೀತಿಯಲ್ಲಿ ಅದನ್ನು ಹಾಡುತ್ತಿದ್ದರು. ಮಧ್ಯಾಹ್ನದ ಅಥವಾ ರಾತ್ರಿಯ ಊಟದ ನಂತರ ಆರಾಮ ಖುರ್ಚಿಯಲ್ಲಿ ವಿರಮಿಸುವುದು ಮತ್ತು ಒಂದು ಗಂಟೆ ಅಥವಾ ಅದಕ್ಕೂ ಹೆಚ್ಚು ಕಾಲ ಓದುವುದು ಅವರ ಅಭ್ಯಾಸವಾಗಿತ್ತು. ಅವರು, ಪ್ರತಿ ರಾತ್ರಿಯೂ, ಸಾವಿತ್ರಿ, ರಾಮಕೃಷ್ಣ ಕಥಾಮೃತ, ಗೀತಾ ಮತ್ತು ಉಪನಿಷತ್ತುಗಳನ್ನು ಓದುತ್ತಿದ್ದರು. ಅವರು, ವೋಡೆಹೌಸನ ಪುಸ್ತಕಗಳನ್ನು ಮಧ್ಯಾಹ್ನ ಅಗಾಗ ಓದುತ್ತಿದ್ದರು. ಅವರು ಮುಂಬೈನಲ್ಲಿ ಇದ್ದಾಗ ಮಧ್ಯಾಹ್ನದ ಊಟದ ನಂತರ ಒಂದು ಗಂಟೆ ಅಥವಾ ಅದಕ್ಕೂ ಹೆಚ್ಚು ಮತ್ತು ರಾತ್ರಿಯ ಊಟದ ನಂತರ ಮಧ್ಯರಾತ್ರಿಯವರೆಗೆ ಗೀತೆಯ

ಅನುವಾದದ ಕೆಲಸ ಮಾಡುತ್ತಿದ್ದರು. ಸಾಯಂಕಾಲದ ಸಮಯದಲ್ಲಿ ಅವರು ಉಪನ್ಯಾಸಗಳನ್ನು ನೀಡುತ್ತಿದ್ದರು, ಅವರ ಅನುಯಾಯಿಗಳೊಂದಿಗೆ ಹಾಡುತ್ತಿದ್ದರು ಮತ್ತು ಎಲ್ಲೆಲ್ಲಿಯೂ ಆನಂದವನ್ನು ಹಾಗೂ ಸಾಮರಸ್ಯವನ್ನು ಹರಡುತ್ತಿದ್ದರು. ಅವರನ್ನು ಭೇಟಿ ಮಾಡಿದವರೆಲ್ಲರೂ ಈ ಆನಂದವನ್ನು ಅನುಭವಿಸುತ್ತಿದ್ದರು.

ಎರಡು ವರ್ಷಗಳ ಹಿಂದೆ ದಾದಾಜಿಯವರು ತಮ್ಮ ಸ್ನೇಹಿತರಾದ ಶ್ರೀ ಗಂಗಾಶರಣ ಸಿನ್ಹಾ ಅವರೊಡನೆ ಶ್ರೀ ಜಯಪ್ರಕಾಶ ನಾರಾಯಣ್ ಅವರನ್ನು ನೋಡಲು ಹೋಗಿದ್ದರು. “ಎಂತಹ ಅದ್ಭುತ ಮನುಷ್ಯ, ಅವನು ತನ್ನ ಸುತ್ತ ಒಂದು ಆನಂದದ ಪ್ರಭಾ ವಲಯವನ್ನೇ ಹೊತ್ತಿದ್ದಾನೆ” ಎಂದು ಶ್ರೀ ಜಯಪ್ರಕಾಶ ನಾರಾಯಣ್‌ರವರು ಹೇಳಿದ್ದನ್ನು ಶ್ರೀ ಸಿನ್ಹಾ ಅವರು ಭೇಟಿಯ ನಂತರ ನಮಗೆ ಹೇಳಿದರು.

ನವೆಂಬರ್ 11ರಂದು ದಾದಾಜಿಯವರಲ್ಲಿ ಕೊಂಚ ಕೆಮ್ಮು ಕಾಣಿಸಿಕೊಂಡಿತು. ಅದು ಎರಡೇ ದಿನದಲ್ಲಿ ಬ್ರಾಂಕೈಟಿಸ್(ಶ್ವಾಸನಾಳಗಳಲ್ಲಿ ಉರಿಯೂತದ ತೊಂದರೆ)ನಲ್ಲಿ ಬದಲಾಯಿತು. ನಂತರ ಅದಕ್ಕೆ ಸಂಬಂಧಿಸಿದ ತೊಡಕುಗಳು ಕಾಣಿಸಲಾರಂಭಿಸಿದವು. ತಾವು ದಿನಾಲು ಸ್ನಾನ ಮಾಡಬೇಕೆಂದು ಪಟ್ಟು ಹಿಡಿಯುತ್ತಿದ್ದರು. ವೈದ್ಯರು ಅವರಿಗೆ ಹಾಗೆ ಮಾಡಲು ಅನುಮತಿ ಕೊಟ್ಟರು. ನವೆಂಬರ್ 17ನೇ ಸಾಯಾಂಕಾಲ ದಾದಾಜಿಯವರು ಸಂಪೂರ್ಣವಾಗಿ ಕುಸಿದುಹೋದರು – ಅದಾದ ನಂತರ ಅವರು ಹಾಸಿಗೆಯನ್ನು ಬಿಡಲಾಗಲಿಲ್ಲ. ದಾದಾಜಿಯವರು ಜ್ವರದಿಂದ ಕೆಲವು ದಿನ ಬಳಲಿದರು. ಆದರೆ ಒಂದು ವಾರದ ಸಮಯದಲ್ಲಿ, ಅವರು ಚೇತರಿಸಿಕೊಂಡಿದ್ದಾರೆ ಮತ್ತು ಅವರ ಆರೋಗ್ಯ ಚೆನ್ನಾಗಿದೆ ಎಂದು ವೈದ್ಯರು ಹೇಳಿದರು. ದಾದಾಜಿಯವರು ಬೇರೆಯದೆ ಒಂದು ರಾಗವನ್ನು ಹಾಡುತ್ತಿದ್ದರು – “ನನಗೆ ತಿಳಿಯುತ್ತಿಲ್ಲ, ಆದರೆ ತಿಳಿಯಲಾರದ್ದೂ ಸಹ ಯೋಜನೆಯ ಭಾಗವೆಂದು ನನಗೆ ಗೊತ್ತು, ನನಗೇಕೆ ತಿಳಿಯುತ್ತಿಲ್ಲವೆನ್ನುವುದು ನನಗೆ ಗೊತ್ತು.” ಅವರು ಹೀಗೆ ಹೇಳಲು ಪ್ರಾರಂಭಿಸಿದರು:

“ನನಗಾಗಿ ದುಃಖಿಸಬೇಡಿ! ಸಾವೆನ್ನುವುದು ಒಂದು ದುರಂತದ ಸಂಗತಿಯಲ್ಲ, ಜೀವನ ವ್ಯರ್ಥವಾಗುವುದೇ ಒಂದು ದುರಂತದ ಸಂಗತಿ!”

“ದಾದಾ, ನೀವು ಚೆನ್ನಾಗಿದ್ದೀರಿ, ಸ್ವಲ್ಪ ಸಮಯದ ನಂತರ ಮತ್ತೆ ನೀವು ನಿಮ್ಮ ಕಾಲ ಮೇಲೆ ನಿಲ್ಲುವಿರಿ ಎಂದು ವೈದ್ಯರು ಹೇಳಿದ್ದಾರೆ, ಸಾವಿನ ಬಗ್ಗೆ ಏಕೆ ಮಾತನಾಡುತ್ತಿರುವಿರಿ?” ಎಂದು ಓರ್ವ ಭಕ್ತ ಕೇಳಿದ.

ಅವರು ನಗುತ್ತ ಮತ್ತು ಕಣ್ಣನ್ನು ಮಿಟುಕಿಸುತ್ತ ಹೀಗೆ ಉತ್ತರಿಸಿದರು: "ವೈದ್ಯರು ಒಂದು ಆಹ್ಲಾದಕರವಾದ ಭ್ರಮೆಯಲ್ಲಿದ್ದಾರೆ."

ಅವರು ನವೆಂಬರ್ 23 ರಂದು ತಮ್ಮ ಸ್ವಂತ ಕೈಯಿಂದ ಒಂದ ಬಂಗಾಲಿ ಕವಿತೆಯನ್ನು ರಚಿಸಿದರು ಮತ್ತು ಅದನ್ನು "ಕೊನೆಯ ಪ್ರಾರ್ಥನೆ (The Last Prayer)" ಎಂದು ಕರೆದರು. ಅದರ ಸಮರ್ಪಕವಲ್ಲದ ನನ್ನ (ಈ ಲೇಖನದ ಲೇಖಕರು) ಅನುವಾದ ಹೀಗಿದೆ:

ದೇವರೆ, ಈ ಮಾರ್ಗವಲ್ಲ, ಆ ಮಾರ್ಗವಲ್ಲ,
ಈಗ ನಿನ್ನ ಮಾರ್ಗ ಮಾತ್ರ, ಪ್ರೇಮ! ನಾನು ಆ ಮಾರ್ಗದಲ್ಲಿ ನಡೆಯುವೆ.
ಭಗವಂತ, ಈ ಶಬ್ದಗಳಲ್ಲ, ಆ ಶಬ್ದಗಳಲ್ಲ,
ಈಗ ನಿನ್ನ ಶಬ್ದಗಳು ಮಾತ್ರ, ಪ್ರೇಮ! ನಾನು ಆ ಶಬ್ದಗಳನ್ನಾಡುವೆ.
ಬಾ, ನನ್ನ ಕೈಯನ್ನು ಹಿಡಿದುಕೊ, ನೀನು ನನ್ನ ಬಾಳಿನ ಬೆಳಕೆಂದು ಕರೆಯುತ್ತೇನೆ, ನನ್ನನ್ನು ಮನ್ನಡೆಸು, ಮುನ್ನಡೆಸು.
ನಾನು ಏನನ್ನೂ ಕೇಳುವುದಿಲ್ಲ, ನನ್ನದೆಲ್ಲವನ್ನೂ ಕೊಡುತ್ತೇನೆ, ನನ್ನ ಹೃದಯ ಬೆಳಗುತ್ತಿದೆ, ಎಲ್ಲ ಛಾಯೆಗಳು ಮರೆಯಾಗಿವೆ.

ಗೀತೆಯ ಆರನೆ ಅಧ್ಯಾಯದ, ನಲವತ್ತನೆ ಶ್ಲೋಕವನ್ನು ಪುನರಾವರ್ತಿಸುತ್ತ, ತಮ್ಮ ಡೈರಿಯಲ್ಲಿ 1979, ನವೆಂಬರ್ 23 ನೇ ದಿನ ಬರೆದರು:

"ನನ್ನ ಸಖನೆ, ದಿಟವಾದ ಆಕಾಂಕ್ಷಿಯು ಈ ಲೋಕದಲ್ಲಾಗಲಿ,
ಪರಲೋಕದಲ್ಲಾಗಲಿ ಎಂದಿಗೂ ಶೋಕ ಪಡುವುದಿಲ್ಲ."

**– ದಿಲೀಪ ಕುಮಾರ್ ರಾಯ್**

ಅದನ್ನು ಅವರು ಬಂಗಾಲಿ ಮತ್ತು ಸಂಸ್ಕೃತದಲ್ಲಿ ಸಹಿತ ಬರೆದರು.

ದಾದಾಜಿಯವರು ಎಂದಿನಂತೆ ಲವಲವಿಕೆಯಿಂದ ನಗುತ್ತ, ಆನಂದದಿಂದ, ಚೈತನ್ಯರಾಗಿ ಇರಲಿಲ್ಲವಾದರೂ, ಅವರು ಪ್ರಶಾಂತವಾಗಿದ್ದರು, ಹೆಚ್ಚಾಗಿ ಧ್ಯಾನಸ್ಥ–ರಾಗಿರುತ್ತಿದ್ದರು, ಪ್ರೀತಿಪೂರ್ಣವಾಗಿದ್ದರು, ಚಿಕ್ಕ ಸಹಾಯ ಮಾಡಿದವರಿಗೂ ಕೃತಜ್ಞತೆ ಹೇಳುತ್ತಿದ್ದರು ಮತ್ತು ಇತರರಿಗೆ ಯಾವುದೇ ರೀತಿಯ ತೊಂದರೆ ಕೊಡುವುದು ಅವರಿಗೆ ಇಷ್ಟವಿರಲಿಲ್ಲ. "ನಾನು ನಿಮಗೆ ಬಹಳೇ ತೊಂದರೆಯನ್ನು ಕೊಡುತ್ತಿದ್ದೇನೆ ಆದರೆ ನಾನು ನಿಮ್ಮನ್ನು ಸರಿಯಾದ ಮಾರ್ಗಕ್ಕೆ ತಂದಿಲ್ಲವೆಂದು ನೀವು ಹೇಳಬಾರದು – ನಿಮ್ಮನ್ನು ಸಾಧ್ಯವಾಗಬಹುದಾದ ಅತ್ಯುನ್ನತ ಮಾರ್ಗಕ್ಕೆ ಕರೆತಂದಿರುವೆ."

ನವೆಂಬರ್ 26ನೇ ದಿನ ದಾದಾಜಿಯವರು ತಮ್ಮ ಶಿಷ್ಯರಿಗೆ ಹೀಗೆ ಹೇಳಿದರು: "ದಾದಾಜಿಯವರು ಯಾತಕ್ಕಾಗಿ ಜನ್ಮ ತಾಳಿದ್ದರು, ಅವರು ಜೀವನದ ಗುರಿ ಏನಾಗಿತ್ತು ಎಂದು ಜನರು ನಿಮ್ಮನ್ನು ಕೇಳಿದರೆ; ನನ್ನ ಸಂಗೀತ, ಸಾಹಿತ್ಯ ಅಥವಾ ಮತ್ತಿನ್ನೇನೊ ಅಥವಾ ನನ್ನ ಆಕಾಂಕ್ಷೆಯ ಬಗ್ಗೆಯೂ ಕೂಡ ಹೇಳಬೇಡಿ. ದಾದಾಜಿಯವರು ಜನಿಸಿದ್ದು ಪ್ರೀತಿಸುವುದಕ್ಕಾಗಿ, ಅವರ ಜೀವನದ ಗುರಿ ಎಲ್ಲರನ್ನೂ ಪ್ರೀತಿಸುವುದಾಗಿತ್ತು, ಯಾವುದೇ ತಾರತಮ್ಯವಿಲ್ಲದೆ ಎಲ್ಲರನ್ನು ಪ್ರೀತಿಸುವುದು ಮತ್ತು ದೇವರನ್ನು ಪ್ರೀತಿಸುವುದಾಗಿತ್ತು ಎಂದು ಮಾತ್ರ ಹೇಳಿರಿ." ಮುಂದುವರೆದು ಅವರು ಮತ್ತೆ ಹೀಗೆ ಹೇಳಿದರು: "ದೇವನ ಅನುಗ್ರಹವು ಅತ್ಯುನ್ನತವಾದ ಸತ್ಯವೆನ್ನುವುದನ್ನು ನಾನು ಅರಿತುಕೊಂಡಿದ್ದೇನೆ. ನಾನು ಸಾವನ್ನು ಕೇಳದೆ ಇದ್ದರೂ, ಜೀವನಕ್ಕಾಗಿ ಹಂಬಲಿಸುವುದಿಲ್ಲ." ಫೆಬ್ರವರಿ ಅಂತ್ಯದಲ್ಲಿ ಬಂಗಾಲಿಯಲ್ಲಿ ಹೀಗೆ ಹೇಳಿ ಬರೆಸಿದರು: ಕಾಲೊ ಹೊಯೆಯ್‌ಆಲೊ ಛುಯೆ ತೊ ಮಾರೊ ತಾಪೂನ್: ನಿಮ್ಮ ಸೂರ್ಯನನ್ನು ಕತ್ತಲೆಯು ಸ್ಪರ್ಶಿಸಿದಾಗ ಅದು ಬೆಳಕಾಗುತ್ತದೆ. "ನಾನು ಬೆಳಕನ್ನು ಮುಟ್ಟಿಲ್ಲ" ಎಂದು ದಾದಾಜಿ ಹೇಳಿದರು.

ಡಿಸೆಂಬರ್ ಮೊದಲನೆ ವಾರದಲ್ಲಿ ದಾದಾಜಿಯವರು ತಮ್ಮ ಸಂಗಡಿಗರನ್ನು ಕೇಳಿದರು: "ನಾನು ಏನಾದರು ಸ್ವತ್ತನ್ನು ಹೊಂದಿದ್ದೇನೆಯೆ? ಮಂದಿರದ ವಿಷಯ ಏನಾಯಿತು?"

"ದಾದಾಜಿಯವರೆ ನೀವು ಯಾವುದೇ ಆಸ್ತಿಯನ್ನು ಹೊಂದಿಲ್ಲ, ನಾವು ಟ್ರಸ್ಟಿಗಳು ಮಾತ್ರ – ನೀವು ಕರೆಯುವಂತೆ ನಾವು ಸೇವಕರು ಮಾತ್ರ."

"ನನ್ನ ಹತ್ತಿರ ಯಾವುದೇ ವೈಯಕ್ತಿಕ ಆಸ್ತಿ, ಏನಾದರು ಹಣ ಇದೆಯೆ?" ದಾದಾಜಿಯವರು ಕೇಳಿದರು.

"ಇಲ್ಲ ದಾದಾಜಿಯವರೆ! ನೀವು ವೈಯಕ್ತಿಕವಾಗಿ ಏನನ್ನೂ ಹೊಂದುವ ಹಾಗಿಲ್ಲವೆಂದು ಯಾವಾಗಲೂ ಆಗ್ರಹಿಸುತ್ತಿದ್ದಿರಿ" ಒಬ್ಬ ಭಕ್ತನು ಉತ್ತರಿಸಿದನು.

"ನಾನೆಷ್ಟು ಆನಂದದಿಂದ ಇದ್ದೇನೆಂದರೆ, ನಾನು ಯಾಚಕನಾಗಿ, ಆ ಭಗವಂತನ ಹೆಸರಿನಲ್ಲಿ ಸಾಯುತ್ತೇನೆ" ಎಂದು ಪದೆ ಪದೆ ಹೇಳಿದರು.

"ನಾನು ಯಾವಾಗಲೂ ಪ್ರಾಮಾಣಿಕನಾಗಿರಬೇಕೆಂದು ಬಯಸಿದ್ದೆ. ನನ್ನ ಕಡೆಯಿಂದ ಯಾವುದೇ ಆತ್ಮವಂಚನೆ ಆಗಬಾರದು ಎಂದು ನಾನು ಯಾವಾಗಲೂ ಬಹಳ ಎಚ್ಚರಿಕೆಯಿಂದ ಇರುತ್ತೇನೆ. ನಾನು ಭಗವಂತನನ್ನು ಹೊರತುಪಡಿಸಿ

ಬೇರೇನೂ ಬಯಸಲಿಲ್ಲ ಎಂದು ನಿಮಗೆ ಗೊತ್ತು. ನಾನು ಭಗವಂತನ ಹೆಸರಿನಲ್ಲಿ ಒಬ್ಬ ಯಾಚಕನಾಗಿ ಸಾಯುತ್ತೇನೆ ಎನ್ನುವುದನ್ನು ನಡೆಸಿಕೊಟ್ಟಿದ್ದೇನೆ."

"ನನ್ನ ಆರೋಗ್ಯಕ್ಕಾಗಿ ಪ್ರಾರ್ಥಿಸಬೇಡಿ, ಆ ಭಗವಂತನ ಪಾದಗಳಲ್ಲಿ ನನ್ನ ಶರಣಾಗತಿಯು ಪೂರ್ಣವಾಗಲೆಂದು ಮಾತ್ರ ಪ್ರಾರ್ಥಿಸಿರಿ."

ಅನಾರೋಗ್ಯದ ಚಡಪಡಿಕೆ ಅಥವಾ ಖಿನ್ನತೆ ಅವರ (ದಾದಾಜಿಯವರ) ಸುತ್ತ ಇರದಿರುವುದು ವಿಚಿತ್ರವಾದರೂ ಸತ್ಯವಾಗಿತ್ತು. ಅವರ ಕೋಣೆಯನ್ನು ಪ್ರವೇಶಿಸಿದವರು ಆ ವಾತಾವರಣದಲ್ಲಿ ಗಾಢವಾದ ಪ್ರಶಾಂತತೆಯನ್ನು ಅನುಭವಿಸುತ್ತಿದ್ದರು.

"ನಾನು ಗಾಢವಾದ ಶಾಂತ ಸ್ಥಿತಿಯಲ್ಲಿ ಇದ್ದೇನೆ ಎಂದು ದಾದಾಜಿಯವರು ಮತ್ತೆ ಮತ್ತೆ ಹೇಳುತ್ತಿದ್ದರು."

"ನಾನು ಉನ್ನತಾನಂದದ ಸ್ಥಿತಿಯಲ್ಲಿ ಇದ್ದೇನೆ. ನೀವು ಆ ಸ್ಥಿತಿಯಲ್ಲಿ ಇದ್ದೀರಾ?" ಎಂದು ಜನವರಿ 3 ರಂದು ಅವರು ಕೇಳಿದರು.

"ಓ ದೇವರೆ, ಜೀವನದಲ್ಲೂ, ಸಾವಿನಲ್ಲೂ ನನ್ನೊಂದಿಗೆ ನೆಲೆಸು."

"ಗುರುದೇವ ಶ್ರೀ ಅರವಿಂದರು ಬರೆದಿದ್ದರು, ನಾನು ಅವನನ್ನು (ದೇವನನ್ನು) ಹೊಂದಲೇಬೇಕು ಮತ್ತು ಹೊಂದುತ್ತೇನೆ, ಆದ್ದರಿಂದ ಇದು ನನ್ನ ಮಂತ್ರವಾಗಿದೆ, ಎಂತಹ ಶ್ರೇಷ್ಠ ಗುರುವನ್ನು ನಾನು ಹೊಂದಿದ್ದೇನೆ, ನಾನೆ ಧನ್ಯ."

"ನನಗೆ ಯಾವುದೇ ಬಂಧನವಿಲ್ಲ, ಪಶ್ಚಾತ್ತಾಪವಿಲ್ಲ, ನಾನು ಮುಕ್ತ–ನಾನು ಮುಕ್ತ."

ಈ ಮೊದಲು ದಾದಾಜಿಯವರು ಅನಾರೋಗ್ಯದಲ್ಲಿದ್ದಾಗ "ನಾನು ಸಾವಿನ ಪ್ರಪಾತವನ್ನು ದಾಟಿದ್ದೇನೆ ಮತ್ತು ಅವನನ್ನು ಮುಖತಃ ನೋಡಿದ್ದೇನೆ ಮತ್ತು ಎಲ್ಲ ಮನುಷ್ಯರು ಬಯಸುವ ಅತ್ಯಾನಂದವನ್ನು ಅನುಭವಿಸಿದ್ದೇನೆ" ಎಂದು ಹೇಳಿದ್ದರು.

"ಶ್ರೀ ಅನಿರ್ವನ್ ಅವರಂಥ ಹಲವಾರು ಮಹಾನ್ ಯೋಗಿಗಳು ತಮ್ಮ ದೇಹವನ್ನು ತಮ್ಮ ತಲೆಯ ನೆತ್ತಿಯ ಮುಖಾಂತರ ಬಿಟ್ಟಿರುತ್ತಾರೆ. ನಾನು ಆ ಉಪಾಯವನ್ನು ಕಲಿತುಕೊಳ್ಳಬೇಕು ಮತ್ತು ಅವರಂತೆಯೆ ಹೋಗಬೇಕು." (ದಾದಾಜಿಯವರು ಅವರಂತೆಯೆ ತಮ್ಮ ನೆತ್ತಿಯ ಮುಖಾಂತರ ದೇಹವನ್ನು ಬಿಟ್ಟರು.)

ದಾದಾಜಿಯವರ ಪುತ್ರರಲ್ಲೊಬ್ಬರು "ನೀವು ಭಗವಂತನನ್ನು ಕುರಿತು ಧ್ಯಾನಿಸುತ್ತೀರಾ?" ಎಂದು ಕೇಳಿದರು. "ನಾನು ದಿನವಿಡೀ ಏನು ಮಾಡುತ್ತೇನೆಂದು ಯೋಚಿಸುವಿ? ನಾನು ನನ್ನ ಹೃದಯದಲ್ಲಿ ಗಾಢವಾದ ಪ್ರಶಾಂತತೆಯನ್ನು ಅನುಭವಿಸುತ್ತೇನೆ, ನನ್ನ ಸಮರ್ಪಣೆಯು ಈಗ ಪೂರ್ಣಗೊಂಡಿದೆ. ಕೊಳಲು ಈಗಲೂ ನುಡಿಯುತ್ತಲಿದೆ – ಎಂದಿನಂತೆ ಸುಮಧುರವಾಗಿ ಮತ್ತು ಜೋರಾಗಿ, ನಾನು ಅದನ್ನು ಯಾವಾಗಲೂ ಕೇಳುತ್ತೇನೆ." (ಕೊಳಲಿನ ಧ್ವನಿಯನ್ನು ಅವರು ಡಿಸೆಂಬರ್ 17, 1975 ರಿಂದ ಕೇಳುತ್ತಲಿದ್ದರು, ಅದು ಎಂದಿಗೂ ನಿಂತಿಲ್ಲ.)

ಏಳು ವಾರಗಳ ಕಾಲ ಹಾಸಿಗೆಯಲ್ಲಿದ್ದ ದಾದಾಜಿಯವರು ದಿನಾಲೂ ಹೇಳಿದ ಸಂಗತಿಗಳಲ್ಲಿ ಇವುಗಳು ಕೆಲವು ಮಾತ್ರ. ಅವರು ಯಾವಾಗಲೂ ಸುಂದರವಾದ, ವಿವೇಕದ, ವಿನೋದದ ಮತ್ತು ಪ್ರೀತಿಯ ಮಾತುಗಳನ್ನು ಹೇಳುತ್ತಿದ್ದರು. ಅವರು ಒಮ್ಮೆಯೂ ಗೊಣಗಲಿಲ್ಲ, ನರಳಲಿಲ್ಲ, ನಿಟ್ಟುಸಿರನ್ನೂ ಸಹ ಬಿಡಲಿಲ್ಲ. ಅವರಿಗೆ ಮಾಡಿದುದೆಲ್ಲವನ್ನೂ (ಒಂದು ದಿನದಲ್ಲಿ 13 ಇಂಜೆಕ್ಸನ್, ಮತ್ತು ಬೇರೆ) ಅವನಿಗೆ (ಭಗವಂತನಿಗೆ) ಅರ್ಪಿಸುತ್ತ ಶಾಂತಿಯಿಂದ ಮಲಗಿರುತ್ತಿದ್ದರು. ಯಾವುದೇ ಮನವಿಗೂ ಅವರು ಎಂದಿಗೂ ಇಲ್ಲ ಎಂದು ಹೇಳಲಿಲ್ಲ. "ನಾನು ಸಹಕರಿಸುತ್ತಿಲ್ಲವೆ, ಹೌದಲ್ಲವೆ? ಎಂದು ಕೆಲವೊಮ್ಮೆ ಕೇಳುತ್ತಿದ್ದರು.

"ನಾನು ದೈಹಿಕ ನೋವಿನ ವಿರುದ್ಧ ಹೋರಾಡುತ್ತೇನೆ; ಭಗವಂತ ನನ್ನನ್ನು ಅನೇಕ ದೈಹಿಕ ಸಂಕಟಗಳಿಂದ ಉಳಿಸಿದ್ದಾನೆ" ಎಂದು ಯಾವಾಗಲೂ ಹೇಳುತ್ತಿದ್ದವರು. ಅದ್ಭುತ ಸ್ಥೈರ್ಯ ಮತ್ತು ತಾಳ್ಮೆಯಿಂದ ತುಂಬಾ ನೋವನ್ನು ಅನುಭವಿಸಿದರು. ಯಾವಾಗಲೂ ಎಲ್ಲರಿಗೂ ಒಂದು ನಗು, ಪ್ರೀತಿ ಮತ್ತು ಪ್ರೋತ್ಸಾಹದ ಮಾತು.

ಎಲ್ಲ ದೈಹಿಕ ಸಂಕಟ ಮತ್ತು ದೌರ್ಬಲ್ಯದ ಹೊರತಾಗಿಯೂ ಅವರ (ದಾದಾಜಿಯವರ) ಅದ್ಭುತ ಸ್ಮರಣಶಕ್ತಿ ಮತ್ತು ಹಾಸ್ಯ ಪ್ರಜ್ಞೆಯು ಮೊದಲಿನಂತೆಯೆ ಉಳಿದು ಪ್ರಜ್ವಲಿಸುತ್ತಿತ್ತು. ಕೆಲವೇ ದಿನಗಳ ಮೊದಲು ಉದ್ಧೃತಗಳ ಪುಸ್ತಕದಲ್ಲಿ ಏನನ್ನೋ ಹುಡುಕಲು ಪ್ರಯತ್ನಿಸುತ್ತಿರುವ ಅವರ ಮಕ್ಕಳಲ್ಲಿ (ಶಿಷ್ಯರು) ಒಬ್ಬರನ್ನು ಅವರು ಕೇಳಿದರು, "ನೀವು ಏನನ್ನು ಹುಡುಕುತ್ತಿದ್ದೀರಿ?"

ಶಿಷ್ಯ ಉತ್ತರಿಸಿದ: "ನಿನ್ನಷ್ಟಕ್ಕೆ ನೀನು ಪ್ರಾಮಾಣಿಕನಾಗಿರು (to thine own self be true)."

"ಅದು ಹ್ಯಾಮಲೆಟ್‌ನಲ್ಲಿ ಇದೆ" ದಾದಾಜಿಯವರು ತಕ್ಷಣವೆ ಹೇಳಿದರು. ಅದನ್ನು ಪಲೊನಿಯಸ್ ತನ್ನ ಪುತ್ರ ಲಯರ್ಟಿಸ್‌ನಿಗೆ ಹೇಳಿರುತ್ತಾನೆ: ನಿನ್ನಷ್ಟಕ್ಕೆ ನೀನು ಯಾವಾಗಲೂ ಪ್ರಾಮಾಣಿಕನಾಗಿರು, ಆಗ ನಾವು ಯಾರಿಗೂ ಸುಳ್ಳು ಹೇಳಲು ಸಾಧ್ಯವಿಲ್ಲ.

"ನನ್ನ ಮನಸ್ಸು ಬಹಳ ಸ್ಪಷ್ಟವಾಗಿದೆ. ನನ್ನ ಸ್ಮರಣ ಶಕ್ತಿ ಇನ್ನೂ ತೀಕ್ಷ್ಣವಾಗಿದೆಯೊ ಇಲ್ಲೊ ಎಂದು ಪರೀಕ್ಷಿಸಲು ನಾನು ಭಾಗವತ, ಮಾಹಾಭಾರತ, ರವಿಂದ್ರನಾಥ ಟ್ಯಾಗೊರ್, ಸಾವಿತ್ರಿ ಮತ್ತು ಗೀತೆಗಳಿಂದ ಬೇರೆ–ಬೇರೆ ಸ್ತೋತ್ರಗಳನ್ನು ಪಠಿಸುತ್ತಾ ಇರುತ್ತೇನೆ."

ಇನ್ನೊಂದು ದಿನ, ಅವರು ಜೋಂಪಿನಲ್ಲಿರುವಂತೆ ಕಂಡಾಗ, ಅವರ ಶಿಷ್ಯನೊಬ್ಬ ಕೇಳದ: "ದಾದಾಜಿಯವರೆ, ಪ್ರಹ್ಲಾದನ ಶ್ಲೋಕ ನಿಮಗೆ ನೆನಪಿದೆಯೆ?"

"ಮೂಲ ಸಂಸ್ಕೃತವೊ ಅಥವಾ ಇಂಗ್ಲೀಷಿಗೆ ಅನುವಾದ ಮಾಡಿದ್ದೊ?" ಎಂದು ದಾದಾಜಿಯವರು ಕೇಳಿದರು.

"ಸಂಸ್ಕೃತ"

ಅವರು ಆ ಶ್ಲೋಕವನ್ನು ಯಾವುದೇ ತಡವರಿಕೆ ಇಲ್ಲದೆ ಪಠಿಸಿದರು (ಒಮ್ಮೆ ವೈಭವವಾಗಿದ್ದ ಅವರಿ ಧ್ವನಿ ಈಗ ದುರ್ಬಲವಾಗಿದೆ).

ಡಿಸೆಂಬರ್ ಮಧ್ಯಭಾಗದಲ್ಲಿ, ನಿಧಾನವಾಗಿಯಾದರೂ ದಿಗಂತದಲ್ಲಿ ಮೋಡಗಳು ಒಂದಾಗುತ್ತಿದ್ದವು. ವೈದ್ಯರು ದಾದಾಜಿಯವರ ಆರೋಗ್ಯದ ಸ್ಥಿತಿಯು ಉತ್ತಮವೆಂದು ಹೇಳಿದರೂ, ಒಂದು ರೀತಿಯ ನಿರಾಶೆ ಮತ್ತು ಭಯ ಅವರ ಶಿಷ್ಯರೊಬ್ಬರಲ್ಲಿ ಮೂಡಿದವು – ಯಾರೊಬ್ಬರೂ ನಂಬಲು ಮತ್ತು ಹತಾಶರಾಗಲು, ಮತ್ತು ಹೆದರುವ ಒಂದು ಕಾರಣರಹಿತವಾದಂಥ ಭಯ – ಅವರ ಕಾಂತಿಯುಕ್ತ ಮುಖದೆಡೆ ಒಮ್ಮೆ ನೋಡಿ ಅವನು ಹಾಗೆ ಸುಮ್ಮನೆ ಪ್ರಾರ್ಥಿಸಿದನು. ಜನೆವರಿ 6 ರವರೆಗೆ ದಾದಾಜಿಯವರ ಶಕ್ತಿಯಾಗಿದ್ದ ಪುತ್ರಿಯೋರ್ವಳು, ತನ್ನನ್ನು ತಾನು ಅತ್ಯಂತ ಅಸಹಾಯಕ ಹಾಗೂ ದುರ್ಬಲಳಂತೆ ಕಂಡುಕೊಂಡಳು. ದಾದಾಜಿಯವರು, 1949 ರಿಂದ 1980 ಜನೆವರಿ 6 ವರೆಗೂ, ಒಂದು ದಿನವೂ (ಜೂನ 1979ರ ಹೊರತಾಗಿ, 18 ದಿನಗಳ ಕಾಲ ಅವಳು ಆಸ್ಪತ್ರೆಯಲ್ಲಿದ್ದಾಗ) ಅವಳಿಂದ ದೂರವಿರಲಿಲ್ಲ. ದಾದಾಜಿಯವರಿಂದ, ಅವಳು, ಅತಿ ಹೆಚ್ಚೆಂದರೆ ಒಂದು ಆಥವಾ ಎರಡು ಗಂಟೆ ದೂರವಿದ್ದದ್ದುಂಟು.

ಐದನೇ ತಾರೀಖು, “ಹೋಗು ದಾದಾ! ನನ್ನಿಂದ ಎಂದೂ ದೂರವಿರದ ನಿಮ್ಮ ವಾಗ್ದಾನದಿಂದ ನಿಮ್ಮನ್ನು ಬಿಡುಗಡೆಗೊಳಿಸುತ್ತೇನೆ – ಪರಮಾನಂದದ ನಿಮ್ಮ ಭೂಮಿಗೆ ಹೋಗಿ – ನಿಮ್ಮ ಗುರು, ನಿಮ್ಮ ಠಾಕೂರ, ಶ್ರೀ ರಾಮಕೃಷ್ಣರಲ್ಲಿಗೆ ಮತ್ತು ನಿಮ್ಮ ದೇವನಲ್ಲಿಗೆ ಹೋಗಿ” ಎಂದು ಹೇಳುವಂಥ ಸಂಗತಿಯೊಂದು ಘಟಿಸಿತು. ಅವಳ ಈ ಮಾತುಗಳನ್ನು ಕೇಳಿ ಎಲ್ಲರೂ ಚಕಿತರಾದರು.

ಜನವರಿ 6 1980, ಬೆಳಿಗ್ಗೆ: “ನನ್ನ ಕೈಗಳನ್ನು ತೊಳೆಯಿರಿ, ನಾನು ದೇವರ ಪಾದಗಳನ್ನು ಸ್ಪರ್ಶಿಸಬೇಕು” ಎಂದು ದಾದಾಜಿಯವರು ಹೇಳಿದರು. ಸಾಬೂನು ಹಾಗೂ ನೀರನ್ನು ತಂದು ಅವರ ಕೈಗಳನ್ನು ತೊಳೆಯಲಾಯಿತು. ಮದ್ಯಾಹ್ನ 12 ಗಂಟೆಯ ಸುಮಾರಿಗೆ “ದಾದಾ, ನಿಮ್ಮ ಇಚ್ಛಾಶಕ್ತಿಯಿಂದ ನೀವು ಗುಣಮುಖರಾಗಲು ಬಯಸುವುದಿಲ್ಲವೆ?” ಎಂದು ಅವಳು ಕೇಳಿದಳು.

ಮೂವತ್ತೊಂದು ವರ್ಷಗಳಲ್ಲಿ, ಮೊದಲ ಬಾರಿಗೆ, ಅವಳ ಈ ಪ್ರಶ್ನೆಗೆ ದಾದಾಜಿಯವರು ಉತ್ತರಿಸಲಿಲ್ಲ. ಅದಕ್ಕೆ ಅವರು ಬರೀ ನಕ್ಕರು, ಮತ್ತು ಅವಳನ್ನು ಅಕ್ಕರೆಯಿಂದ ಹರಸಿದರು.

ಅವರು ನೀರನ್ನು ಕುಡಿಯಲಾರದಷ್ಟು ನಿಶ್ಯಕ್ತರಾಗಿದ್ದಾಗಲೂ ಸಹ – ಕೊಟ್ಟ ಒಂದು ಚಮಚ ಗಂಜಿಯೂ ಸಹ ನಾಲಿಗೆಯ ಮೇಲೆಯೇ ಉಳಿಯುತ್ತಿದ್ದಾಗಲೂ, ಅವರನ್ನು ಎದ್ದು ಕುಳಿತುಕೊಳ್ಳುವಂತೆ ಮಾಡುವಾಗಲೂ – ಅವರನ್ನು ನೋಡಿಕೊಳ್ಳುತ್ತಿದ್ದ ದಾದಿಗೆ (nurse) ಧನ್ಯವಾದಗಳುಎಂದು ಹೇಳುತ್ತಿದ್ದರು ಮತ್ತು ಉಳಿದವರ ಕಡೆಗೆ ನಗುವನ್ನು ಬೀರುತ್ತಿದ್ದರು.

ಮಧ್ಯಾಹ್ನ 2.30 ಗಂಟೆಗೆ ವೈದ್ಯರು ದಾದಾಜಿಯವರನ್ನು ಪರೀಕ್ಷೆ ಮಾಡಿ ಚೆನ್ನಾಗಿದೆ ಎಂದು ಹೇಳಿದರು. ಹೃದಯ ಬಡಿತ ಸರಿಯಾಗಿತ್ತು.

“ಜೈ ಗುರು–ಜೈ ಹರಿ” ಇವು ದಾದಾಜಿಯವರ ಕೊನೆಯ ಶಬ್ದಗಳಾಗಿದ್ದವು.

ಆಗ ಒಂದು ವಿಚಿತ್ರವಾದ ಸಂಗತಿಯು ಜರುಗಿತು – ಅಪರಾಹ್ನ 3.40 ಗಂಟೆಗೆ ಹರಿ ಮಂದಿರದ ಮೇಲೆ ಸೂರ್ಯಾಸ್ತವಾಯಿತು.

**– ದಾದಾಜಿಯವರ ಅನುಯಾಯಿ**

**ಶ್ರೀ ಅರವಿಂದರ**

# ‘ತಾಂತ್ರಿಕಸಿದ್ಧಿ ಪ್ರಕರಣಂ’

**– ಅನುವಾದ: ಪುಟ್ಟು ಕುಲಕರ್ಣಿ**

## ತಸ್ಮಿನ್ನ್ಚ ಶಕ್ತಿಪ್ರಕರಣಂ–4

**“ಸಾಧ್ಯನ್ತು ಕಾಳೀಭಾವೋ ವಾ ವಿಭೂತಿಭಾವಾ ವಾ ।”**

**ಕಾಳೀ ಭಾವ:**

ಕಾಳೀ ಭಾವವೇ ಆಗಲೀ ಇಲ್ಲವೇ ವಿಭೂತಿ ಭಾವವೇ ಆಗಲಿ ಎರಡೂ ವೈಶ್ವಿಕ ರಹಸ್ಯದ ಪಥವನ್ನು ತೋರಿಸುವದಷ್ಟೇ ಅಲ್ಲದೇ ಗಮ್ಯವನ್ನೂ ದೊರಕಿಸುತ್ತವೆ. ಕಾಳೀ ಭಾವವನ್ನು ಜಗನ್ಮಾತೆಯ ಸ್ವರೂಪದಲ್ಲಿ – ಭದ್ರಕಾಳಿ ಎಂದು ಆನಂದಮಯ ಅವಸ್ಥೆಯೊಳಗೆ ಹಾಗೂ ‘ರುದ್ರಕಾಳಿ’ ಎಂದು ಪ್ರಳಯ ಸ್ವರೂಪದಲ್ಲಿ, ಶಿಕ್ಷೆಯನ್ನು ವಿಧಿಸುವಲ್ಲಿ – ಅಂದರೆ ತಪ್ಪು ಮಾಡಿದಾಗ ಸೂಕ್ತವಾಗಿ ತಿಳಿಸಿಕೊಡುವ ಮೂಲಕ, ವಿಕಾಸದ ಯಾನದಲ್ಲಿ ಯಾವುದೇ ಕಾರಣಕ್ಕೂ ವಿಚಲಿತಗೊಳ್ಳದಂತೆ ಆರೋಹಣದ ಯಾನವನ್ನು ಮುಂದುವರೆಸಲು ಅನುಗ್ರಹಿಸುತ್ತಾಳೆ. ಆದರೆ ಅವಳ ಈ ಹಂತದ ಪಾಠಗಳು ಮಾತ್ರ ಮನುಕುಲಕ್ಕೆ ಪ್ರಳಯ ಸ್ವರೂಪದಲ್ಲಿ ಗೋಚರವಾಗುತ್ತವೆ. ಅವಳ ಅಟ್ಟಹಾಸದ ಧ್ವನಿ, ರೋಷಾವೇಷ, ಹೂಂಕಾರಗಳೆಲ್ಲವೂ ಎಚ್ಚರಿಕೆಯ ಸಂಕೇತವಾಗಿಯೇ ಅಭಿವ್ಯಕ್ತಗೊಂಡಿರುತ್ತವೆ. ಮಹಾಮಾಯೆಯು ಸೃಷ್ಟಿಯನ್ನು ಸೃಜಿಸಿ, ಪೋಷಿಸಿ, ಸಲಹಿ ವಿಕಾಸಗೊಳಿಸುವಲ್ಲಿ ಈ ಕಾಳೀ ಭಾವವು ಒಂದು ಪಥವಾಗಿ ಅಥವಾ ಉಪಕರಣವಾಗಿಯೇ ಅಭಿವ್ಯಕ್ತಿಗೊಂಡಿರುತ್ತದೆ. ಕಾಳಿ ಎನ್ನುವದನ್ನು ‘ಕತ್ತಲು’ ಎಂದು ಪರಿಗಣಿಸುವ ಮೂಲಕವೇ, ಅದಕ್ಕೆ ಅಂಜಿ ದೂರವೇ ಉಳಿಯಲು ಯತ್ನಿಸುತ್ತಿರುವ ಮನುಕುಲಕ್ಕೆ, ಆ ‘ಕತ್ತಲಿನಲ್ಲಿಯೇ’ ಸರ್ವವೂ ಅಂತರ್ಗತವಾಗಿದೆ ಎನ್ನುವದನ್ನು ತೋರಿಸಲು ಸದಾ ಸಿದ್ಧಳಿರುತ್ತಾಳೆ, ಅವಳ ಕೃಪೆ ಇಲ್ಲದೇ ಈ ತಮಾವೃತವಾಗಿರುವ ಅವಕಾಶದೊಳಗೆ ದೂರ ದೂರದಲ್ಲಿ, ಊರ್ಧ್ವಾತಿ ಊರ್ಧ್ವದೊಳಗೆ ಇರುವ ತೇಜಪುಂಜಗಳನ್ನು ದೃಷ್ಟಿಸಲು ಸಾಧ್ಯವಾಗುವದಿಲ್ಲ. ಇದಕ್ಕೆ ಮಾನವನ ಚಕ್ಷುಗಳ ಸೀಮಿತವಾಗಿರುವ ಸಾಮರ್ಥ್ಯವೂ ಕಾರಣವಿದೆ. ಲೌಕಿಕದ ಕಣ್ಣುಗಳಿಗೆ ಇದು ಕೇವಲ ತಮದಂತೆ ಗೋಚರವಾಗುತ್ತಿರುವದಕ್ಕೆ, ಇದನ್ನು ಕಾಳಿ ಎಂದು ನಾಮಕರಣ ಮಾಡಿ, ಭಯದ ಭಾವದೊಳಗೆ ಭಕ್ತಿಯ ಮೂಲಕ ಸಮರ್ಪಣೆಯನ್ನು ಸಲ್ಲಿಸಲು ಮನುಕುಲದ ಪ್ರಯತ್ನಗಳು ಮುಂದುವರೆದವು; ಮುಂದುವರೆಯುತ್ತಿವೆ.

ಮಹಾಕಾಳಿಯ ಪದದ ಅಬ್ಬರಗಳು ಪರಾಕಾಷ್ಠೆಯನ್ನು ತಳೆದಿರುವ ದಾರುಣದ ಘಟನೆಗೆ ಈ ಅವಧಿ ತಲ್ಲಣಗೊಳ್ಳುತ್ತಿದೆ. ಇಡೀ ಜಗತ್ತಿನ ಮಾನವ ಕುಲದ ಜೀವನವೇ ಅಲ್ಲೋಲ–ಕಲ್ಲೋಲಗೊಂಡಿದೆ. ಭರವಸೆಯ ಕಿರಣ ಯಾವ ಬದಿಯಿಂದ ಬರುವದು ಎನ್ನುವದರ ಬಗೆಗೂ ಸಂಕೇತಗಳು ಕಾಣದಂತಹ ಹತಾಶ ಸ್ಥಿತಿ ತುಂಬಿಕೊಂಡಿದೆ. ಕಾಳಿಯ ಈ ಪದದ ಅಪ್ಪಳಿಸುವಿಗಳಿಂದಾಗಿ ಪ್ರಳಯವೇ ಸಂಭವಿಸುತ್ತಿದೆಯೇನೋ ಎನ್ನುವ ಭಯವೂ ತುಂಬಿಕೊಂಡಿದೆ.

ಆದರೆ ಶ್ರೀಮಾತೆಯ ಪ್ರತಿಯೊಂದು ಕ್ರಿಯೆಯೂ ವಿಕಾಸಕ್ಕೆ ಇರುತ್ತದೆಯೇ ವಿನಾ ವಿನಾಶಕ್ಕಲ್ಲ. ಈ ರೀತಿಯ ಘೋರ ಅನುಭವದ ಮೂಲಕವೇ ಶ್ರೀಮಾತೆಯು ನಮಗೆ ಪಥ ನಿರ್ದೇಶನ ಮಾಡುತ್ತಿದ್ದಾಳೆ. ವಾತ್ಸಲ್ಯಮಯೀ ಶ್ರೀಮಾತೆ ಕೋಪಗೊಂಡರೂ ಸಹಿತ, ಶಿಕ್ಷೆ ಕೊಡುವ ಅನಿವಾರ್ಯತೆ ಬಂದರೂ, ತನ್ನ ಮಕ್ಕಳು ಸಂಪೂರ್ಣ ಅಸ್ತಿತ್ವ ಕಳೆದುಕೊಳ್ಳಬೇಕೆಂದು ಎಂದಿಗೂ ಇಚ್ಛಿಸುವದಿಲ್ಲ. ಪಥ ವಿಚಲನೆಗೊಂಡ ಪ್ರಯಾಣದಲ್ಲಿ ಶಕೆಯ ಮೂಲಕವೇ ಶಿಕ್ಷಣ ಕೊಡಬೇಕಾದ ಅನಿವಾರ್ಯತೆಯನ್ನು ಲೌಕಿಕವು ಸೃಷ್ಟಿಸಿಕೊಂಡಿರುತ್ತದೆಯೇ ವಿನಾ, ಅದು ಎಂದಿಗೂ ಶ್ರೀಮಾತೆಯ ಆಶಯವಾಗಿರುವದಿಲ್ಲ. ಪಥದಿಂದ ಸ್ವಲ್ಪವೇ ದೂರ ಹೋದಾಗಲೇ, ಶ್ರೀಮಾತೆಯು ಕೃಪೆಯಿಂದ ಸೂಕ್ತ ದಾರಿಗೆ ಬರಲು ಉಪದೇಶಿಸುತ್ತಾಳೆ; ಈ ಸಣ್ಣ ವಿಚಲನೆಯೂ ಮಹಾ ಪತನಕ್ಕೆ ಕಾರಣವಾಗ–ಬಾರದೆಂದು ನಸು ಕೋಪದಿಂದಲೇ ಎಚ್ಚರಿಸಿದಾಗಲೆಲ್ಲ ಈ ರೀತಿಯ ಪ್ರಳಯ ಸದೃಶ ಘಟನೆಗಳು ಘಟಿಸುತ್ತವೆ. ಅದು ಅನಿವಾರ್ಯವೂ ಆಗಿರುತ್ತದೆ. ಇದನ್ನರಿಯದ ಮಾನವ ತಲ್ಲಣ–ಬೇಗುದಿಗಳಲ್ಲಿ ಬೇಯುತ್ತಾನೆ; ಮತ್ತೆ ಶ್ರೀಮಾತೆಯ ಕೃಪೆಗಾಗಿ ಹಂಬಲಿಸತೊಡಗುತ್ತಾನೆ. ಈ ವಿಷಯವನ್ನೇ ಶ್ರೀ ಅರವಿಂದರು 'ಸಾವಿತ್ರಿ'ಯಲ್ಲಿ;

**'ದಂಡಿಸುವೆನೀಗ ಆ ಭಂಡ–ಪುಂಡ–ಉದ್ದಂಡ ಪಿಂಡಗಳನು**
**ಲೋಕವನು ಶೋಕ ಸಾಗರಕೆ ನೂಕಿ ಅಮುಕಿರುವ ಕಾಕುಗಳನು**
**ಪ್ರತಿ ರಕ್ತ–ಕಣದಿ ಹುದುಗಿರುವ ಹತ್ಯೆ ಲಾಲಸೆಯ ಬೀಜಗಳನು**
**ಕತ್ತೆತ್ತದಂತೆ ಕತ್ತರಿಸಿ ಬಿಡುವೆ ಕತ್ತಲೆಯ ಚಿತ್ತಗಳನು**
**ನಾನಿರುವೆ ದುರ್ಗೆ, ಶಕ್ತಿಯಧಿದೇವಿ ದೃಢತೆಯಲಿ ಜ್ಯೋತಿಯಾಗಿ'**

**(7–4–509)**

ಎಂದು ಅಭಿವ್ಯಕ್ತಿಸಿದ್ದಾರೆ. ಪುನರುತ್ಥಾನವನ್ನು ಎಂದಿಗೂ ತಪ್ಪಿಸಲು ಸಾಧ್ಯವಿಲ್ಲ. ವಿಕಾಸದ ಪ್ರಕ್ರಿಯೆಯಲ್ಲಿ – ಅದು ಉತ್ಕ್ರಾಂತಿಯ ಸ್ವರೂಪದ್ದೇ ಆಗಿದ್ದರೂ ಸಹಿತ,

ಮಧ್ಯೆ ಮಧ್ಯೆ 'ಕ್ರಾಂತಿ'ಕಾರಕ ಘಟನೆಗಳು, ಈ ಉತ್ಕ್ರಾಂತಿಯ ವೇಗವನ್ನು ತಡೆಯಲ್ಲಿ ಇನ್ನಿಲ್ಲದ ಅಬ್ಬರವನ್ನು ಸೃಷ್ಟಿಸುತ್ತವೆ. ಆದರೆ ನಿಯತಿಯ ಆಣತಿಯಂತೆ ನಿರ್ದಿಷ್ಟವಾದ ಉತ್ಕ್ರಾಂತಿಯ ಪಥವು, ಪುನರುತ್ಥಾನಕ್ಕಾಗಿಯೇ ರೂಪುಗೊಂಡಿರುತ್ತದೆ. ಆಧುನಿಕ, ವೈಜ್ಞಾನಿಕ ಆಯಾಮಗಳಲ್ಲಿ, ಭೌತಿಕ ಪ್ರಪಂಚದ ಯಾಂತ್ರಿಕ ಸುಖೋಪಭೋಗಗಳ ಪರಾಕಾಷ್ಠೆಯಲ್ಲಿ, ನಮ್ಮ ಈ ವಿಚಲನದ ಹಾದಿ 'ಭಯಾವಹ'ವಾಗಿರುವದು ಸಹಜವಾಗಿರುತ್ತದೆ. ಭ್ರಾಂತಿ–ಭ್ರಾಂತಿಗಳ ತುಕಡಿಗಳನ್ನೇ ಕಟ್ಟಿಕೊಂಡು ಅಂಧರಾಗಿ, ನಿಯತಿಯನ್ನೂ ಮೀರಿದ್ದೇವೆ ಎಂದು ಜಯಭೇರಿ ಬಾರಿಸುತ್ತೇವೆ. ಕಾಲ–ಮಿತಿಯನ್ನು ಮರೆತು, ನಿದಿತ ಗಡಿ–ಗೋಡೆಗಳನೂ ಹುಡಿಗುಟ್ಟಿಸಿ, ಇಡೀ ಲೋಕವನ್ನೇ ನುಂಗಿ ನೊಣೆಯುವ ಝಂಝಾವಾತವನ್ನು ಸೃಷ್ಟಿಸತೊಡಗಿದಾಗ, ರಣಭೇರಿಗೆ ಲೋಕವೆಲ್ಲವನ್ನೂ ಕಣ್–ಕಣ್ ಬಿಡುವಂತೆ ಮಾಡಿದಾಗ, ಇಡೀ ಮಾನವ ಕುಲವೇ ದಹಿಸಿ ಹೋಗುವ ಸಂದರ್ಭ ಬಂದಾಗ, ಶ್ರೀಮಾತೆಯು ಸಹಜವಾಗಿಯೇ ತನ್ನ ಕೋಪವನ್ನು ತೋರ್ಪಡಿಸಲೇಬೇಕಾಗುತ್ತದೆ.

ಆದರೆ ಇಂತಹ ತಲ್ಲಣದ ಸಮಯದಲ್ಲಿಯೇ ಹೊಸ ಆಶಾ ಕಿರಣದ ಭರವಸೆಯೂ ಅಡಗಿರುತ್ತದೆ. ಅದು ಗೋಚರಕ್ಕೂ ಬರುತ್ತದೆ. ಹೃದಯವನ್ನೇ ದಿಗ್ಬಂಧಗೊಳಿಸುವಂತಹ ರಕ್ಕಸ ಶಕ್ತಿ ಇದ್ದರೂ, ಜಾಗ್ರತಿಯ ಕ್ರಿಯೆಗಳು ಮತ್ತೆ ಆತ್ಮಶಕ್ತಿಯನ್ನು ಉದ್ದೀಪನಗೊಳಿಸುತ್ತವೆ, ನವಯುಗಕ್ಕೆ ನಾಂದಿ ಹಾಡುತ್ತವೆ. ಆ ವಿಷಣ್ಣ ಪರಿಸ್ಥಿತಿಯಿಂದ ಯಶಸ್ವಿಯಾಗಿ ಹೊರಬರುವ ದಾರಿಯನ್ನೂ ಶ್ರೀಮಾತೆಯೇ ತೋರುತ್ತಾಳೆ. ಅವಳ ಹಿತೋಪದೇಶಗಳನ್ನು ಆತ್ಮಪೂರ್ವಕವಾಗಿ ಅನುಷ್ಠಾನಿಸಲು ಸಿದ್ಧರಾದಲ್ಲಿ, ಈ ಪ್ರಳಯಕಾರೀ ಘಟನೆಗಳೇ 'ನವಯುಗಕ್ಕೆ' ಬರೆದ ಮುನ್ನುಡಿಯಾಗುತ್ತವೆ.

ತಂತ್ರ ಶಾಸ್ತ್ರದ ಅಧ್ಯಯನದ ಪರಂಪರೆಯಲ್ಲಿ ಈ ದೇವಿ(ಶಕ್ತಿ)ಯನ್ನು 'ವಿದ್ಯಾ' ಎಂದೇ ಆರಾಧಿಸಲ್ಪಡುತ್ತಿದೆ. ನೂರಾರು ಪದ್ಧತಿಯ ತಾಂತ್ರಿಕ ವಿಧಿ–ವಿಧಾನಗಳ ಪ್ರಕಾರಗಳಲ್ಲಿ ಅವುಗಳ ಅನುಷ್ಠಾನದ ವಿಷಯಗಳಲ್ಲಿ ಇರುವ ಅಂಶಗಳನ್ನು ಪರಿಗಣಿಸಿ ಇದನ್ನು 'ದಶ ಮಹಾವಿದ್ಯೆಗಳು' ಎಂದೇ ಜನಜನಿತವಿದೆ. ಕಾಳೀ, ತಾರಾ, ಮಹಾತ್ರಿಪುರ ಸುಂದರೀ(ಷೋಡಶೀ–ಶ್ರೀವಿದ್ಯಾ), ಭುವನೇಶ್ವರೀ, ಛಿನ್ನಮಸ್ತಾ, ಭೈರವೀ, ಧೂಮಾವತಿ, ಬಗಲಾಮುಖೀ, ಮಾತಂಗೀ ಮತ್ತು ಕಮಲಾ ಎಂದು ಈ ದಶ ವಿದ್ಯೆಗಳ ಮೂಲಕ ತಾಂತ್ರಿಕ ಆರಾಧನಾ ಪದ್ಧತಿ ಈಗಲೂ ಭಾರತದಾದ್ಯಂತ ಅನುಷ್ಠಾನದಲ್ಲಿದೆ. ಈ ದಶ ಶಕ್ತಿಗಳೂ ಸೃಷ್ಟಿಗೆ

ಕಾರಣವಾಗಿವೆ. ಇವುಗಳಲ್ಲಿ ಪ್ರತಿಯೊಂದು ವಿದ್ಯೆಗೂ ಅದನ್ನು ಅನುಷ್ಠಾನ–ಗೊಳಿಸುವ, ಆರಾಧನಾ ಪದ್ಧತಿಗಳಿವೆ.

**ಕಾಳೀ ವಿದ್ಯಾ:**

**"ಕಾಳಿ"** ಎಂದಾಕ್ಷಣ, ಶವವೊಂದನ್ನು ಮೆಟ್ಟಿ ನಿಂತು, ರಂಡಗಳ ಮಾಲೆಯನ್ನು ಧರಿಸಿದ, ಅಟ್ಟಹಾಸದ ನಗು, ಕೈಯಲ್ಲಿ ಕಪಾಲವೊಂದನ್ನು ಹಿಡಿದು, ಭಯಂಕರವಾದ ಭಾವದಲ್ಲಿ, ದೀರ್ಘವಾಗಿ ಚಾಚಿರುವ ನಾಲಿಗೆ, ದಿಗಂಬರೆಯಾಗಿರುವ, ಅಪ್ಪಳಿಸುವ ತೆರದಲ್ಲಿ ಇರುವ ಕರಾಳ ಸ್ವರೂಪವೇ ನಮ್ಮ ಕಣ್ಣೆದುರು ಬರುವದು. ಈ ರೀತಿಯ ಕಾಳಿಯನ್ನೇ ಸ್ಮಶಾನದಲ್ಲಿಯೇ ಧ್ಯಾನಪೂರ್ವಕವಾಗಿ ಆರಾಧಿಸುವ ಪರಂಪರೆಯಿದೆ. ಈ ಆರಾಧನೆಗೆ **'ಮಂತ್ರ ಮಹೋದಧೀ'** ಗ್ರಂಥದಲ್ಲಿ 'ಮಂತ್ರ'ವನ್ನೂ ಕೊಡಲಾಗಿದೆ. ಈ ಮಂತ್ರದ ಸಾಧನೆಯಿಂದು 'ಅಷ್ಟ ಶಕ್ತಿಗಳು' (ಪಾರಲೌಕಿಕದ ವಿಷಯಗಳನ್ನು ಅನುಭಾವಿಸುವ ಶಕ್ತಿಯು) ಪ್ರಾಪ್ತವಾಗುತ್ತವೆ. ಇದನ್ನು ಸಾಧಿಸಿದವನ್ನು 'ಭೈರವ' ಎಂದು ಕರೆಯಲಾಗುತ್ತದೆ.

ಕಾಳೀ ವಿದ್ಯಾರಾಧನೆಗೆ ರೂಪಿಸಲ್ಪಟ್ಟಿರುವ 'ಯಂತ್ರದ ಸ್ವರೂಪವೂ' ಇದೆ. ಇದನ್ನು ಮರಣವನ್ನು ಜಯಿಸುವ ಉದ್ದೇಶದಿಂದ ರೂಪುಗೊಳಿಸಲಾಗಿದೆ. ಕಾವ್ಯಕಂಠ ವಾಸಿಷ್ಠ ಗಣಪತಿ ಮುನಿಗಳು "ಕಾಳಿ ವಿದ್ಯಾ"ಕ್ಕೆ ಭಾಷ್ಯವನ್ನು ಬರೆದಿದ್ದಾರೆ. ದಶ ಮಹಾವಿದ್ಯಾ ಅಧ್ಯಯನದಲ್ಲಿ ಪ್ರಥಮ ಅಧ್ಯಯನವೇ ಈ ಕಾಳೀ ವಿದ್ಯಾ ಅಧ್ಯಯನವಿದೆ. ಇದಕ್ಕೆ "ಪ್ರಾಣವಿದ್ಯಾ" ಎಂತಲೂ ಕರೆಯಲಾಗುತ್ತಿದೆ. ಅದರಲ್ಲೂ 'ಮುಖ್ಯ ಪ್ರಾಣವಿದ್ಯಾ' ಎಂದೇ ಆರಾಧಿಸಲ್ಪಡುತ್ತಿದೆ. 'ಕಾಳಿಯು ಕ್ರಿಯಾಶಕ್ತಿ'ಯಾಗಿದ್ದಾಳೆ. ಹೀಗಾಗಿ ಅಧಿದೇವತೆಯಾಗಿದ್ದಾಳೆ. ಸರ್ವವ್ಯಾಪಿನಿ–ಯಾಗಿದ್ದಾಳೆ. ಇವಳನ್ನು 'ವಿದ್ಯುತ್–ಶಕ್ತಿ' ಎಂದು ಕರೆಯಲಾಗುತ್ತದೆ. ಸೃಷ್ಟಿಯ ರಚನೆಗೆ ಹಾಗೂ ಕ್ರಿಯಾ ಚಾಲನೆಗೆ ಅವಶ್ಯವಿರುವ ವಿದ್ಯುತ್(ಚೇತನ ಶಕ್ತಿ) ಇವಳ ಸ್ವರೂಪವಾಗಿದೆ. ಅದೇ ರೀತಿ ಎಲ್ಲಾ ಭೂತಗಳನ್ನೂ ತನ್ನಲ್ಲಿ ವಿಲೀನಗೊಳಿಸಿ–ಕೊಳ್ಳುತ್ತಾಳೆ.

ಇದು ಸಾಮಾನ್ಯವಾಗಿ 'ರುದ್ರಕಾಳೀ' ಸ್ವರೂಪಕ್ಕೆ ಸಂಬಂಧಿಸಿದಂತೆ ಇರುವ ಕೆಲವು ವಿವರಗಳಾದರೆ, ಇವಳ 'ಸೃಷ್ಟಿಸಂರಚನೆಗೆ ಕಾರಣವಾಗುವ ಶಾಂತ' ಸ್ವಭಾವದಲ್ಲಿ, ಇವಳನ್ನು 'ಭದ್ರಕಾಳೀ' ಎಂದು ಆರಾಧಿಸಲಾಗುತ್ತದೆ. ಹಂತ ಹಂತವಾಗಿ ಕಾಳೀ (ಮಹಾದೇವೀ) ವಿದ್ಯಾ ಅನುಷ್ಠಾನದಲ್ಲಿ, ಕಾಳೀ, ಕಪಾಲಿನೀ,

ಕುಲ್ಲಾ, ಕುರುಕುಲ್ಲಾ, ವಿರೋಧಿನೀ, ವಿಪ್ರಚಿತ್ತಾ ಮತ್ತು ಉಗ್ರಾ, ಉಗ್ರ ಪ್ರಭಾ; ನಂತರದಲ್ಲಿ ದೀಪ್ತಾ, ನೀಲಾ, ಘನಾ, ಬಾಲಿಕಾ; ಆ ಮೇಲೆ ಮಾತ್ರಾ, ಮುದ್ರಾ, ಮಿತಾ: ಎಂದೆಲ್ಲಾ ಸ್ವರೂಪಗಳಿವೆ. ಇವೆಲ್ಲವೂ ಕಾಳಿಯ ಉಗ್ರಭಾವವನ್ನೇ–ಉಗ್ರಭಾವದ ಆರಾಧನಾ ಪದ್ಧತಿಯಲ್ಲಿವೆ. **ಆದರೆ ಅವಳ ತೋಷದಾಯಕವಾದ, ಸೃಷ್ಟಿಗೆ, ಜ್ಞಾನಕ್ಕೆ ಕೃಪೆಯನ್ನು ಒದಗಿಸುತ್ತಿರುವ 'ಭದ್ರಕಾಳಿ'ಯ ಸ್ವರೂಪದಲ್ಲಿ, ಬ್ರಾಹ್ಮೀ, ನಾರಾಯಣೀ, ಚಾಮುಂಡಾ. ಕೌಮಾರೀ, ಅಪರಾಜಿತಾ, ವಾರಾಹೀ, ನಾರಸಿಂಹೀ ಸ್ವರೂಪಗಳಿವೆ.**

ಶ್ರೀ ಅರವಿಂದರ 'ತಾಂತ್ರಿಕಸಿದ್ಧಿ ಪ್ರಕರಣಂ'ದ ವಿಷಯದಲ್ಲಿ, ಮರಣವನ್ನು ಜಯಿಸುವ ವಿಷಯದ ಸಂಬಂಧದಲ್ಲಿ, ಈ 'ಕಾಳೀ ವಿದ್ಯಾ'ಗಾಗಿ ವಿವರಗಳಿವೆ.

(ಸಶೇಷ)

---

## ಆತ್ಮದ ತ್ರಿಗುಣ ತತ್ತ್ವ

ನಾನಿಹೆನು ದುರ್ಗೆ, ಆತ್ಮಾಭಿಮಾನಿ ಬಲ–ತೇಜ–ದೇವಿ ಸತ್ಯ
ಮತ್ತೆ ಸಿರಿಲಕುಮಿ, ಸೌಭಾಗ್ಯದೊಡತಿ–ಮಂಗಲದ ಧನ್ಯ ಕೃತ್ಯ
ಕೊಲ್ಲಲೆಳಸಿದರೆ ಕಾಳಿಮುಖಿ ನಾನು, ಪ್ರಳಯಾಂತ್ಯ ಲಯದ –ನೃತ್ಯ
ರಕ್ಕಸರ ಗಣದ ಪ್ರೇತಗಳನೀಗ ಪದತಲದಿ ಅದುಮಿ ನಿತ್ಯ.
ಆ ದೇವನಿಂದ ನನಗೀಗ ಚಲನ ಘನಕಾರ್ಯದನುಷ್ಠಾನ
ಹಿಂಜರಿಕೆಯರಿಯೆ, ಅವನಾತ್ಮದಿಚ್ಛೆ, ಮುಂಚೂಣಿಯಲ್ಲಿ ಸ್ಥಾನ.

**ಶ್ರೀ ಅರವಿಂದರ "ಸಾವಿತ್ರಿ" (ಪದ್ಯಾನುವಾದ – ಪುಟ 509)**

# ‘ಕುಲಾರ್ಣವ ತಂತ್ರ’ ಮತ್ತು ‘ಸಾವಿತ್ರಿ’

**– ಅನುವಾದ: ಪುಟ್ಟು ಕುಲಕರ್ಣಿ**

**ಭಾಗ–1**

[ಶ್ರೀ ಅರವಿಂದರ ‘ಸಾವಿತ್ರಿ’ ಮತ್ತು ‘ಕುಲಾರ್ಣವ’ ಗ್ರಂಥದ ತುಲನಾತ್ಮಕವಾದ ಅಧ್ಯಯನವೊಂದು ಶ್ರೀ ಎಂ.ಪಿ. ಪಂಡಿತರಿಂದ ರಚಿತಗೊಂಡಿದೆ. ಶ್ರೀ ಅರವಿಂದರು ‘ಸಾವಿತ್ರಿ’ಯಲ್ಲಿ ಅಭಿವ್ಯಕ್ತಿಸಿರುವ ಮಹಾಮಾಯಾ, ಮಹಾಲಕ್ಷ್ಮೀ, ಮಹಾಸರಸ್ವತೀ ಮತ್ತು ಮಹಾಕಾಳೀ ಆಯಾಮಗಳ ಪರಂಪರೆಯ ಆಂತರ್ಯವನ್ನು ಇಲ್ಲಿ ಶ್ರೀ ಎಂ.ಪಿ. ಪಂಡಿತರು ರೂಪಿಸಿದ್ದಾರೆ. ಈ ‘ಕುಲಾರ್ಣವ’ ಗ್ರಂಥಕ್ಕೆ ಜಾನ್ ವುಡ್ರೋಫ್ (ARTHUR AVALON ***13th April*, 1916**) ಅವರ ಮುನ್ನುಡಿ ಇದೆ. ಈ ಪುಸ್ತಕದ ಪರಿಚಯ ಹಾಗೂ ಪ್ರಥಮ ಅಧ್ಯಾಯವನ್ನು ಆಧಾರವಾಗಿಟ್ಟುಕೊಂಡ ಸಾರಾಂಶದ ಸ್ವರೂಪ ಇಲ್ಲಿದೆ.]

ಭಾರತದ ಜ್ಞಾನ ಪರಂಪರೆಯಲ್ಲಿ **‘ತಂತ್ರದ ವಿಕಾಸ’**ವೂ ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿದೆ. ಇದು ಭಾರತೀಯ ಆಧ್ಯಾತ್ಮಿಕ ವಿಕಾಸದ ಪ್ರಾತಿನಿಧಿಕವೂ ಆಗಿದೆ. ಭಾರತದಾದ್ಯಂತ ಈಗಲೂ ಪ್ರಚಲಿತದಲ್ಲಿ ಇರುವ ದರ್ಶನಗಳ ಪರಂಪರೆಯಲ್ಲಿ, ಅಧ್ಯಯನದಲ್ಲಿ ಹಾಗೂ ಅವುಗಳ ಅನುಯಾಯಿಗಳಲ್ಲಿ ಮುಂದುವರೆದುಕೊಂಡು ಬಂದಿರುವ ವೈಚಾರಿಕ ಸಂಘರ್ಷಗಳ ಮೂಲಕವೇ ಒಂದು ಸುಸ್ಪಷ್ಟವಾದ ನಿಲುವೊಂದನ್ನು ರೂಪಿಸಿಕೊಂಡು ಅನುಷ್ಠಾನಗೊಂಡಿರುವ ಈ ತಂತ್ರ ವಿಕಾಸವು, ಮಹಾಕಾವ್ಯದ ಯುಗದ ನಂತರದಲ್ಲಿ ರೂಪುಗೊಂಡಿತು. ಇದು **ಏಕಮೇವಾತ್ಮ** ಎನ್ನುವ ಅದ್ವೈತವನ್ನು ಸಾಂಖ್ಯದ ದ್ವೈತವಾದದ ಜೊತೆಗೆ ಸಂಶ್ಲೇಷಣೆಗೊಳಿಸುವ ಮೂಲಕ, ಭಕ್ತಿ ರಸವನ್ನು ಜ್ಞಾನ ಸಮೃದ್ಧಗೊಳಿಸುವ ಸಲುವಾಗಿ, ಮಾನವನ ಸ್ವರೂಪದಲ್ಲಿ ಪ್ರಕೃತಿಯನ್ನೂ ತನ್ಮೂಲಕ ಪ್ರಕೃತಿಯ ಆರಾಧ್ಯವಾಗಿರುವ ಪರಮನನ್ನು ಕಾಣುವದರ ಸಲುವಾಗಿ ಮತ್ತು ಮಾನವನ ಆತ್ಮವನ್ನು ದೈವತ್ವದೊಡನೆ ಸಾಮರಸ್ಯಗೊಳಿಸುವ ಸ್ವರೂಪದಲ್ಲಿ ರೂಪಿತಗೊಂಡಿದೆ. ಜೊತೆಜೊತೆಗೆ ಚೇತನವು ಜಡದ ಒಡಗೂಡಿಕೊಂಡೇ ಪ್ರಕಟಗೊಳ್ಳುವ ಮೂಲಕ ಸೌಷಮ್ಯಗೊಳ್ಳುವಂತೆ ರೂಪಿಸಿದೆ. ಇದು ಕಣ್ಮರೆಯಾಗಿರುವ ವೇದದ ಪ್ರಾಚೀನ ವೈಭವದ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವದರ ಮೂಲಕ ಸಾಮಾನ್ಯ ಮಾನವನಿಗೂ ಇದು ಲಭ್ಯಗೊಳ್ಳುವಂತೆ ಮಾಡಿದೆ. **ಪ್ರಕೃತಿ ಮತ್ತು ದೇವರು** ಜೊತೆಗೆ

ಈ **ಮಾತೃ ಭೂಮಿ (ಪ್ರಕೃತಿ)** ಹಾಗೂ ಆ **ಪಿತೃ–ಸ್ವರ್ಗವು(ಪರಮ ಪುರಷ)**ರ ಮಧ್ಯೆ ಒಂದು ಸಮಾನತೆಯು ಅಭಿವ್ಯಕ್ತಗೊಳ್ಳುವಂತೆ ಮಾಡಿದೆ.

ತಂತ್ರದ ಮೂಲ ಧ್ಯೇಯವೆಂದರೆ **'ಸರ್ವವೂ ದೇವ ನಿರ್ಮಿತವಿರುವದರಿಂದ ಏನನ್ನೂ ತಿರಸ್ಕರಿಸುವಂತಿಲ್ಲ'**. ಈ ದೇವ ನಿರ್ಮಿತ ಸರ್ವಸ್ವವನ್ನೂ ಸರ್ವ ರೀತಿಯಿಂದಲೂ ಸದ್ಬಳಕೆ ಮಾಡಿಕೊಂಡೇ ಮಾನವನ ಪ್ರಜ್ಞೆಯನ್ನು ದೈವೀಕರಣ–ಗೊಳಿಸಿಕೊಳ್ಳಬೇಕಿದೆ. **ಮಾನವನ ಜೀವನವು ದಿವ್ಯ ಜೀವನ**ವಾಗಬೇಕಿದೆ. ಈ ವಿಷಯದಲ್ಲಿ ಇನ್ನುಳಿದ ಎಲ್ಲ ಪರಪಂಪರೆಗಳಿಗಿಂತಲೂ ಈ ತಂತ್ರವು ಅತ್ಯಂತ ತರ್ಕ ಸಮ್ಮತಿಯನ್ನು ಹೊಂದಿದೆ; ಇದು ಸ್ವಯಂ–ಪರಿಪೂರ್ಣವಾಗಿರುವದರಿಂದ, ಇಲ್ಲಿ ಮತ್ತೆ ಯಾವುದೇ ಗಮ್ಯವನ್ನು ಒಪ್ಪುವದಿಲ್ಲ. ಇದು ಲೌಕಿಕ(ಪ್ರಾಕೃತಿಕ) ಶಕ್ತಿಗಳು **'ಅಲೌಕಿಕ ಶಕ್ತಿಗಳಾಗಿ'** ರೂಪಾಂತರಗೊಳ್ಳುವ ಸಲುವಾಗಿ ಸ್ವಯಂ–ಪರಿಶೀಲನೆಗೊಳ್ಳುವ ಪ್ರಕ್ರಿಯೆಯಲ್ಲಿಯೇ ಇರುತ್ತವೆ. ಈ ಮೂಲಕ ಮಾನವನ ಜೀವನವು ವೈಶ್ವಿಕ–ತೋಷವನ್ನು ಆಧ್ಯಾತ್ಮಿಕ–ಚೇತನಾವಸ್ಥೆಯಲ್ಲಿಯೇ ಅನುಭಾವಿಸುವ ಸಲುವಾಗಿ ರೂಪುಗೊಂಡಿರುತ್ತವೆ. ಸೂತ್ರಬದ್ಧವಾಗಿ ಹೇಳುವದಾದಲ್ಲಿ, ಇದು **ಮುಕ್ತಿ ಮತ್ತು ಭುಕ್ತಿಗೆ** ಸರ್ವೋತ್ತಮವಾದ ಹೆದ್ದಾರಿಯಾಗಿದೆ.

**'ಕುಲಾರ್ಣವ'** ಗ್ರಂಥವು ಈ ತಂತ್ರ ಮಾರ್ಗದಲ್ಲಿ ಒಂದು ಪ್ರಮುಖವಾಗಿರುವ ಗ್ರಂಥವಾಗಿದೆ. ಇದು ನಿಖರವಾಗಿರುವ ಸೂತ್ರಗಳ ಮೂಲಕವೇ ಅನುಷ್ಠಾನ ಯೋಗ್ಯವಾಗಿರುವ ಚಿಂತನವಾಗಿದೆ. ಇದು ಮಾನವನು ತನ್ನಲ್ಲಿಯೇ ತಾನು ಜಾಗ್ರತನಾಗಿ ಮಾನವನ ಹಂತದಿಂದ ಮೇಲೇರಿ ದಿವ್ಯನಾಗುವದರ ಸಲುವಾಗಿ ಅಪರೂಪದ–ಅವಕಾಶಗಳನ್ನು ಒದಗಿಸುವ ವಿಶೇಷಾಧಿಕಾರವನ್ನು ಹೊಂದಿದೆ. ಉದಾಹರಣೆಗೆ ಗಮನಿಸುವದಾದಲ್ಲಿ, ಮಾನವನ ಜನ್ಮದ ಸ್ವರೂಪದೊಳಗೆ ಜೀವಿಯು ತನ್ನಲ್ಲಿ ತಾನೇ ಪ್ರಜ್ಞಾವಂತನಾಗಲು, ಅದಕ್ಕಾಗಿ ಅವಕಾಶವನ್ನು ಆಯ್ಕೆ ಮಾಡಿಕೊಳ್ಳಲೂ ಸಾಧ್ಯವಾಗಿದೆ. ಈ ಆಯ್ಕೆಯಲ್ಲಿ ಮಾನವನ ಸ್ವರೂಪದಲ್ಲಿಯೇ ಸಿಲುಕಿಕೊಂಡು ಸ್ಥಗಿತಗೊಳ್ಳುವ ಅಥವಾ ತೀವ್ರಾತಿ ತೀವ್ರವಾಗಿರುವ ಪ್ರಗತಿಯ ಮೂಲಕ ಆ ಪರಮ ದೇವನನ್ನು ತಲುಪುವ ಅವಕಾಶವನ್ನು ಒದಗಿಸಿದೆ. ಇಲ್ಲಿ ಈ ವಿಕಾಸದ ಹಂತದಲ್ಲಿ, ಅವನು ಈ ರೀತಿಯ ಪರಿವರ್ತನಾ ಹಂತದಲ್ಲಿ ಅನುಭವಕ್ಕೆ ಬರುವ ಅತ್ಯಾಶ್ಚರ್ಯದ ಛದ್ಮವೇಷದ ಸಂಗತಿಗಳಲ್ಲಿ ಹಾಗೂ ಅಲ್ಲಿ ಲಭ್ಯವಾಗುವ ತೋಷದಲ್ಲಿ ಸಿಲುಕಿಕೊಂಡು, ತನ್ನಲ್ಲಿ ತಾನೇ ಕಳೆದು ಹೋಗದಿರುವಂತೆ ಎಚ್ಚರಿಕೆಯನ್ನೂ ನೀಡುತ್ತಿದೆ. ಜೊತೆಜೊತೆಗೆ ಈ ಭವದಲ್ಲಿ

ರೂಪಿತಗೊಳ್ಳುವ ಭ್ರಮಾಪೂರಿತ ಪಥಗಳ ಸಂದರ್ಭದಲ್ಲಿಯೂ ರಕ್ಷಣೆಯನ್ನು ಒದಗಿಸುತ್ತದೆ. ಈ ಮೂಲಕ ಮಾನವನು ತನ್ನಲ್ಲಿ ತಾನೇ ಪರಿಶುದ್ಧನಾಗುವ ಕುರಿತು ಮತ್ತು ಅದನ್ನು ಹೇಗೆ ಸಾಧಿಸಿಕೊಳ್ಳಬೇಕು ಎನ್ನುವದನ್ನು ತಿಳಿಸುತ್ತದೆ. ಸರಳ ಶಬ್ದಗಳಲ್ಲಿ ಹೇಳುವದಾದಲ್ಲಿ, **ಪರಮಾನಂದದ ತೋಷಾಮೃತ**ವನ್ನು ಸವಿದವನನ್ನು ಮದ್ಯಪಾನದಿಂದ ಮತ್ತನಾದವನ ಜೊತೆಗೆ ಹೋಲಿಸಲು ಸಾಧ್ಯವಾಗುವದಿಲ್ಲ. ಈ ಪರಮಾನಂದದ ತೋಷಾಮೃತವು ಶಕ್ತಿಯ ಆರೋಹಣವು ಊರ್ಧ್ವದೆಡೆಯಲ್ಲಿ ಸ್ಥಿತವಿರುವ ಪರಮ ಪ್ರಭುವಿನ ಸಮ್ಮಿಲನವಾಗಿರುತ್ತದೆ. ಇದನ್ನು ಕೇವಲ ಲೌಕಿಕ ಭಾವದ ಸ್ತ್ರೀ ಮತ್ತು ಪುರುಷರ ಮಧ್ಯದಲ್ಲಿ ಅಲ್ಲ ಎನ್ನುವದು ಮುಖ್ಯ ಸಂಗತಿಯಾಗಿದೆ. ಈ ರೀತಿಯ ಎಲ್ಲ ಎಚ್ಚರಿಕೆಗಳ ಮೂಲಕವೇ ಇಲ್ಲಿ ತಂತ್ರದ ಅಧ್ಯಯನ ಸ್ವರೂಪವನ್ನು ರೂಪಿತಗೊಳಿಸಲಾಗಿದೆ. ಅದರಲ್ಲೂ ಆಧುನಿಕ ವಿಚಾರ ಧಾರೆಗಳಲ್ಲಿ ಈ ತಂತ್ರವನ್ನು ಪಂಚಮಗಳ ಜೊತೆಗೆ ಸಂಯೋಗಗೊಳಿಸದೇ ಅದನ್ನು ಆಧ್ಯಾತ್ಮಿಕ ನೆಲೆಯಲ್ಲಿ ರೂಪಾಂತರಗೊಳಿಸುವ ಪಥವನ್ನು ತೋರಿದೆ. ಆದರೆ ಇಂತಹ ಮಹತ್ವದ ಗ್ರಂಥವು ಅಧ್ಯಯನ ಪರಂಪರೆಯಿಂದ ದೂರವೇ ಉಳಿದಿರುವದು ಒಂದು ಶೋಚನೀಯ ಸಂಗತಿಯಾಗಿದೆ. ಪಾಶ್ಚಿಮಾತ್ಯರಲ್ಲಿ ಈ 'ತಂತ್ರದ ವಿಷಯದ ಕುರಿತು ಅತ್ಯಾಸಕ್ತಿ' ಹೊಂದಿದ ವಲಯದಿಂದ ವಿಸಂಗತ ಪಥವೇ ನಿರ್ಮಾಣಗೊಂಡಿತು.

ಈ ಕುಲಾರ್ಣವ ತಂತ್ರವು ಉಚ್ಚಾಭಿಲಾಶೆಯನ್ನು ಹೊಂದುವ ಕುರಿತೇ ನಿರ್ದೇಶಿಸುತ್ತಿದೆ. ಇದು ಈ ನೈತಿಕ ನೆಲೆಗಟ್ಟಿನ ಮೇಲೇ ರೂಪಿತವಾಗಿ, ಮತಗಳು, ತತ್ತ್ವಜ್ಞಾನ, ಯೋಗಗಳ ಮೂಲಕ ಮಾನವನ ಜೀವನವು ಹಂತಹಂತವಾಗಿ ದೈವೀಕರಣಗೊಳ್ಳುವತ್ತ ಇರುವ ವಿಷಯವನ್ನು ತಿಳಿಸುತ್ತಿದೆ. ಮಾನವನ ಜೀವನದಲ್ಲಿ ಅವನು ಹೊಂದುತ್ತಿರುವ ಹಲವಾರು ಆಯಾಮಗಳ ವ್ಯಕ್ತಿತ್ವಗಳನ್ನು ಏಕೀಭವಿಸಿ, ಜೊತೆಗೆ ಮಾನಸಿಕ(ಚಿತ್ತದ) ಸಂಗತಿಗಳ ಸೂಕ್ತ ಸಂಯೋಜನೆಯ ಮೂಲಕ ಆರೋಗ್ಯಪೂರ್ಣವಾದ ಪ್ರಗತಿಯನ್ನು–ವಿಕಾಸವನ್ನು ಸಾಧಿಸುವದಾಗಿದೆ. ಇಲ್ಲಿ ಭಾವನೆಗಳನ್ನು ಮತ್ತು ಸಂವೇದನೆಗಳನ್ನು ಪರಿಶೋಧಗೊಳಿಸುತ್ತ ಪರಿಶುದ್ಧ–ಗೊಳಿಸಲಾಗುತ್ತದೆ. ಭೌತಿಕ ಸ್ವರೂಪದಲ್ಲಿರುವ ಕರಣಗಳನ್ನು ಆಚರಣೆ, ಜಪ, ತಪ, ಮಂತ್ರಗಳ ಮೂಲಕ ಮತ್ತು ಉಪಾಸನೆಯ ಮೂಲಕ ನೇರ್ಪುಗೊಳಿಸುವ ಕುರಿತು ನಿರ್ದೇಶಿಸುತ್ತದೆ. ಹಾಗಾದರೆ ಈ ತಂತ್ರದ ಪಥದಲ್ಲಿ ಸಾಗಲು ಯಾರು ಅರ್ಹರಾಗಿದ್ದಾರೆ? ಯಾರು ಇಲ್ಲಿ ಮಾರ್ಗದರ್ಶನ ಮಾಡಲು

ಸಮರ್ಥರಾಗಿದ್ದಾರೆ? ಏಕೆಂದರೆ ಈ ಪಥವು ಎರಡೂ ಬದಿಯಲ್ಲಿ ಹರಿತವಿರುವ ಖಡ್ಗದ ಸ್ವರೂಪದ್ದು, ಇಂತಹ ಕಠಿಣ ಮಾರ್ಗದಲ್ಲಿ ಸಾಗಲು ಮಾರ್ಗದರ್ಶನ ಮಾಡುವವರು ಯಾರು? ಈ ವಿಷಯದಲ್ಲಿ ಶಿಷ್ಯನ ಅಭ್ಯುದಯಕ್ಕಾಗಿ ಇರುವ ಗುರುವಿನ ಹೊಣೆಗಾರಿಕೆ ಏನು? ಇಂತಹ ಎಲ್ಲ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಲೇ ಇಲ್ಲಿ ತೃಪ್ತಿದಾಯಕವಾಗಿರುವ ಉತ್ತರವನ್ನು ಅರಸಬಹುದು.

ಪ್ರಸ್ತುತ ಜಗತ್ತಿನಲ್ಲಿ ವಿಕಾಸವಾಗುತ್ತಿರುವ ಜ್ಞಾನದ ಆಯಾಮಗಳಲ್ಲಿ ಜಾಗ್ರತಿಯನ್ನು ಪಡೆದುಕೊಳ್ಳುತ್ತಿರುವ ಮಾನವನಿಗೆ ಅತ್ಯಂತ ಸೂಕ್ತವಾಗಿ ಸಹಾಯಕವಾಗಿರುವ ವಿಷಯಗಳು ಇಲ್ಲಿವೆ. ಅಂತಹ ವಿವರಗಳನ್ನು ಇಲ್ಲಿ ಹಂತ ಹಂತವಾಗಿ ವಿಷದೀಕರಿಸಲಾಗುತ್ತಿದೆ. ಅದರಲ್ಲೂ ಧಾರ್ಮಿಕ ವಿಧಿ–ವಿಧಾನಗಳಲ್ಲಿ, ವಿಶೇಷ ಸ್ವರೂಪದ ಪೂಜೆ–ಆರಾಧನೆ ಪದ್ಧತಿಯನ್ನು ಹೊಂದಿರುವ ತಾಂತ್ರಿಕ ವಿಧಾನಗಳು, ಇಂದು ಆ ದಿಸೆಯಲ್ಲಿ ಸಾಗಲು ಯತ್ನಿಸುತ್ತಿರುವ ಮಾನವ ಕುಲಕ್ಕೆ ಸಮಯದ ಮಿತಿಯೂ ಇರುವದರಿಂದ, ಇವೆಲ್ಲವೂ ಅವನಿಗೆ ಬಾಧಕವಾಗಿ ಇರಬಾರದು. ಅದಕ್ಕಾಗಿ ಹೆಚ್ಚಿನ ಶಕ್ತಿಯ ಬದಲಾಗಿ, ಮನೋವೈಜ್ಞಾನಿಕ ವಿಧಾನಗಳಿಂದ ರೂಪಿಸಿಕೊಳ್ಳುವದು ಇಂದಿನ ವಿಜ್ಞಾನಾಧಾರಿತ ಜೀವನ ಶೈಲಿಗೆ ಫಲಿತಾಂಶಗಳನ್ನು ಕಾಣಲು ಸುಲಭವಾಗಿದೆ. ಅಂತಹ ಸಮರ್ಥವಾಗಿರುವ ವಿಷಯಗಳನ್ನು ಇಲ್ಲಿ ಪ್ರತಿಪಾದಿಸಲಾಗಿದೆ. ತಂತ್ರ ಶಾಸ್ತ್ರದ ಕುರಿತು ವ್ಯಾಖ್ಯೆಗಳು, ಅಲ್ಲಿ ಬಳಸಲ್ಪಡುತ್ತಿರುವ ಪಾರಿಭಾಷಿಕ ಪದಾವಳಿಗಳು ಮತ್ತು ಸೂತ್ರಗಳು ಇಲ್ಲಿ ಚರ್ಚಿಸಲ್ಪಟ್ಟಿವೆ. ಈ ಮೂಲಕ ತಂತ್ರ ಶಾಸ್ತ್ರದಲ್ಲಿ ಉನ್ನತ ಜ್ಞಾನವನ್ನು ಪಡೆದುಕೊಳ್ಳಲು ಈ ಪಠ್ಯ ರೂಪಿತಗೊಂಡಿದೆ.

## ಮಾನವ ಜನ್ಮ ಮತ್ತು ಜೀವನ

**ಕುಲಾರ್ಣವ ತಂತ್ರದ ಅಧ್ಯಾಯಗಳು 'ಉಲ್ಲಾಸ'ದ ಹೆಸರಿನಲ್ಲಿ ಅಭಿವ್ಯಕ್ತಗೊಂಡಿವೆ. 'ಉಲ್ಲಾಸ 1' ರಲ್ಲಿ ಜೀವ ಸಂಕುಲವು ರೂಪುಗೊಂಡಿರುವ ವಿವರಗಳಿವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ತಂತ್ರ ಶಾಸ್ತ್ರದ ವಿಭಾಗದಲ್ಲಿ ಈ 'ಕುಲಾರ್ಣವ ತಂತ್ರ'ವು[1] ಪದೇ ಪದೇ ಜಿಜ್ಞಾಸೆಗೆ ಮತ್ತು ಅಧ್ಯಯನಕ್ಕೆ ಒಳಪಡುತ್ತಿದೆ; ಅದೇ ರೀತಿ ಅನುಷ್ಠಾನದಲ್ಲಿಯೂ ಸಹಿತ ಪ್ರಚಲಿತದಲ್ಲಿದೆ. ಅದಕ್ಕಿಂತ ಮುಖ್ಯ ಸಂಗತಿ ಎಂದರೆ, ಇದು ಆಗಮೋಕ್ತವಾಗಿರುವ ಶಾಕ್ತ ಪಂಥದಲ್ಲಿ ಅತ್ಯಂತ ನಿರ್ಭೀತ**

**ಸೂತ್ರಗಳಲ್ಲಿ ರೂಪಿತಗೊಂಡಿದೆ. ಜೊತೆಜೊತೆಗೆ ಇದರ ಸರ್ವವ್ಯಾಪೀ ಗುಣದಿಂದ, ಇದು ತಂತ್ರ ಸಾಧನೆಯಲ್ಲಿ – ಅದರ ಮಾರ್ಗದಲ್ಲಿ – ಈ ಕುಲಾರ್ಣವ ತಂತ್ರವು ಆಧಾರಭೂತ ಜ್ಞಾನದ ಸ್ವರೂಪವಾಗಿದೆ. ಇದರ ಅಂತರ್ಯದಲ್ಲಿ ಅಡಕವಿರುವ ತತ್ತ್ವಶಾಸ್ತ್ರ ಮತ್ತು ಅದರ ಹಲವು ಆಶಯಗಳು ಮತ್ತು ಪರಿಣಾಮಗಳು, ನೈತಿಕ ಹಾಗೂ ಸಾಮಾಜಿಕ ಆಯಾಮಗಳೆಲ್ಲವೂ ಇಲ್ಲಿ ಒಳಗೊಂಡಿವೆ. ಈ ಎಲ್ಲ ವಿಷಯಗಳೂ ಅತ್ಯಂತ ಸರಳ ಭಾಷೆಯಲ್ಲಿಯೇ ಇಲ್ಲಿ ವಿವರಿಸಲ್ಪಟ್ಟಿವೆ. ಉಳಿದೆಲ್ಲ ಆಗಮದ ವಿಷಯಗಳು ಅತ್ಯಂತ ಗುಹ್ಯವಾದ ಅಥವಾ ಬೆಡಗಿನ ಸ್ವರೂಪದ ಭಾಷೆಯಲ್ಲಿ ಮತ್ತು ಕಲ್ಪನಾಭರಿತ ಅಭಿವ್ಯಕ್ತಿಯಲ್ಲಿ ವಿವರಿಸುತ್ತಿರುವದರಿಂದ, ಇದು ಹೆಚ್ಚಾಗಿ ಸೂತ್ರೀಕೃತವಾದ ಮಾರ್ಗಗಳನ್ನು ನಿರ್ಮಿಸತೊಡಗಿತು. ಕುಲಾರ್ಣವ ತಂತ್ರದಲ್ಲಿ ಒಟ್ಟು ಹದಿನೇಳು ಅಧ್ಯಾಯಗಳಿವೆ; ಎರಡು ಸಾವಿರಕ್ಕೂ ಅಧಿಕ ಶ್ಲೋಕಗಳಿವೆ. ಅದರಲ್ಲೂ ಹಲವಾರು ಆಯಾಮಗಳ, ವಿಧಾನಗಳ ಸುವ್ಯಾಪ್ತ ವೈವಿಧ್ಯತೆಯ ಅಧ್ಯಾಯಗಳಿವೆ. ಆದರೆ ಅವೆಲ್ಲವೂ ಆಗಮೋಕ್ತವಾಗಿರುವಂತೆಯೇ ಅಂದರೆ ಆಗಮ ಶಾಸ್ತ್ರದ ಜ್ಞಾನಾಧಾರಿತ ಮಾರ್ಗದಲ್ಲಿಯೇ ಅನುಷ್ಠಾನಿಸಲ್ಪಡುವ ಒತ್ತಾಯದ ವಿಷಯಗಳಿವೆ. ಅದೂ ಇಂದಿನ ಒತ್ತಡದ ಜೀವನದ ಮಧ್ಯದಲ್ಲಿಯೂ ಅದನ್ನು ಅನುಸರಿಸುವಂತೆ, ಅದಕ್ಕೆ ಲಕ್ಷ್ಯಕೊಡುವಂತೆ ರೂಪಿತಗೊಂಡು ಮುಂದುವರೆದಿವೆ.**

**“ಕರುಣಾಮಯಿಯಾಗಿರುವ ಜಗನ್ಮಾತೆಯು” ತನ್ನ ಪತಿಯಾದ ಶಿವನಿಗೆ ಕೇಳುವ ಪ್ರಶ್ನೆಯಿಂದಲೇ ಈ ಗ್ರಂಥವು ಪ್ರಾರಂಭಗೊಳ್ಳುತ್ತಿದೆ. ಈ ಚರಾಚರ ಜಗತ್ತಿನಲ್ಲಿರುವ ಸರ್ವ ಜೀವಿಗಳೂ ಏಕೆ ಈ ರೀತಿಯಲ್ಲಿ ಜನನ–ಮರಣ, ಯಾತನೆಗಳಿಂದ ತುಂಬಿದ್ದಾರೆ, ಮತ್ತು ಇದರಿಂದ ಅವರು ಮುಕ್ತಿ ಪಡೆಯುವ ಬಗೆ ಹೇಗೆ ಎನ್ನುವದೇ ಜಗನ್ಮಾತೆಯ ಪ್ರಶ್ನೆಯಾಗಿದೆ.**

‘ಸತ್ಯವೆನ್ನುವದು ಏಕಮೇವಾದ್ವಿತೀಯವಾಗಿದೆ’ ಎಂದು ಜಗದೊಡೆಯ ಉತ್ತರಿಸುತ್ತಾನೆ. ಅವನೇ ಶಿವನೂ ಹೌದು ಪರಬ್ರಹ್ಮನೂ ಹೌದು. ಇವನು ನಿರಾಕಾರ ಸ್ವರೂಪದಲ್ಲಿದ್ದಾನೆ; ಸರ್ವಜ್ಞನಾಗಿದ್ದಾನೆ; ಸರ್ವಕ್ರಿಯೆಗಳನ್ನೂ ಸೃಷ್ಟಿಬಲ್ಲವನಾಗಿದ್ದಾನೆ. ಪರಮಾತಿ ಪರಮ ಪ್ರಭುವೂ ಹೌದು. ಈ ಮೂಲಕ ಯಾವುದೇ ರೀತಿಯಲ್ಲಿಯೂ ದ್ವಿತೀಯ ಭಾವವನ್ನು ಹೊಂದದೇ ಅಚಲನಾಗಿದ್ದಾನೆ. ಸ್ವಯಂ–ಪ್ರಕಾಶಿತನೂ, ಆದಿ–ಅಂತ್ಯ ರಹಿತನೂ ಜೊತೆಗೆ ಗುಣಾತೀತನು ಆಗಿದ್ದಾನೆ. ಇವನು ಎಂದಿಗೂ ಪರಿವರ್ತನಗೊಳ್ಳುವದಿಲ್ಲ.

ಇವನೇ **ಸಚ್ಚಿದಾನಂದ**ನಾಗಿದ್ದಾನೆ. ಈ ಎಲ್ಲ ಜೀವ–ಜಗತ್ತು ಮತ್ತು ಈ ಎಲ್ಲ ಅಗಣಿತ ಪ್ರಮಾಣದ ಪ್ರಾಣಿ–ಪ್ರಪಂಚವು ಸಹಿತ ಅವನ ಅಂಶವೇ ಆಗಿವೆ. ಅಗ್ನಿಯ ಕಿಡಿಗಳು(ಸ್ಫುಲಿಂಗಗಳು)[2] ಇರುವ ಹಾಗೆ ಈ ಜೀವ–ಸಂಕುಲವು ಇದೆ. ತಮ್ಮ ಗತದ ಅಜ್ಞಾನದೊಡನೆ ಸಂಬಂಧ ಇಟ್ಟುಕೊಂಡೇ ಜೊತೆಗೆ ತಮ್ಮದೇ ಇಚ್ಛೆಯಲ್ಲಿ ನಿಬಂಧನೆಗೊಳಿಸಿರುವ ಇಚ್ಛೆ ಮತ್ತು ಕ್ರಿಯೆಗಳಲ್ಲಿ ಮಗ್ನವಾಗಿವೆ, ತಮ್ಮ ಸುತ್ತಲಿನ ವಾತಾವರಣದಿಂದ ಪ್ರಭಾವಿತಗೊಳ್ಳುತ್ತಿವೆ, ಹೀಗಾಗಿ ಜನನ–ಮರಣ–ಮರು ಜನನಗಳ ಚಕ್ರಕ್ಕೆ ಸಿಲುಕುತ್ತವೆ. ಹಲವು ಸ್ವರೂಪಗಳಲ್ಲಿ ಆಯಾ ಹಂತದಲ್ಲಿ ಜನ್ಮ ತಾಳುವ ಈ ಜೀವವು ಹಲವಾರು ಶ್ರೇಣಿಗಳಲ್ಲಿ ತನ್ನ ಜೀವನದ ಪಯಣವನ್ನು ಈ ಭೂಮಿಯ ಮೇಲೆ ನಡೆಸುತ್ತವೆ. ಉದಾಹರಣೆಗೆ ಅಚಲವಾಗಿರುವ ಸೃಷ್ಟಿಸಂಕುಲ, ಚಲನಶೀಲ ಸ್ವಭಾವದ ಜೀವಜಗತ್ತು, ಕೀಟ ಪ್ರಪಂಚ, ಅಂಡಜಗಳು, ಪಕ್ಷಿಗಳು, ಪ್ರಾಣಿಗಳು, ಮಾನವ ಕುಲ ಈ ರೀತಿಯಲ್ಲಿ ಹಲವು ಹಂತಗಳಲ್ಲಿ ವಿಕಾಸವಾಗುತ್ತ ಸಾಗುತ್ತವೆ. ಇದೇ ಮುಂದುವರೆದು ದೇವತೆಗಳು ಮತ್ತು ಮುಕ್ತಾತ್ಮ ಜೀವ–ಜೀವನವು ರೂಪುಗೊಳ್ಳುತ್ತದೆ.[3]

**ಇಲ್ಲಿ ಮಾನವ ಜನ್ಮವು ಅತ್ಯಂತ ಮಹತ್ವದ್ದಾಗಿದೆ. ಅಂದರೆ ಈ ಹಂತದಲ್ಲಿ ಸ್ವಯಂ ಜಾಗ್ರತಗೊಳ್ಳುವ, ಬಂಧನಗಳಿಂದ ಮುಕ್ತಿ ಪಡೆಯುವ, ಮತ್ತು ಮುಕ್ತಿಯ ಪಥದಲ್ಲಿ ಸಾಗಲು ಎಲ್ಲ ಬಂಧನಗಳನ್ನೂ ಮೀರುವ ಸಾಮರ್ಥ್ಯ ಹೊಂದಿದ ಹಂತವಾಗಿದೆ. ಇಲ್ಲಿ ಮಾನವನು ಸ್ವಯಂ–ಇಚ್ಛಾ ಶಕ್ತಿಯನ್ನು ಹೊಂದಿದ್ದು, ಇದು ಯಾವುದೇ ಕಾರಣಕ್ಕೂ ವಿಚಲನಗೊಳ್ಳದ ಹಾಗೆ ರೂಪಿಸಿಕೊಳ್ಳಬಹುದಾಗಿದೆ. ಮಾನವನ ಹಂತಕ್ಕಿಂತ ಕೆಳಗಿನ ಸ್ಥಾನದಲ್ಲಿ ಇರುವ ಜೀವ–ಜಗತ್ತು ಪ್ರಕೃತಿಯಿಂದಲೇ ಸಂಪೂರ್ಣವಾಗಿ ನಿರ್ದೇಶಿಸಲ್ಪಟ್ಟಂತೆ ಇರುವ ಸ್ಥಿತಿ ಈ ಮಾನವನ ಹಂತಕ್ಕೆ ಇರುವದಿಲ್ಲ. ಮಾನವನಿಗೆ ಮನಸ್ಸು ಎನ್ನುವದೊಂದಿದೆ ಇದು ದೃಷ್ಟಿಸಬಲ್ಲದು ಮತ್ತು ಸಂಘಟಿತಗೊಳ್ಳುವ ಗುಣವನ್ನೂ ಹೊಂದಿದೆ. ಇದನ್ನೇ ಶ್ರೀ ಅರವಿಂದರು 'ಸಾವಿತ್ರಿ'ಯಲ್ಲಿ –**

**ಅವನೀಗ ಉಲಿದ ವಿಷ್ಣುವಿನ ನಾಮ ಜೊತೆಜೊತೆಗೆ ಯಜ್ಞ–ಸೃಷ್ಟಿ**
**ಮತ್ತಿದೋ ಭೂಮಭೂಮಾನುಭೂತಿ ಲೋಕದೀ ತೋಷ–ವೃಷ್ಟಿ**
**ಜೊತೆಜೊತೆಗೆ ಚಿರದ ನಕ್ಷತ್ರ ಮಾಲೆ ಸಂರಚನೆಗೊಂಡ ಪರಿಯ**
**ಜೊತೆಜೊತೆಗೆ ಜೀವ–ಜೀವನದ ಯಾತ್ರೆ ತಾನುದಿತಗೊಂಡ ಗತಿಯ**

**ಮತ್ತಿದೋ ಕ್ಷರದ ವಲಯಗಳು ತಾವು ಉದ್ದೀಪಗೊಂಡು ಸತತ**
**ಏಕಾತ್ಮ ಸ್ಪಂದದೊಡನೀಗ ತಾನು ಅನುಸ್ಪಂದಗೊಂಡು ನಿರತ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 6 ರೇಣು 1 ಪುಟ 416)**

**ಮನುಜನಿದೊ ತಾನು ದೇವನಿಗೆ ಕೆಳಗೆ, ಪಶುಗಿಂತ ಉಚ್ಚ ಸ್ಥಾನ,**
**ಇದು ದತ್ತವಿಹುದು ಶಾಂತಘನವಾಗಿ ಅವನ ಮಾರ್ಗದರ್ಶಿ ಸ್ಥಾನ;**
**ಚಿಂತನವೆ ಇರದ ಇಚ್ಛೆಯದು ಅವನನೆಂದಿಗೂ ಸೆಳೆಯದಿಹುದು**
**ನಿರ್ಧರಿತವಿರುವ ಖಗ–ಮೃಗದ ಕ್ರಿಯೆಯ ರೀತಿಯಲಿ ಸಾಗದಿಹುದು;**

**ಇವನೆಂದಿಗೂ ಚಲಿಸ ಬರಿಯಬಂಧನದ ಬಯಕೆಗಂಟಿದಂತೆ**
**ತಮದ ಜೀವಗಳು ಸತತ ಸಂವೇದರಹಿತದಲಿ ಚಲನೆಯಂತೆ.**
**ಬೃಹತ್–ಕಾಯಗಳು ದೈತ್ಯ ಜೀವಗಳು ಉಗ್ರಾತಿ ಉಗ್ರ ಚಲಿಸಿ**
**ಆರೋಹಗೊಂಡರೂ ಆ ದೇವಗಣದ ಸಾಮ್ರಾಜ್ಯ ಛಿದ್ರಗೊಳಿಸಿ,**
**ಇಂತಿದೋ ನರಕ–ಪ್ರೇತದಾಯಾಮ ಕವಚ ತಾವಾಗಿ ಬಯಸಿ;**

**ಪ್ರತಿಫಲನಗೊಳದ ಅವುಗಳಾ ಹೃದಯದಾ ವಾಂಛೆಗಳಲಿ**
**ತಮ್ಮ ಹೃದಯಗಳನೀಗ ವಿಶ್ವ–ನಿಯತಿಗಿದೋ ಢಿಕ್ಕಿಗಳಲಿ**
**ಹಿಂಸೆ ತುಂಬಿರುವ ತಮ್ಮದೇ ಉಗ್ರ ಕರ್ಮದಲಿ ಪತನಗೊಂಡು;**

**ಮಧ್ಯಮದ ಮಾರ್ಗ ತಾನೊಂದು ರೂಪು ಚಿಂತನದ ಮನುಜಗೀಗ.**
**ಅದರ ಪಥದಲ್ಲಿ ಪದದ ಗುರುತುಳಿಸೆ, ಜಾಣ್ಮೆಯಾ ನಡೆಯಲೀಗ**
**ಸೂಕ್ತ ಪಥದಾಯ್ಕೆಗಿಲ್ಲಿಹುದು ತರ್ಕ ಸಮ್ಮತದ– ಕಾಂತಿ ರಮ್ಯ**
**ಇದು ಇವಗೆ ದತ್ತ, ಕಠಿಣಾತಿ ಕಠಿಣ ತಾನಿರಲು ಅವನ ಗಮ್ಯ**

**ಅನಂತಾನಂತ ಸಂಭಾವ್ಯಗಳಲಿ ತಾ ಸಮಭಾವಗೊಳಿಸಿಕೊಂಡು**
**ಅದರದೇ ಅಂಶ ತಾನಾಗಿ ಇಂತು ಇಲ್ಲೀಗ ರೂಪುಗೊಂಡು**

**(ಸಾವಿತ್ರಿ; ದಳ 6 ರೇಣು 1 ಪುಟ 433–34)**

ಹೀಗೆ ತಂತ್ರ ಶಾಸ್ತ್ರವು ಮಾನವನ ಜನ್ಮವು ಎಂಬತ್ನಾಲ್ಕು ಜೀವ–ಜಂತುಗಳಲ್ಲಿ ಜನನಗೊಳ್ಳುವದರ ಮೂಲಕ ಸಾಗಿ ಬಂದು, ಈ ಮಾನವನ ಸ್ವರೂಪವನ್ನು ಪಡೆದುಕೊಂಡಿರುತ್ತದೆ. ಮಾನವನ ಸ್ವರೂಪಕ್ಕಿಂತ ಮೇಲಿನ ಹಂತ ಒಂದಿದೆ. ಈ

ಮೇಲಿನ ಹಂತದಲ್ಲಿರುವ ಜೀವ ಪ್ರಪಂಚವೂ ಸಹಿತ ಮಾನವನ ಜನ್ಮದ ಹಂತದ ವಿಷಯದ ಕುರಿತು ಅಸೂಯೆ ಹೊಂದಿರುತ್ತದೆ. ಏಕೆಂದರೆ, ಈ ಭೂಮಿಯ ಮೇಲೆ ಮಾನವನ ಜೀವನವು ಮಾತ್ರ ವಿಕಾಸದ ಹಂತವನ್ನು ಅನುಭಾವಿಸಬಲ್ಲದು. ಪರಿವರ್ತನೆಯ ಹಂತವನ್ನು ಅನುಭವಿಸಬಲ್ಲದು. ಪ್ರಗತಿಯನ್ನೂ ಕಾಣುತ್ತದೆ ಮತ್ತು ಮುಕ್ತಿಯನ್ನೂ ಪಡೆದುಕೊಳ್ಳುತ್ತದೆ. ಈ ವಿಷಯಕ್ಕಾಗಿಯೇ ಎಲ್ಲ ಪುರಾಣಗಳು ಸಹಿತ, ದೇವತೆಗಳೂ ಸಹಿತ ಈ ಭೂಬದುಕಿಗೆ ಬಂದು ಮಾನವನ ಜನ್ಮದ[4] ಸ್ವರೂಪವನ್ನು ಹೊಂದಬೇಕಾಗುತ್ತದೆ ಎಂದು ವಿವರಿಸಿವೆ.

ಈ ವಿಷಯವನ್ನು ಶ್ರೀ ಅರವಿಂದರು ತಮ್ಮ 'ಸಾವಿತ್ರಿ'ಯಲ್ಲಿ ಕಾವ್ಯಾತ್ಮಕವಾಗಿ ಅಭಿವ್ಯಕ್ತಗೊಳಿಸಿದ್ದಾರೆ. ಇಲ್ಲಿ 'ಮಧ್ಯಮ ಮಾರ್ಗ' ಎನ್ನುವದು ಸುದೀರ್ಘ ವಿವರಣೆಯನ್ನು ಅಪೇಕ್ಷಿಸುತ್ತದೆ. ಐವತ್ತಕ್ಕೂ ಹೆಚ್ಚು ಮಾರ್ಗಗಳ ಕುರಿತು ಭಾರತೀಯ ಪರಂಪರೆಯಲ್ಲಿ – ಹಿಂದೂ, ಶಾಕ್ತ, ಶೈವ, ಬೌದ್ಧ ಮತ್ತು ಇತರೇ ಪಂಥಗಳ್ಲಿಯೂ ಈ 'ಮಾರ್ಗಗಳ' ಕುರಿತು ಜ್ಞಾನ ಪರಂಪರೆಯಿದೆ. ಗ್ರಂಥಗಳಿವೆ. ಆರಾಧನಾ ಪದ್ದತಿಯೂ ಮುಂದುವರದಿದೆ.

(ಸಶೇಷ)

---

**ಟಿಪ್ಪಣಿ:**

1. **ಕುಲಾರ್ಣವ ತಂತ್ರ** ಇದು **'ಕುಲ'** ಶಬ್ದದ ಆಯಾಮದಲ್ಲಿ ಹಲವಾರು ಸ್ವರೂಪದಲ್ಲಿ ಅಧ್ಯಯನದಲ್ಲಿದೆ. ಪ್ರಚಲಿತದಲ್ಲಿ ಇಲ್ಲಿ ರೂಪಿತಗೊಂಡಿರುವ **'ಕುಲಾರ್ಣವ ತಂತ್ರ'**ವು ಭಾಸ್ಕರ ರಾಯನು ಬರೆದಿರುವ **'ಲಲಿತಾ ಸಹಸ್ರನಾಮ'**ದ ಅಧ್ಯಯನ ಕ್ರಮಾಂಕದಲ್ಲಿದೆ. ಬಹುತೇಕವಾಗಿ ಈ ಭಾಸ್ಕರ ರಾಯನ ಗ್ರಂಥವೇ ಹೆಚ್ಚು ಜನಜನಿತಗೊಂಡಿದೆ. **"ಕುಲೇ ಅಕುಲಸ್ಯ ಸಂಬಂಧಃ ಕೌಲಾಮಿತ್ಯಾಭಿದೀಯತೆ"** ಎಂದು ಅತ್ಯಂತ ಸರಳವಾಗಿ ಇದರ ವಿವರಗಳನ್ನು ಭಾಸ್ಕರ ರಾಯ ರೂಪಿಸಿದ್ದಾನೆ. **'ಕುಲಾ ಎಂದರೆ ಶಕ್ತಿ'; 'ಅಕುಲಾ ಎಂದರೆ ಶಿವ'.** ಹೀಗಾಗಿ ಕುಲಾ ಮತ್ತು ಅಕುಲಾ ಮಧ್ಯೆ ಇರುವ ಸಂಬಂಧವೇ ಅಂದರೆ ಶಿವ ಮತ್ತು ಶಕ್ತಿಗಳ ಮಧ್ಯೆ ಇರುವ ಸೌಷಮ್ಯಭರಿತ ಸಂಬಂಧವೇ **'ಕೌಲ'**ವಾಗಿದೆ. ಹೀಗಾಗಿ ಶಿವ ಮತ್ತು ಶಕ್ತಿಯರ ಮಧ್ಯೆ ಸಮತೆಯನ್ನು ಕಾಣುವ ಮೂಲಕವೇ ಈ ಕೌಲ ಮಾರ್ಗವನ್ನು ಸ್ವೀಕರಿಸಲಾಗುತ್ತಿದೆ ಮತ್ತು ಅದೇ ಮನೋಭೂಮಿಕೆಯಲ್ಲಿ ಪ್ರಗತಿಗೊಳ್ಳುತ್ತ ಸಾಗುತ್ತಿದೆ. ಶಿವನೇ ಆಗಲಿ ಅಥವಾ ಶಕ್ತಿಯೇ ಆಗಲಿ

ಇವರಿಬ್ಬರೂ ಏಕಾಕಿಯಲ್ಲ. ಅಂದರೆ ಸ್ವಯಂ ಏಕವಾಗಿರುವ ಸ್ಥಿತಿಯನ್ನೂ ಹೊಂದಿಲ್ಲ ಜೊತೆಗೆ ಗತಿಯನ್ನೂ ಹೊಂದಿಲ್ಲ.

2. **ಸ್ಫುಲಿಂಗಗಳು:** ಪ್ರಜ್ವಲಶೀಲವಾಗಿರುವ ಚಿರಂತನದ ಜ್ವಾಲೆಯಿಂದ ಉದಿತಗೊಂಡಿರುವ ಸ್ಫುಲಿಂಗಗಳು(ಅಗ್ನಿಯ ಕಿಡಿಗಳು) ಗುಣದಲ್ಲಿ ಆ ಮೂಲ ಅಗ್ನಿಯ ಗುಣವನ್ನೇ ಹೊಂದಿರುತ್ತವೆ. **ಅದರ ಸಂಜಾತವೇ ಆಗಿರುತ್ತವೆ. ಅಚಲವಾಗಿರುವ ಸ್ಥಿತಿಯಿಂದಲೇ ಇವು ಆಯಾಮವನ್ನು ಹೊಂದಿರುವ ಸ್ವರೂಪದಲ್ಲಿ ಉದಿತಗೊಳ್ಳುತ್ತವೆ. (ಮುಂಡಕೋಪನಿಷತ್ತು 2–1–1)**

3. **ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಈ ಮುಕ್ತಾತ್ಮ ಜೀವನದ ಹಂತವನ್ನು, ಈ ತಾಂತ್ರಿಕ ವಿಶ್ಲೇಷಣೆಯಲ್ಲಿ ದೇವತೆಗಳಿಗಿಂತಲೂ ಔನ್ನತ್ಯದ ಸ್ಥಾನದಲ್ಲಿ ಗುರುತಿಸಲಾಗಿದೆ. ಇಲ್ಲಿ ನಾಲ್ಕು ರೀತಿಯ ಹಂತಗಳನ್ನು ಊಹಿಸಲಾಗಿದೆ. ಉದ್ಭಿಜ (ಅಂದರೆ ಭೂಮಿಯಿಂದ ಉದಿತಗೊಳ್ಳುವ), ಸ್ವೇದಜ ಅಂದರೆ ಬೆವರಿನಿಂದ ಉದಿತವಾಗುವ, ಅಂಡಜ ಎಂದರೆ ತತ್ತಿಯಿಂದ ಜನ್ಮ ತಾಳುವ ಮತ್ತು ಜರಾಯುಜ ಎಂದರೆ ಭ್ರೂಣದಿಂದ ಜನ್ಮ ತಾಳುವ ಸ್ವರೂಪಗಳು.**

**4. "ಮಾನವ ಜನ್ಮ" ಎನ್ನುವ ಯಾವುದೇ ಸ್ವರೂಪ ಇರುವದಿಲ್ಲ. ಆದರೆ ದೇವತೆಗಳು ಮತ್ತು ಪಿತೃಲೋಕದ ಜೀವಿಗಳಲ್ಲಿ ಈ ಮಾನವ ಜನ್ಮದ ಕುರಿತು ಬಯಕೆ ಇರುತ್ತದೆ. ಜೀವಕ್ಕೆ ಮಾನವನ ಸ್ವರೂಪ ಲಭ್ಯವಾಗುವದು ಅತ್ಯಂತ ಕಠಿಣತಮ ಪ್ರಕ್ರಿಯೆಯಾಗಿದೆ. ಅದಕ್ಕಾಗಿಯೇ ಮಾನವನ ರೂಪದಲ್ಲಿ ಜನ್ಮ ತಾಳುವದು ಅಥವಾ ಅದನ್ನು ಪಡೆದುಕೊಳ್ಳುವದು ಎಂದರೆ ತೀವ್ರಾತಿ ತೀವ್ರವಾದ ಕಷ್ಟಗಳನ್ನು ಹೊಂದಿದೆ. ಈ ವಿಷಯವನ್ನು ಎಲ್ಲ ಶಾಸ್ತ್ರ ಗ್ರಂಥಗಳೂ ಹೇಳುತ್ತಿವೆ. ಎಂಬತ್ತಾನ್ನಾಲ್ಕು ಲಕ್ಷ ಜೀವನದ ಹಂತದಲ್ಲಿ ಮಾನವನ ಜನ್ಮವೇ ಅತ್ಯಂತ ಫಲಪ್ರದವಾಗಿರುವ ಹಂತವಾಗಿದೆ. ಏಕೆಂದರೆ ಉಳಿದ ಯಾವುದೇ ಜೀವ–ರಾಶಿಗಳಲ್ಲಿ ಋತದ ಜ್ಞಾನವನ್ನು ಹೊಂದಲು ಸಾಧ್ಯವಾಗುವದಿಲ್ಲ. ಹೀಗಾಗಿ ಈ ಮಾನವ–ಜನ್ಮವನ್ನು ಮುಕ್ತಿಯ ಪಥದಲ್ಲಿ ಸಾಗಲು ಇರಿಸಿದ ಭದ್ರ ಪಥವಾಗಿದೆ. ಆದರೆ ಅಪರೂಪದಲ್ಲಿಯೇ ಅಪರೂಪವೆನ್ನುವಂತೆ ಕೆಲವೇ ಕೆಲವರು ಮಾತ್ರ ಈ ಹಂತವನ್ನು ಸಾಧಿಸಿಕೊಳ್ಳುತ್ತಾರೆ. (ವಿಶ್ವಸಾರ ತಂತ್ರ)**

* * *

## ಶ್ರೀ ಅರವಿಂದರ
# ‘ಸ್ವಪ್ನ ಪ್ರಪಂಚ ಮತ್ತು ಜಾಗ್ರತ ಪ್ರಪಂಚ’

**– ಅನುವಾದ: ಪುಟ್ಟು ಕುಲಕರ್ಣಿ**

ಜಡಸತ್ತೆ ಮೇಲೆ ಅದರ ಪಾದಗಳು ಆಧಾರಗೊಂಡರೂನು
ಧೀಃಶಕ್ತಿಯಲ್ಲದರ ರೆಕ್ಕೆಗಳು ಅನಂತವನು ಮೀರಿ ತಾನು

**– ದಳ 2 ರೇಣು 11 ಪುಟ 267**

[ಆಧುನಿಕ ಭಾಷಾ ವ್ಯವಸ್ಥೆಯಲ್ಲಿ “ವಿಜ್ಞಾನ” ಶಬ್ದವು ಕೇವಲ ಭೌತಿಕ ಜಗತ್ತಿಗೆ ಮಾತ್ರ ತನ್ನ ಸಂಶೋಧನೆಗಳ ಸಾರವನ್ನು ನಿಗದಿಗೊಳಿಸಿಕೊಂಡಂತೆ ಇದೆ. ಆದರೆ ಬ್ರಹ್ಮಾಂಡದ ಸಂರಚನಾ ವ್ಯವಸ್ಥೆಯಲ್ಲಿ ಈ ವಿಜ್ಞಾನ ಶಬ್ದವು ಕೇವಲ ಒಂದೇ ಆಯಾಮವನ್ನು ಪ್ರತಿನಿಧಿಸುತ್ತಿರುವದರಿಂದಾಗಿ, ವಿಜ್ಞಾನಕ್ಕೂ ಮತ್ತು ತತ್ತ್ವಜ್ಞಾನಕ್ಕೂ ಸಮಂಜಸ ವಿನಿಮಯಗಳು ನಡೆಯುತ್ತಿಲ್ಲ. ಆದರೆ ಭಾರತೀಯ ತತ್ತ್ವ ಶಾಸ್ತ್ರದಲ್ಲಿ ಈ ‘ವಿಜ್ಞಾನ’ವನ್ನು ಕೇವಲ ಭೌತಿಕ ಜೀವನಕ್ಕೆ ಮಾತ್ರ ಸೀಮಿತಗೊಳಿಸದೆ, ಇಡೀ ಬ್ರಹ್ಮಾಂಡದ ಸಂರಚನೆಯೂ ಸಹಿತ ಮಾನವನ ಸಂರಚನೆಯಂತೆಯೇ ಇದೆ ಎನ್ನವುದನ್ನು ಅಭಿವ್ಯಕ್ತಗೊಳಿಸಲು, ಸಾಮ್ರಾಜ್ಯಂ ಎನ್ನುವದನ್ನು ಮತ್ತೂ ವಿಸ್ತರಿಸಿ “ವೈರಾಜ್ಯಂ” ಎಂದಂತೆ, ವಿಜ್ಞಾನವನ್ನೂ ಸಹಿತ “ವಿಜ್ಞಾನ ಘನ–ಸತ್ತೆ” ಎಂದೇ ಅಭಿವ್ಯಕ್ತಿಸಿದ್ದಾರೆ. ಅದರ ವಿವರಣೆಯನ್ನು ಶ್ರೀ ಅರವಿಂದರು ತಮ್ಮ “ಲೈಫ್ ಡಿವೈನ್” ಗ್ರಂಥದಲ್ಲಿ ವಿವರವಾಗಿ ವಿವೇಚಿಸಿದ್ದಾರೆ. ಅದೂ ಅಲ್ಲದೇ, “ತಂತ್ರ–ವಿಜ್ಞಾನದ ವಿಜೃಂಭಣೆ ಇದೀಗ ಮುಗಿದಿದೆ. ಈ ತಂತ್ರ ವಿಜ್ಞಾನಕ್ಕೆ ಅತೀತವಾದ ಜ್ಞಾನದತ್ತ ಮುಖಮಾಡಿ ಸಾಗುವದೊಂದೆ ನಮಗುಳಿದಿರುವ ಮಾರ್ಗ” ಎನ್ನುವ ಮಾತಿನಂತೆ, ಹಾಗೂ “ಮನಸ್ಸು ಒಂದು ಸುಸೂಕ್ಷ್ಮ ವಸ್ತು. ಪ್ರಾಚೀನ ಭಾರತೀಯ ಜ್ಞಾನಿಗಳು ಪ್ರತಿಪಾದಿಸುತ್ತಿದ್ದ ಮಾನವನ ಭೌತಾತೀತ ಅಸ್ತಿತ್ವ ದ ಬಗೆಗೆ ಈಗ ಸಂಶಯಗಳು ಉಳಿದಿಲ್ಲ. ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬಹುದಾದರೆ, ಭೌತವಸ್ತು ಮತ್ತು ಆತ್ಮವಸ್ತುವಿನ ನಡುವೆ ಭೇದವೆನ್ನುವದೇ ಇಲ್ಲ. ಒಂದು ವೇಳೆ ಈ ಭೇದವಿದ್ದರೂ ಅದು ಮನಸ್ಸಿನ ಸೃಷ್ಟಿ!”[1] ಎನ್ನುವ ಮಾತಿನಂತೆ, ಈ ಮನೋವೈಜ್ಞಾನಿಕ ಹಂತದ ವಿವಿಧ ಆಯಾಮಗಳ ಹಿನ್ನೆಲೆಯಲ್ಲಿ, ಚಿತ್ತದ ವಿಕಸನದ ಪಥದಲ್ಲಿ ಸಾಗಿದ ವಿವರಗಳ ಹಿನ್ನೆಲೆಯಲ್ಲಿ ಈ ಲೇಖನ.]

ನಮ್ಮ ಚಿಂತನದಲ್ಲಿ, ನಮ್ಮ ಮನೋವ್ಯಾಪಾರದ ವಿಕಸನದ ಮೂಲಕ ಅತಿಮಾನಸದ ಹಂತದ ಆಚೆ ಆಚೆ ಸಾಗುತ್ತ ಆ ಅತಿಮಾನಸದ ಹಂತದ ವಿಕಸನದಲ್ಲಿ ಇರುವಾಗ, ಬಹುತೇಕವಾಗಿ ಇದು ಸಾಧ್ಯವೇ ಇಲ್ಲವೇನೋ ಎನ್ನುವಂತಹ ಅವಸ್ಥೆಯಲ್ಲಿ ತೊಂದರೆಯನ್ನು ಎದುರಿಸುತ್ತೇವೆ. ನಾವೀಗ ಈ ದಿಸೆಯಲ್ಲಿಯೇ ಸಾಗಿ, ಅತಿಮಾನಸದ ಅಥವಾ ವಿಜ್ಞಾನ ಘನಸತ್ತೆಯ ಅಸ್ತಿತ್ವವಿರುವ ಬಗೆಗೆ ನಿರ್ದಿಷ್ಟವಾದ ವಿಚಾರವೊಂದನ್ನು ರೂಪಣೆಗೊಳಿಸಬೇಕಿದೆ. ಜೊತೆಜೊತೆಗೆ ಈ ವಿಜ್ಞಾನ ಘನಸತ್ತೆಯ ವಿಕಸನದ ಪ್ರಕ್ರಿಯೆಯು, ಅಜ್ಞಾನದ ಅಂಧಕಾರದಲ್ಲಿಯೇ ಸಿಲುಕಿ ಕ್ಲೇಶಗೊಳ್ಳುತ್ತಿರುವ ಬಗೆಗೂ ನಿರೂಪಣೆಗಳನ್ನು ರೂಪಿಸಿಕೊಳ್ಳಬೇಕಿದೆ.

ನಮ್ಮ ಬೋಧಾತೀತ ಮನಸ್ಸು ಈ ಪರಮಾಂತಿಕ ಗಡಿಯನ್ನು(ರೇಖೆಯನ್ನು) ಮೀರುವ ಮೂಲಕವೇ ನಮ್ಮ ಚಿತ್ತು(ಚೇತನವು) ಗೋಳದ ವ್ಯಾಪ್ತಿಯನ್ನು ಮೀರಿ ಚಲಿಸಬೇಕಾಗುತ್ತದೆ. ಸ್ವಭಾವಜನ್ಯವಾದ ಕ್ರಿಯೆಗಳನ್ನು ವರ್ಧಿಸುತ್ತಾ, ಲೌಕಿಕದ ಯಾವುದೇ ಬಂಧನಕ್ಕೆ ಸಿಲುಕದೇ, ಮಾನಸಿಕ, ಊಹಾತ್ಮಕ ಭಾವಗಳಿಗೆ ಸಿಲುಕದೇ, ಮತ್ತು ಅವೇ ಜ್ಞಾನವೆನ್ನುವ ಭ್ರಮೆಗೂ ಒಳಗಾಗದಂತೆ ಸಾಗಬೇಕಿದೆ. ಇದು ಅತ್ಯಂತ ಪ್ರಮಾಣಭೂತವಾಗಿ ಸಾಕ್ಷಿಯಾಗಿರಬೇಕಾದ ಅಂಶವಾಗಿದೆ. ಈ ಅಧಿಮಾನಸ ಗುಣವೇ ದೈವೀ ಸ್ವಭಾವ(ಪ್ರಕೃತಿಯ) ಮತ್ತು ದೈವತ್ವದ ಅನುಭವವನ್ನು ಅನುಭವಿಸುವಲ್ಲಿ, ಪಡೆಯುವಲ್ಲಿ ಮತ್ತು ಪರಿಪೂರ್ಣವಾಗಿ ಸಮ್ಮಿಲಿತವಾಗುವಲ್ಲಿ ಅತ್ಯಾವಶ್ಯವಾಗಿರುತ್ತದೆ.

ಜೊತೆಜೊತೆಗೆ ಇದು ತನ್ನಲ್ಲಿಯೇ ಅಂತರ್ಗತಗೊಳಿಸಿಕೊಂಡ ವಿಷಯವೆಂದರೆ, ಅದೂ ವಿಕಾಸಾತ್ಮಕವಾದ ತತ್ವಗಳ ಅತಿಶಯತೆಯ ಗುಣದಿಂದಾಗಿ, ಬದಲಾವಣೆಯ ಪ್ರಕ್ರಿಯೆಗೆ ಒಳಪಡಲು ತನ್ನನ್ನು ತಾನು ನಿಬಂಧನೆಗೊಳಿಸಿಕೊಂಡಿರುವ ಗುಣದಿಂದಾಗಿ, ಈ ಸಾಂಸಾರಿಕ ಪ್ರಕೃತಿಯನ್ನು (ಭೌತಿಕ ವ್ಯವಸ್ಥೆಯನ್ನು) ಪರಿಪಕ್ವ ದೈವೀ ನೆಲೆಯಲ್ಲಿ ಅನುಷ್ಠಾನಗೊಳಸಿಕೊಳ್ಳುವ ಸಲುವಾಗಿ, ಎಲ್ಲಕ್ಕಿಂತ ಮಿಗಿಲಾಗಿ – ಇವೆಲ್ಲವೂ ನಮ್ಮ ಲೌಕಿಕದ ವ್ಯವಹಾರಗಳ ಮೂಲಕವೇ ನಮ್ಮ ವಿಕಾಸ ಎನ್ನುವ ಹಂತದಲ್ಲಿಯೇ ಪರಿಗಣಿಸಲ್ಪಡಬೇಕಾಗುತ್ತದೆ.

ಈ ಹಂತದಲ್ಲಿ ನಮ್ಮ ಲೌಕಿಕ ವ್ಯವಹಾರಗಳ ಮೂಲಕ ಉದ್ಭವಗೊಳ್ಳುವ ಅನುಭವಗಳಲ್ಲಿ, ನಮ್ಮ ವಿಕಾಸದ ಹಂತದಲ್ಲಿ ಪರಿಗಣಿಸಲ್ಪಡಬೇಕಾಗುತ್ತದೆ. ಆ ಮೂಲಕ ಈ ಘಟನೆಗಳಲ್ಲಿ ಕೆಲವನ್ನಾದರೂ ದಿವ್ಯತ್ವದೆಡೆಗೆ ರೂಪಾಂತರಗೊಳಿಸ–

ಬೇಕಾಗುತ್ತದೆ. ಅಪರಿಪೂರ್ಣತೆಯನ್ನು ಮತ್ತು ಕಣ್ಮರೆಯಾಗುವ(ಕಾಣದಂತೆ ಅಡಗಿರುವ)ದನ್ನು ಸಹಿತ ಅಷ್ಟೇ ಸೃಜನಾತ್ಮಕವಾಗಿ ನಿರಾಕರಿಸುವ ಮೂಲಕ, ದಿವ್ಯಸತ್ಯದ ಎಡೆಗೆ ಮತ್ತು ಅನಂತ್ಯದ ಎಡೆಗೆ ತಲುಪಬಹುದಾಗಿದೆ. ಆದರೆ ಇವೆಲ್ಲವೂ ಸಾಮಾನ್ಯವಾದ ಸೂತ್ರಗಳಾಗಿವೆ. ಇವು ಯಾವುದೇ ಮಹತ್ವಪೂರ್ಣ ವಿಚಾರವನ್ನು ಪ್ರಚೋದಿಸುವದಿಲ್ಲ. ಬದಲಾವಣೆಗೆ ಸಹಕಾರಿಯೂ ಆಗಿರುವದಿಲ್ಲ. ನಮ್ಮಲ್ಲಿರುವ ಸರ್ವೇ ಸಾಮಾನ್ಯವಾದ ಊಹೆ ಅಥವಾ ಕಲ್ಪನೆ ಅಥವಾ ದೈವೀ ನೆಲೆಯ ಘಟನೆಗಳ ಸೃಷ್ಟಿ ಮತ್ತು ಲೌಕಿಕ ಬದುಕಿನ ವಸ್ತುಗಳಾಗಲೀ ಇವೆಲ್ಲ ಮಾನಸಿಕ ಸೃಷ್ಟಿಗಳಾಗಿವೆ. ಆದರೆ ವಿಜ್ಞಾನಮಯ ಪರಿವರ್ತನೆ ಎಂದರೆ, ಇಲ್ಲಿ ವಿಕಾಸದ ಕ್ರಿಯೆಯು ಚಿತ್ತದ ಪರಮೋಚ್ಚ ನೆಲೆಯ ಮತ್ತು ಚಿತ್ತದ ನಿಸರ್ಗ ಸಹಜವಾದ ಮೌಲಿಕ ವೃತ್ತಿ(ವರ್ತನ)ಗಳಿಂದ ಮತ್ತು ನಿಗದಿಗೊಳಿಸಲ್ಪಟ್ಟ (ವಿಧಿ–ವಿಧಾನಗಳಿಂದ) ಮತ್ತು ಮನಸ್ಸಿನ ಪ್ರಜ್ಞಾನ ಹಂತದ ರೂಪಗಳಿಂದ ನಿರ್ಮಿತಿಗೊಂಡಿದ್ದು, ದೀರ್ಘಕಾಲೀನವಾಗಿ ಲಭ್ಯವಾಗುವದಿಲ್ಲ. ಏಕೆಂದರೆ, ಇದು ಮನೋಚಿಂತನಕ್ಕೆ ಅರ್ಥೈಸಿಕೊಳ್ಳಲು ಕಠಿಣವಾಗಿರುತ್ತದೆ ಅಥವಾ ಅತಿಮಾನಸೀಯ ಗುಣವನ್ನು ವಿವರಿಸಲು ಅಶಕ್ಯವಾಗಿರುತ್ತದೆ.

ನಿತ್ಯ ಸಂಚಲಿತ ನಮ್ಮ ವಿಧಿಲಿಖಿತ ಸಾರ್ಥಕದ ಭಾವದಲ್ಲಿ;
ವಿಜ್ಞಾನವದುವು ಸಂಜ್ಞಾನದೊಡನೆ ಸಂಪರ್ಕ ಪಡೆಯುವಲ್ಲಿ
ಸಂಖ್ಯೆ –ರೂಪುಗಳ ಸಂಕೇತ –ಶಕ್ತಿಗಣ ಸಾಕಾರಗೊಳ್ಳುವಲ್ಲಿ
ಅಭಿಜ್ಞಾನವದು ಪ್ರತ್ಯಭಿಜ್ಞಾನ ಸಂಧಿಸಲು ಸಿದ್ಧಿಯಲ್ಲಿ, ।

ಮತ್ತೆ ಬಲು ಗೂಢ ಲೋಕದಿತಿಹಾಸ ಸಂಹಿತೆಯ ಕ್ರಮದ ಸ್ಥಾನ
ಮತ್ತೆ ಪ್ರಕೃತಿಯಾ ಭಾವವಿನಿಮಯವು ಆತ್ಮದಾ ಜೊತೆಗೆ ತಾನ
ಸಂವಾದದಲ್ಲಿ ಸಂವೇದಗೊಂಡು ಸಾಕಾರವಾಗುತಲ್ಲಿ
ಇದು ಲಿಖಿತವಿಹುದು ಜೀವನದ ಪರಮದನುಭಾವ ಹೃದಯದಲ್ಲಿ

ಮನೋ ಗುಣವು(ಮಾನಸ ವೃತ್ತಿ) ಮತ್ತು ಮನೋ ಚಿಂತನಗಳು ಸಾಂತದ ಚಿತ್ತದ ಮೇಲೆ ಆಧಾರಿತವಾಗಿರುತ್ತವೆ. ಅತಿಮಾನಸಿಕ–ಗುಣವು ಚೇತನದ ಸೂಕ್ಷ್ಮಾತಿಸೂಕ್ಷ್ಮವಾದ ಬೀಜರೂಪದಲ್ಲಿರುತ್ತದೆ, ಮತ್ತು ಅನಂತದ ಶಕ್ತಿಯೂ ಆಗಿರುತ್ತದೆ. ಅತಿಮಾನಸ (ಉನ್ಮನೀ) ಹಂತದ ಪ್ರಕೃತಿಯು ಸರ್ವಸ್ವವನ್ನೂ ದೃಷ್ಟಿಸುವ – ಅಂದರೆ ವ್ಯಷ್ಟಿಯ ಅಸ್ಮಿತೆಯನ್ನೂ ಸಮಷ್ಠಿಯ ಸ್ವರೂಪವನ್ನೂ

ಮತ್ತು ಇವೆಲ್ಲವೂ ಏಕರೂಪಿಯಾಗಿ ಅದ್ವೈತವಾಗಿ ಇರುವದನ್ನು ಕಾಣುತ್ತದೆ (ದರ್ಶಿಸುತ್ತದೆ). ಅಪಾರ ವೈವಿಧ್ಯತೆ, ಪುನರ್–ರೂಪಧಾರಣೆ, ಗುಣಿತಗೊಂಡು ಅಗಣಿತವಾಗುತ್ತಿರುವ ಕ್ರಿಯೆ, ಮನೋಭೂಮಿಕೆಗೆ ಬಲವಾದ ವಿರೋಧಾಭಾಸಗಳಂತೆ ತೋರುತ್ತಿರುವ ಸರ್ವಸ್ವವೇ ಆಗಿದ್ದರೂ, ಆ ಜ್ಯೋತಿರ್ಮಯ ಪ್ರಕಾಶದಲ್ಲಿಯೇ 'ಒಂದಾಗಿ' ಕಾಣುತ್ತದೆ. ಇದರ ಕೃತುಶಕ್ತಿ, ಚಿಂತನಗಳು, ಆತ್ಮಾಭಿಲಾಷೆ–ಬಯಕೆಗಳು, ಅನುಭವಗಳು, ಸಂವೇದನೆಗಳೆಲ್ಲವೂ, ಆದಿಮ ಬಿಂದುವಿನಿಂದ ವಿಭಾಗಗೊಂಡ ರೂಪಗಳಾಗಿಯೆ ತೋರುತ್ತವೆ. ಹೀಗಾಗಿ ಇವೆಲ್ಲವೂ ಆಂತರ್ಯದಲ್ಲಿ, ಆ ಪರಮದೇಕ್ಯೆಕದಲ್ಲಿಯೇ ನೆಲೆಗೊಂಡಿರುವದು ಸಾಕ್ಷಾತ್ಕಾರಗೊಳ್ಳುತ್ತದೆ. ಯಾವಾಗ ಈ ಅದ್ವೈತವು ಅನುಭವಕ್ಕೆ ಬರುವದೋ, ಆಗಲೂ ಅದು ಕೆಲವೊಂದು ಸೀಮಿತ ಮತ್ತು ವಿಭಿನ್ನ ನೆಲೆಗಳಲ್ಲಿಯೇ ಆಧಾರವಾಗಿರುತ್ತದೆ.

ಆದರೆ ಈ ಉನ್ಮನೀ–ಮನೋಸ್ಥಿತಿಯ(ಅತಿಮಾನಸೀಯ ಹಂತ) ದಿವ್ಯ ಜೀವನವು ಮಾನವ ಜೀವನದ ಸಾರಭೂತವಾಗಿರುತ್ತದೆ; ಇದೊಂದು ಸ್ವತಃಸ್ಫುರಣಗೊಂಡ ಹಾಗೂ ಅಂತರ್ನಿಹಿತವಾದ ಏಕತೆಯಾಗಿರುತ್ತದೆ. ಹೀಗಾಗಿ, ಮನಸ್ಸಿಗೆ, ಜೀವನದಲ್ಲಿ ಅತಿಮಾನಸ ಹಂತದ ಬದಲಾವಣೆಯು – ವಿಭಾಗಗಳಲ್ಲಿ ರೂಪುಗೊಂಡು ಆವಿರ್ಭವಿಸುತ್ತದೆ. ಆದರೆ, ಜೀವನದ ಕರ್ಮಗಳ ಅನುಷ್ಠಾನದ ಸಂದರ್ಭಗಳಲ್ಲಿ ಹೇಗೆ ಆವಿರ್ಭವಿಸುತ್ತದೆ ಮತ್ತು ಯಾವ ರೂಪು ತಳೆದು ವ್ಯಕ್ತಿಯೋರ್ವನ ಅಥವಾ ಸಮಷ್ಠಿಯ ವ್ಯವಸ್ಥೆಯಲ್ಲಿ ಪ್ರಕಟಗೊಳ್ಳುತ್ತದೆ ಎನ್ನುವದರ ಬಗೆಗಿನ ವಿವರಗಳನ್ನು ಊಹಿಸುವದು ಅಷ್ಟೊಂದು ಸುಲಭ ಸಾಧ್ಯವಲ್ಲ. ಈ ಅತಿಮಾನಸ ಹಂತದಲ್ಲಿ "ಸರ್ವಸ್ವವೂ" ದೃಷ್ಟವಾಗುತ್ತದೆ. ಅಂದರೆ, ಏಕತ್ವದ ಹಿನ್ನೆಲೆಯಲ್ಲಿಯೇ ಅನೇಕತ್ವದ ಅಥವಾ ವ್ಯಷ್ಟಿಯ ಕೇಂದ್ರದಲ್ಲಿಯೆ ಸಮಷ್ಠಿಯೂ ರೂಪಿತಗೊಂಡಿರುವ ಸಂಗತಿಗಳನ್ನು, ಜೊತೆಗೆ ಗುಣಿತಗೊಂಡು ವೈವಿಧ್ಯತೆಯಲ್ಲಿ ರೂಪಾಂತರಗೊಳ್ಳುತ್ತಿರುವ ಸಂಗತಿಗಳನ್ನು, ಮತ್ತೆ ಯಾವುದು ಮನಸ್ಸಿಗೆ ಬಲವಾದ ವಿರೋಧಾಭಾಸವೆಂದು ಭಾಸವಾಗುತ್ತದೆಯೊ ಅಂತಹ ಸಂಗತಿಗಳಿಗೂ, ಎಲ್ಲವೂ ಈ "ಏಕ"ತ್ವದಲ್ಲಿಯೇ ಪ್ರಕಟಗೊಳ್ಳುತ್ತವೆ. ಇದರ ಕೃತುಶಕ್ತಿ, ಭಾವನೆಗಳು, ಸಂವೇದನೆಗಳು ಸಹಿತ ಈ ಏಕತ್ವದಿಂದಲೇ ಸಂಯೋಜನೆಗೊಳಿಸಲ್ಪಟ್ಟಿರುತ್ತವೆ. ಇವುಗಳನ್ನು ಆಧರಿಸಿಯೇ ಕರ್ಮಗಳು/ ಕಾರ್ಯಗಳು ರೂಪುಗೊಳ್ಳುತ್ತವೆ.

ಸ್ವರ್ಗಸೀಮೆಯಾ ಚಿನ್ಮಯದ ತೋಷ ಪ್ರತಿಫಲನಗೊಳಿಸಿ ಇಂದು
ವಿಶ್ವಚೇತನದ ವಲಯದೆದೆಯಿಂದ ಅವತರಣಗೊಂಡು ಬಂದು
ಅವಳ ಸಹಕರ್ಮಿ ನಿತ್ಯ ಚಿತ್ಪ್ರಭೆಯ ಮಂಡಲದಿ ಅವಳ ಕಂಡು
ಅವಳೊಲುಮೆ ಬೆಳಕ–ರಕ್ಷೆಯನು ಪ್ರತ್ಯಭಿಜ್ಞೆಯಲಿ ನಿತ್ಯ ಕಂಡು

**(ಸಾವಿತ್ರಿ; ದಳ 1 ರೇಣು 2 ಪುಟ 16)**

ಇದಕ್ಕೆ ವ್ಯತಿರಿಕ್ತವಾಗಿ, ಮನೋಪ್ರಕೃತಿಯು ಆಯಾ ವಿಭಾಗಗಳ ಹಂತದಲ್ಲಿ, ಪ್ರಾರಂಭಿಕ ಹಂತದಲ್ಲಿ ಯೋಚಿಸುತ್ತದೆ; ಗಮನಿಸುತ್ತದೆ; ಇಚ್ಛಿಸುತ್ತದೆ; ಸಂವೇದನೆಯನ್ನು ಕಾಣುತ್ತದೆ. ಒಟ್ಟಿನಲ್ಲಿ ಇವೆಲ್ಲವುಗಳೂ ಕ್ರೋಢೀಕೃತವಾದ ಸಂಯೋಜನೆಯಾಗಿ "ಏಕತ್ವ"ದ ಬಗೆಗೆ ಅರಿವು ಪ್ರಾಪ್ತವಾಗುತ್ತದೆ. ಇದು ಆ ಆಧಾರದಲ್ಲಿಯೇ ಕ್ರಿಯಾಪ್ರವೃತ್ತವಾಗಿರುತ್ತದೆ. ಆದರೆ ಅತಿಮಾನಸದ – ಉನ್ಮನೀ ಮನೋಭಾವದ–ಹಂತದಲ್ಲಿ, "ದಿವ್ಯ ಜೀವನ", ಸ್ವತಃಸ್ಫುರಣ ಮತ್ತು ಅಂತರ್ನಿಹಿತವಾದ ಏಕತೆಯ ಜೀವನವು ಮೂಲಭೂತ ತತ್ತ್ವವಾಗಿ ಇರಬೇಕಾಗುತ್ತದೆ. ಜೀವನದ ಕರ್ಮಗಳಲ್ಲಿ–ಅವುಗಳ ಭಾಗಗಳಲ್ಲಿ – ಅತಿಮಾನಸ ಹಂತದ ಯಾವ ಬದಲಾವಣೆಗಳು ಮತ್ತು ಬಾಹ್ಯ ನಡವಳಿಕೆಗಳು ಅಥವಾ ರೂಪಣೆಗಾಗಿ ಯಾವ ಆಕಾರಗಳು ನಿರ್ಧರಿತಗೊಂಡು, ಅದು ವೈಯಕ್ತಿಕವಾಗಲೀ ಅಥವಾ ಸಮಷ್ಟಿಯ ವ್ಯವಸ್ಥೆಯಲ್ಲಾಗಲೀ ಪ್ರಮುಖವಾಗಿ ಪಾತ್ರ ವಹಿಸುತ್ತವೆ ಎನ್ನುವದರ ವಿವರಗಳನ್ನು, ಮನಸ್ಸಿಗೆ ಗ್ರಹಿಸಲು ಸಾಧ್ಯವಾಗುವದಿಲ್ಲ.

ಮನಸು ಪ್ರಜ್ಞಾನೀತಿಯ ಅಥವಾ ಕೌಶಲ್ಯದ ಅಥವಾ ತರ್ಕದ ಮತ್ತು ಆಯ್ಕೆಯ ಮೂಲಕ ಅಥವಾ ಮಾನಸಿಕ–ಪ್ರವೃತ್ತಿ(ವಾಸನಾ ಪ್ರೀತಿ) ಅಥವಾ ಜೀವನಕ್ಕೆ ವಿಧೇಯ ಪ್ರವೃತ್ತಿಗಳ ಮೂಲಕ ಕಾರ್ಯ ರೂಪಕ್ಕೆ ತೊಡಗುತ್ತದೆ. ಆದರೆ(ಯಾವುದೆ ಸಂದರ್ಭದಲ್ಲೂ ಸಹಿತ) ಈ ಉನ್ಮನೀ ಮನೋಭಾವವು ಮನಃಕಲ್ಪಿತ ತನದಿಂದಾಗಲೀ) ಅಥವಾ ಅದರ ನಿಯಮಗಳಿಂದಾಗಲೀ, ಅಥವಾ ಅದಕ್ಕೆ ಅಪರಾ ಪ್ರವೃತ್ತಿಯ ಪರವಶತೆಯಿಂದಾಗಲೀ ಕ್ರಿಯಾಪ್ರವೃತ್ತವಾಗಿರುವದಿಲ್ಲ. ಇದರ ಪ್ರತಿಯೊಂದು ಹೆಜ್ಜೆಯೂ, ಪ್ರಕೃತಿ ಸಹಜವಾದ ದೈವೀ ದೃಷ್ಟಿಯಿಂದ ಸಾಪೇಕ್ಷತೆಯಲ್ಲಿಯೇ ಮತ್ತು ಸತ್ಯದತ್ತ ಸರ್ವ ರೂಪಗಳೆಡೆಗೆ ನಿಖರವಾದ ತೀಕ್ಷ್ಣ ದೃಷ್ಟಿಕೋನದಿಂದ(ನಿಶಿತಮತಿಯಾಗಿ) ಮತ್ತು ಪ್ರತಿಯೊಂದೂ ಅಂಶಗಳ ಮೂಲಕವೇ ಸಂಶಯದಿಂದ ಪ್ರೇರಿತವಾಗಿರುತ್ತದೆ. ಹೀಗಾಗಿ ಇದು ಯಾವಾಗಲೂ ಸ್ವಭಾವನಿಹಿತವಾದ ಸಚ್ಚಿದಾನಂದದಿಂದಲೇ ಕಾರ್ಯೋನ್ಮುಖಗೊಳ್ಳುತ್ತದೆ.

ಇದು ಮಾನವನ ಅಂತರ್ನಿಹಿತವಾದ ಪರಮಾರ್ಥ ಸತ್ತೆಯಿಂದಲೇ ಕ್ರಿಯಾಪ್ರವೃತ್ತವಾಗಿರುತ್ತದೆಯೆ ವಿನಾ ಮನೋಚಿಂತನದ ಮೂಲಕ ಅಲ್ಲ; ವೃತ್ತಿಗಳಿಗಾಗಿ ರೂಪುಗೊಳಿಸಲ್ಪಟ್ಟಿರುವ ನಿಯಮಗಳಿಂದ ಅಲ್ಲ; ಅಥವಾ ರಚನಾತ್ಮಕ ಚಿಂತನದಿದ ಅಥವಾ ವಿಷಯ ಗ್ರಹಣದ ಸಾಮರ್ಥ್ಯದ ಪ್ರಯುಕ್ತಿಯಿಂದಲೂ ಅಲ್ಲ. ಇದರ ಸಂಚಲನವು ಯಾವಾಗಲೂ ನಿರಾಮಯವಾದ ಪ್ರಶಾಂತತೆಯಲ್ಲಿ ಇರುತ್ತದೆ. ಹೀಗಾಗಿ ಇದು ಸ್ವಯಂ ಸತ್ಯವಾಗಿರುತ್ತದೆ. ಸ್ವತಃಸ್ಫುರಣಗೊಂಡಿರುತ್ತದೆ. ಜೊತೆಗೆ ಸುನಮ್ಯತೆಯಿಂದಲೂ ಕೂಡಿರುತ್ತದೆ.

ಚಿತ್–ಸತ್ತೆಯ ಆತ್ಯಂತಿಕ(ಕೇವಲ ಮಾತ್ರ)ವಾಗಿರುವ ರೂಪ–ಧಾತುವಿನಲ್ಲಿ ಸ್ಥಿತವಿರುವ ಈ ಸತ್ಯದ ಸೌಷಮ್ಯದ ಅಸ್ಮಿತೆಯಿಂದ, ವಿಶ್ವಾತ್ಮಕವಾದ ದೈವೀ ನೆಲೆಯ ರೂಪಧಾತುವಿನಿಂದ ಅಪರಿಹಾರ್ಯವಾಗಿ ದೂರವಾಗಿರುತ್ತದೆ, ಮತ್ತು, ದೃಢವಾಗಿ(ಸುಪರಿಚಿತವಾಗಿ) ಮತ್ತು ಈ ಮೂಲಕ ಸುನಿಶ್ಚಯವಾಗಿ ಸರ್ವಸ್ವವನ್ನೂ ಒಳಗೊಂಡ ಅದರದೇ ಅಸ್ಮಿತೆಯಾಗಿರುವ (Identity) ಅಸ್ತಿತ್ವದ ಪ್ರತ್ಯಯ ಜ್ಞಾನದಲ್ಲಿರುತ್ತದೆ.

ಅಂತಿಮದಿ ಅವನು ಉತ್ತಿಷ್ಠನಾದ ತನ್ನಾತ್ಮ ಸ್ಮರಣೆಗಾಗಿ
ದೇವತೆಯ ದಿವ್ಯ–ವಾತ್ಸಲ್ಯಪೂರ್ಣ ಭಾವದಲಿ ದಿಟ್ಟಿಯಾಗಿ
ಆ ಪರಮದೇವ ಪಡಿಮೂಡಿಕೊಳುವ ಸಾರೂಪ್ಯ ಪಡೆಯಲೆಂದು
ಮಾನವನ ಅಚ್ಚು ದೈವತ್ವದೆರಕದಲ್ಲವನು ಬೆಳಗುಗೊಂಡು
ಖೇಖದೌನ್ನತ್ಯದುತ್ತುಂಗದೆಡೆಯಿರುವ ಅವಳ ತಾಣಗಳಲಿ
ಕವಿದಿರುವ ಪರದೆ–ರಾಶಿಯನು ಅವಳು ತೆರೆತೆರೆಯುತಿಹಳು ಇಲ್ಲಿ
ಜೊತೆಜೊತೆಗೆ ಅವನ ಪಥಗಮನದಲ್ಲಿ ಸಾರ್ಥಕ್ಯವಿತ್ತು ಭಾವ
ಅವನ ಸಹವರ್ತಿಯಾಗುತಲಿ ಅವಳು ಅವಿಭಾಜ್ಯ ವಿಶ್ವ–ಜೀವ

**(ಸಾವಿತ್ರಿ; ದಳ 1 ರೇಣು 4 ಪುಟ 64)**

ಅತಿಮಾನಸ ಸ್ವಭಾವದ ಮಾನಸಿಕ ವ್ಯಾಖ್ಯಾನವು ಅತಿ ಅಮೂರ್ತವಾಗಿರುವ ಅದರ ಹಂತಗಳನ್ನು ಅಭಿವ್ಯಕ್ತಗೊಳಿಸುತ್ತದೆ, ಇಲ್ಲದಿದ್ದಲ್ಲಿ, ಅದು ವಾಸ್ತವದ ಸ್ಥಿತಿಗಿಂತ ಭಿನ್ನ ಸ್ವರೂಪದಲ್ಲಿಯೇ ನಿರ್ಮಿತಿಗೊಂಡಿರುವ ಕೆಲವು ಮಾನಸಿಕ ಆಕೃತಿಗಳನ್ನು(ಸಂಕೇತಗಳನ್ನು) ಕುರಿತು ಹೇಳುತ್ತಿದೆ. ಇವುಗಳನ್ನು ನೋಡಿದರೆ, ಸಾಧ್ಯವೇ ಇಲ್ಲವೇನೋ ಎನ್ನುವ ಭಾವ ಭಾಸವಾಗುತ್ತದೆ. ಆದ್ದರಿಂದ,

ಅತಿಮಾನಸೀಯ ಹಂತದ ಅಸ್ತಿತ್ವವು ಏನನ್ನು ನಿರ್ದೇಶಿಸುತ್ತದೆ ಅಥವಾ ಪೂರ್ವಾನುಭೂತಿಯನ್ನು ಮನಸ್ಸಿಗೆ ಹೇಗೆ ನೀಡುತ್ತಿದೆ, ಅದು ಹೇಗೆ ಕ್ರಿಯಾಪ್ರವೃತ್ತವಾಗಿರುತ್ತದೆ ಎನ್ನುವದನ್ನು ಕಾಣಬಹುದು.

ಹೀಗಾಗಿ, ಇಲ್ಲಿ, ಮಾನಸಿಕ ಚಿಂತನಗಳು(ಮನೋ ಚಿಂತನಗಳು) ಮತ್ತು ರೂಪಾಂತರಣಗಳು ಏನನ್ನೂ ನಿರ್ಧರಿಸುತ್ತಿಲ್ಲ, ಅಥವಾ ಯಾವುದೇ ಅಮುಖ್ಯವಾದ ವ್ಯಾಖ್ಯೆಯನ್ನಾಗಲೀ(ನಿರ್ವಚನವನ್ನಾಗಲೀ) ಇಲ್ಲವೇ ನಿರ್ಧರಣೆಯ ಹಂತಕ್ಕೂ ತಲುಪುವದಿಲ್ಲ. ಏಕೆಂದರೆ, ಇವು ಅತಿಮಾನಸ ಪ್ರಕೃತಿಯ ಅಂತರ್–ದರ್ಶನಕ್ಕೆ ಮತ್ತು ಅದರ ನಿಯಮ(ಋತ)ಗಳಿಗೆ ಸಾಕಷ್ಟು ಸಮೀಪದಲ್ಲಿ ಇರುವದಿಲ್ಲ. ಅದೇ ಅವಧಿಯಲ್ಲಿ ನಿಗಮನ ಪದ್ಧತಿಯ (Deduction) (ಸಾಮಾನ್ಯ ಮೂಲತತ್ವದಿಂದ ನಿರ್ದಿಷ್ಟ ವಿಷಯದ ಕಡೆಗೆ ಅಧ್ಯಯನದ) ಮೂಲಕ ಈ ಸ್ವಭಾವದ(ಗುಣದ) ವ್ಯತ್ಯಾಸವನ್ನು ಊಹಿಸಬಹುದಾಗಿದೆ. ಈ ಊಹೆಯು ಕನಿಷ್ಠ ಪಕ್ಷ ಅಧಿಮಾನಸದಿಂದ ಅತಿಮಾನಸದತ್ತ ಇರುವ ಪಥವನ್ನು, ಅಥವಾ ಆ ಪಥದ ಬಗೆಗೆ ಒಂದು ಸಾಮಾನ್ಯ ನಿರೂಪಣೆಯನ್ನು ರೂಪಿಸಬಹುದಾಗಿದೆ. ಮತ್ತು, ಈ ವಿಷಯದ ಕುರಿತಾಗಿ ವಿಕಾಸಾತ್ಮವಾಗಿಯೇ ಅಸ್ತಿತ್ವದಲ್ಲಿರುವ ಉನ್ಮನೀ ಮನೋಭಾವದ ಹಂತದ ಕುರಿತು ನಮ್ಮ ಸಲುವಾಗಿ ಒಂದು ಸಂದೇಹಾತ್ಮಕವಾದ ಅಭಿಪ್ರಾಯವನ್ನಾದರೂ ನಿರ್ಮಿಸಿಕೊಳ್ಳಬಹುದಾಗಿದೆ.

ಈ ಪಥವು ಒಂದು ಪ್ರಮುಖ ಹಂತವಾಗಿದ್ದು, ಇಲ್ಲಿಯೇ ಅತಿಮಾನಸ ವಿಜ್ಞಾನವು ಅಧಿಮಾನಸದಿಂದ ವಿಕಸನದ ಪ್ರಕ್ರಿಯೆಯ ಮುಂದಾಳತ್ವವನ್ನು ವಹಿಸಿಕೊಂಡು, ಜೊತೆಗೆ ತನ್ನದೇ ಆದ ಗುಣಾತ್ಮಕ ಆವಿರ್ಭಾವದ ಪ್ರಾಥಮಿಕ ಆಧಾರಗಳನ್ನು ರಚಿಸಿಕೊಳ್ಳಬಹುದಾಗಿದೆ. ಆದರೆ ಇದೇ ಸಮಯದಲ್ಲಿ ಅಜ್ಞಾನದ ಹಂತದಿಂದ ಪ್ರಾರಂಭಗೊಳ್ಳುವ ವಿಕಾಸದೆಡೆಯ ಬಿಂದುವು ಉತ್ತರೋತ್ತರವಾಗಿ ಜ್ಞಾನದಲ್ಲಿ ವಿಕಾಸವಾಗುವದರ ಕಡೆಗೆ ದೀರ್ಘಾವಧಿಯ ಸ್ಥಿತ್ಯಂತರಕ್ಕೆ ಸಿದ್ಧವಾಗಬೇಕಿದೆ.

ಇದು ನಿರ್ವಿಶೇಷತ್ವದ ಅಧಿಮಾನಸದ ಮತ್ತು ಉನ್ಮನೀ ಮನೋಭಾವದ ಅಸ್ತಿತ್ವಗಳು ತಮ್ಮದೇ ನಿಗದಿತ ಸ್ಥಾನದಲ್ಲಿ ಇರುವ ಹಂತದಲ್ಲಿ, ಪರಿಪೂರ್ಣ ಆತ್ಮಜ್ಞಾನದಲ್ಲಿ ಮತ್ತು ಆತ್ಮಸಾಫಲ್ಯದಲ್ಲಿ ಅದೂ ಕ್ಷಿಪ್ರವಾಗಿ ಲಭ್ಯವಾಗಿ, ಋತಚೇತನದ ಅಸ್ತಿತ್ವವನ್ನು ಸಾಕ್ಷಾತ್ಕರಿಸಲು, ದರ್ಶನ ಗ್ರಂಥವಾಗಿ – ಅಕ್ಷರದ

ಸಾಕ್ಷಾತ್ಕಾರವಾಗಿ – ಇರುತ್ತದೆ. ಹೀಗಾಗಿ ಇದು ಉನ್ಮನೀ ಮನೋಭಾವದ ಸಾಕ್ಷಾತ್ಕಾರದ ವಿಷಯವಾಗಿದ್ದು, ಇದೇ ಲೋಕಗಳ ವಿಕಾಸನಕ್ಕೆ ಅವತರಣಗೊಂಡು, ಪ್ರವೇಶಿಸಿ, ವಿಕಾಸದ ಹಂತದಲ್ಲಿ ತನ್ನನ್ನು ತಾನೇ ಅಲ್ಲಿ ರೂಪುಗೊಳಿಸಿಕೊಳ್ಳುತ್ತದೆ. ಜೊತೆಗೆ, ಲೌಕಿಕ ಸ್ವಭಾವದಲ್ಲಿ ಇರುವ ವಿಜ್ಞಾನದ ಬಲಗಳನ್ನು ಪ್ರಕಾಶನಗೊಳಿಸುತ್ತದೆ. ಇದು ಸರ್ವೇಸಾಮಾನ್ಯವಾಗಿ ಎಲ್ಲ ಲೌಕಿಕ–ಜೀವನದ ಮೂಲತತ್ವವೇ ಆಗಿದೆ. ಪಾರ್ಥಿವ–ತತ್ವದ ಅಸ್ತಿತ್ವದ ಪ್ರಕ್ರಿಯೆಯು ಸತ್–ಸ್ವರೂಪದಲ್ಲಿ ಇರುತ್ತದೆ. ಇದು ಪ್ರಪ್ರಥಮದ ಹಂತದಲ್ಲಿ ತನ್ನಲ್ಲಿ ತಾನೇ ಈ ವಿಷಯವನ್ನು ತಮೋಭಿಭೂತವಾಗಿ, ಅಸ್ಪಷ್ಟತೆಯಿಂದ, ನಿಷ್ಪ್ರಭೆಯಿಂದ ಕೂಡಿರುತ್ತದೆ.

---

ವಿವರಗಳಿಗೆ: ಶ್ರೀ ಅರವಿಂದರ 'ದಿವ್ಯ ಜೀವನ'/Homa Therapy–Our Last Chance, by Vasant Paranjape/ಶ್ರೀ ಅರವಿಂದರ 'ಸಾವಿತ್ರಿ

## ಶ್ರೀ ಅರವಿಂದರ 'ಸಾವಿತ್ರಿ'

## ಮುಂಚೂಣಿಯಲ್ಲಿ ಮಾರ್ಗದರ್ಶನದ ಪಥದಲ್ಲಿ ನಿಗದಿಯಾಗಿ

**– ಅನುವಾದ: ಪುಟ್ಟು ಕುಲಕರ್ಣಿ**

ಇಂತಿದೋ ಭವವು ಶಿವಮಯವೆ ಆಗಿ ತೆರೆತೆರೆದುಕೊಂಡು ನಿಂದು
ಮತ್ತಿದೋ ಸರ್ವ–ಸಾಮಾನ್ಯ ಭಾವ ಅನುಭಾವ ಹಂತಕಿಂದು
ಸುವಿಶಾಲ ವ್ಯಾಪ್ತ ಉನ್ನಯನಕೇರಿ ಸರ್ವಾಪ್ತ ಛಂದವಾಗಿ
ಸರ್ವಾತಿಸರ್ವ ಕರ್ಮ–ಲೀಲೆಗಳು ಕಾಂತಿಯಲಿ ತೊಳಗಿ ಮಿನುಗಿ

ಆ ಪರಮಭೂಮ ಪರಮಾತ್ಮ ಜ್ಯೋತಿ ಹೊಂಗಿರಣ ಬೆಳಗಿ ಬೆಳಗಿ
ಭವದ ಸರ್ವಸ್ವ ವಸ್ತು–ವಿಷಯದಲಿ ಮಂಗಳದ ಮಿಲನವಾಗಿ
ಆತ್ಮಜ್ಞಾನದಲಿ ಸಹಜ ಉಪಲಬ್ಧ ಚಿನ್ಮಯದ ಕಿರಣ–ಹಸ್ತ
ಭಾವಾನುಭಾವದುತ್ತುಂಗ ತಾಣಗಳನೀಗ ಸ್ಪರ್ಶಿಸುತ್ತ,

ಶ್ರುತಿ–ಪ್ರಕಾಶವದು ಪ್ರಜ್ವಲನದಲ್ಲಿ ಉದ್ದೀಪಗೊಂಡು ಈಗ
ಭಾವಾನುಭಾವದಂತರಾಳಗಳಲೀಗ ಸಂಚಲನ ರಾಗ;
ಸಂತ್ಯ ತಾನದುವು ಅವುಗಳಾ ಹೃದಯ ಸ್ಪಂದನದ ಮಿಡಿತವಾಗಿ
ಮುಂಚೂಣಿಯಲ್ಲಿ ಮಾರ್ಗದರ್ಶಕನ ಪಥದಲ್ಲಿ ನಿಗದಿಯಾಗಿ,

ಋತವೀಗ ಸತತ ಶಾಸನದ ಬಂಧದನುಬಂಧ ನಿಯತಿಯಾಗಿ
ಅವುಗಳಾ ಕರ್ಮ, ವಾಣಿಗಿದೊ ಮತ್ತೆ ಚಿಂತನಕೆ ಸಹಿತವಾಗಿ,
ತಮ್ಮಲ್ಲಿ ತಾವು ಅನುಭಾವದಲ್ಲಿ ಸ್ಪಂದಿಸುತ ಊರ್ಧ್ವದೆಡೆಗೆ
ಎತ್ತರೆತ್ತರಕೆ ಏರುತಲಿ ಈಗ ಗಗನ–ಮಂಡಲದ ಕಡೆಗೆ

ದೇವಾನುದೇವಗಣಕಿಂತ ಕೊಂಚ ಕೆಳ ಹಂತದಲ್ಲಿ ನಿಂದು
ಆಧಾರವೀಗ ಸಾವಿರದ ತಾಣದಂಚಿನೆಡೆ ತಲುಪಿತಿಂದು.

**(ದಳ 11 ರೇಣು – ಅಂತ್ಯ ತಾನಿರದ ಪರ್ವ, ಪುಟ 710)**

– – –

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 01–01–2023 ಭಾನುವಾರ ನೂತನ ವರ್ಷ ಆಚರಿಸಲಾಯಿತು. ತತ್ಸಬಂಧ ಬೆಳಿಗ್ಗೆ 10.00 ರಿಂದ 10.20 ವರೆಗೆ ಸಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ನಂತರ 10.30 ರಿಂದ 12.00 ವರೆಗೆ ಶ್ರೀ ಶಶಿಧರ್ ಚಿಕ್ಕ ವಾಸ್ತುಶಿಲ್ಪಿ ತಜ್ಞರು, "Sri Aurobindo - an Avatar & "The Kalki"?" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಅನೇಕರು ಭಾಗವಹಿಸಿದ್ದರು. "Flowers in Clock of Nature" ವಿಷಯ ಕುರಿತು ದಿನಾಂಕ 25ನೇ ಡಿಸೆಂಬರ್ 2022 ರಿಂದ 20ನೇ ಫೆಬ್ರವರಿ 2023 ವರೆಗೂ ಶ್ರೀ ಅರವಿಂದೋ ಸಂಕೀರ್ಣದ ಸಾಂಸ್ಕೃತಿಕ ಭವನದಲ್ಲಿ ಫೋಟೋ ಚಿತ್ರಪ್ರದರ್ಶನ ಆಯೋಜಿಸಲಾಗಿದೆ.

ದಿನಾಂಕ 04–01–2023 ರಂದು ಮಧ್ಯಾಹ್ನ 4.00 ರಿಂದ 5.00 ಗಂಟೆಗೆ ಮೀರಾಂಬಿಕಾ ಶಾಲೆ ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್, ಪ್ರಾಂಶುಪಾಲರು, ಶಿಕ್ಷಕರು, ಬೋಧಕೇತರ ಸಿಬ್ಬಂದಿ ವರ್ಗದವರು ಮತ್ತು ಶ್ರೀ ಅರವಿಂದ ಸಂಕೀರ್ಣ ಟ್ರಸ್ಟ್ ಸದಸ್ಯರು ಹಾಜರಿದ್ದರು. ಶಿಕ್ಷಕರು ಸಂಸ್ಥಾಪಕರ ದಿನದ ಮಹತ್ವವನ್ನು ಕುರಿತು ಮಾತನಾಡಿದರು ಹಾಗೂ ಶಾಲೆಯ ಸಂಸ್ಥಾಪನೆಗೆ ದುಡಿದ ಸ್ಥಾಪಕರು ಮತ್ತು ಸಹ ಸಂಸ್ಥಾಪಕರನ್ನು ಸ್ಮರಿಸಿದರು. ಕಾರ್ಯಕ್ರಮವು ಒಂದು ನಿಮಿಷದ ಧ್ಯಾನದೊಂದಿಗೆ ಮುಕ್ತಾಯವಾಯಿತು.

ದಿನಾಂಕ 21–01–2023 ಶ್ರೀ ಅರವಿಂದೋ ಸೊಸೈಟಿ, ಪಾಂಡಿಚೇರಿಯಲ್ಲಿ ಆಯೋಜಿಸಿದ ಸಮಗ್ರ ಶಿಕ್ಷಣ ಕಾರ್ಯಾಗಾರದಲ್ಲಿ ಮೀರಾಂಬಿಕಾ ಶಾಲೆಯ ಶಿಕ್ಷಕರು ಭಾಗವಹಿಸಿದ್ದರು. ಕಾರ್ಯಾಗಾರವನ್ನು ಶ್ರೀ ಅರವಿಂದೋ ಸೊಸೈಟಿ ಸಮಗ್ರ ಶಿಕ್ಷಣ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶಿವಕುಮಾರ್ ಮತ್ತು ಶ್ರೀಮತಿ ಪ್ರೀತಿರವರು ನಡೆಸಿಕೊಟ್ಟರು. ಕಾರ್ಯಾಗಾರದಲ್ಲಿ ಸಂಕ್ರಾಂತಿ ಹಬ್ಬದ ಆಚರಣೆ ವಿಷಯವನ್ನು

ಶಿಕ್ಷಕರಿಕೆ ಸ್ಥಳದಲ್ಲೇ ವಿಶಿಷ್ಟವಾಗಿ ಚಿತ್ರಿಸಿ, ಅದನ್ನು ಪ್ರಸ್ತುತಪಡಿಸಲು ತಿಳಿಸಲಾಗಿತ್ತು. ಶಿಕ್ಷಕರು ಉತ್ಸಾಹದಿಂದ ಭಾಗವಹಿಸಿ ತಮಗೆ ಕೊಟ್ಟ ಕಾರ್ಯವನ್ನು ಅಚ್ಚುಕಟ್ಟಾಗಿ ಪ್ರದರ್ಶಿಸಿ ವಿಷಯವನ್ನು ಮಂಡಿಸಿದರು.

ಶ್ರೀ ಶಿವಕುಮಾರ್‌ರವರು ಶಿಕ್ಷಕ ಮತ್ತು ಶಿಕ್ಷಕಿಯರನ್ನು ಕುರಿತು ಸಮಗ್ರ ಶಿಕ್ಷಣವನ್ನು ತಮ್ಮ ಪಠ್ಯಕ್ರಮದಲ್ಲಿ ಹೇಗೆ ಅಳವಡಿಸಿಕೊಂಡು ಬೋಧಿಸಬೇಕೆಂದು ಸವಿಸ್ತಾರವಾಗಿ ತಿಳಿಸಿಕೊಟ್ಟರು.




ಕಾರ್ಯಾಗಾರದ ಅಧ್ಯಕ್ಷತೆಯನ್ನು ಶ್ರೀ ಅರವಿಂದೋ ಸೊಸೈಟಿ ಅಧ್ಯಕ್ಷರಾದ ಶ್ರೀಯುತ ಪ್ರದೀಪ್ ನಾರಂಗ್ ವಹಿಸಿದರು. ಶ್ರೀಯುತರು ಶಿಕ್ಷಕರನ್ನು ಉದ್ದೇಶಿಸಿ ಕೆಲವು ಉಪಯುಕ್ತ ಸಲಹೆಗಳನ್ನು ನೀಡಿ, ಅದನ್ನು ಶಿಕ್ಷಣದಲ್ಲಿ ಅಳವಡಿಸಿಕೊಂಡು ವಿದ್ಯಾರ್ಥಿಗಳಿಗೆ ಶ್ರೀ ಅರವಿಂದರ ಸಮಗ್ರ ಶಿಕ್ಷಣದ ಮೂಲಕ ಬೋಧನೆ ಮಾಡಬೇಕೆಂದು ತಿಳಿಸಿದರು. ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್‌ರವರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ದಿನಾಂಕ 26–01–2023 ಗುರುವಾರ ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಾಲೆಯಲ್ಲಿ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಪ್ರಾಂಶುಪಾಲರು ಧ್ವಜಾರೋಹಣ ಮಾಡಿದರು. ಶಾಲಾ ವಿದ್ಯಾರ್ಥಿ ವೃಂದ ದೇಶಭಕ್ತಿ ಗೀತೆ ಮತ್ತು ಗಣರಾಜ್ಯದ ಮಹತ್ವ ಕುರಿತು ಭಾಷಣ ಮಾಡಿದರು. ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಂದೇಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |
| 35 | ಶಿಕ್ಷಣ |
| 36 | ಯೋಗಾರಂಭ |



ಫೋಟೊ: ಇಮೇಜಿಂಗ್ ಸಾವಿತ್ರಿ

'ಮುಂಚೂಣಿಯಲ್ಲಿ ಮಾರ್ಗದರ್ಶನದ ಪಥದಲ್ಲಿ ನಿಗದಿಯಾಗಿ'

**– ಪುಟ್ಟು ಕುಲಕರ್ಣಿ**
**(ಪುಟ ಸಂಖ್ಯೆ 52)**

**RNI No. 22511/1971**
No. of Pages **56 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ನಾಮರಾಹಿತ್ಯದಲಿ ಅವಳು ಅವನ ಸುತ್ತ ಮಂಡಲದಿ ನಿಂದು
ಅನಂತತೆಯಲ್ಲಿ ಲಹರಿಯುದಿತದಲಿ ಅವಳೀಗ ವ್ಯಾಪ್ತಗೊಂಡು,
ಅವಳಾತ್ಮ ತತ್ವ ಪರಿಪೂರ್ಣಗೊಂಡು ಅವನಾತ್ಮ ತತ್ವದಲ್ಲಿ,
ಯುಗ–ಯುಗಗಳಲ್ಲು ಸಮೃದ್ಧಿಗೊಂಡು ಘನಮೌಲ್ಯವಾಯಿತಿಲ್ಲಿ,
ಆ ದಿವ್ಯಪ್ರೇಮ ಸಾವಿರದ ಚಣವ ತಾ ದರ್ಶಗೊಂಡ ತೆರದಿ
ಶಾಶ್ವತದ ಧವಳ ಆ ಶುಭ್ರ–ಹವಳ ಆ ಶ್ವೇತಕೋಶದಲ್ಲಿ

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ ‘ಸಾವಿತ್ರಿ’; ದಳ 9 ರೇಣು 1 ಪುಟ 579)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.